ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಆಗಸ್ಟ್ 3 ಭಾನುವಾರ 2025

₹4

ಸಂಪುಟ: 46 | ಸಂಚಿಕೆ: 108 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ರಾಜ್ಯ ಮಟ್ಟದ ಸುಗಮ ಸಂಗೀತ ಸಮ್ಮೇಳನ ಗೀತೋತ್ಸವಕ್ಕೆ ಚಾಲನೆ

● ಕವಿಗಳು, ಕಲಾವಿದರು, ಗಾಯಕರ ಸಂಗಮ ● ಅದ್ದೂರಿ ಮೆರವಣಿಗೆಯಲ್ಲಿ ಸಂಗೀತ ಸಮ್ಮೇಳನಾಧ್ಯಕ್ಷರಾದ ಶ್ರೀನಿವಾಸ ಉಡುಪ ದಂಪತಿಗೆ ಗೌರವ ● ಸುಗಮ ಸಂಗೀತಕ್ಕೆ ಪ್ರತ್ಯೇಕ ಅಕಾಡೆಮಿ ಬೇಡಿಕೆ



ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಆರಂಭವಾದ 19ನೇ ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನಕ್ಕೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಚಾಲನೆ ನೀಡಿದರು.

ಮೈಸೂರು, ಆ.2(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ 'ಗೀತೋತ್ಸವ–2025' 19ನೇ ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನದಲ್ಲಿ ಸುಗಮ ಸಂಗೀತದ ಸುಧೆಯೇ ಹರಿದು ಬಂತು.

ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆರಂಭವಾದ ಸುಗಮ ಸಂಗೀತ ಸಮ್ಮೇಳನದಲ್ಲಿ ರಾಜ್ಯದ ವಿವಿಧೆಡೆಯಿಂದ ಕವಿಗಳು, ಕಲಾವಿದರು, ಹಿರಿಯ–ಕಿರಿಯ ಗಾಯಕರು ಪಾಲ್ಗೊಂಡಿದ್ದು, ಸುಗಮ ಸಂಗೀತದ ರಸದೌತಣ ಉಣ ಬಡಿಸಿ, ಸಂಗೀತ ಪ್ರಪಂಚವನ್ನು ಅನಾವರಣಗೊಳಿಸಿದರು.

ಸಂಗೀತ ಸಮ್ಮೇಳನಾಧ್ಯಕ್ಷ ಶ್ರೀನಿವಾಸ ಉಡುಪ ದಂಪತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಓವೆಲ್ ಮೈದಾನದ ಬಳಿಯಿಂದ ಕಲಾಮಂದಿರದವರೆಗೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಅಲಂಕೃತ ತೆರೆದ ವಾಹನದಲ್ಲಿ ಕಲಾ ದಿಬ್ಬಣದೊಂದಿಗೆ ವರ್ಣರಂಜಿತ ಮೆರವಣಿಗೆಯಲ್ಲಿ ಕರೆತರಲಾಯಿತು. ಬಳಿಕ ಸುಚಿತ್ರಾ ಕಲಾ ಗ್ಯಾಲರಿಯಲ್ಲಿ ಆಯೋಜಿಸಿದ್ದ ಕವಿ–ಕಲಾವಿದರ ಛಾಯಾಚಿತ್ರ ಪ್ರದರ್ಶನ ಗಮನ ಸೆಳೆಯಿತು.

ಸುಗಮ ಸಂಗೀತಕ್ಕೆ ಪ್ರತ್ಯೇಕ ಅಕಾಡೆಮಿ ಅಗತ್ಯ: ಸುಗಮ ಸಂಗೀತ ಸಮ್ಮೇಳನಕ್ಕೆ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಚಾಲನೆ ನೀಡಿ ಮಾತನಾಡಿದ ಅವರು, ಇಂದು ನಡೆಯುತ್ತಿರುವ ಸುಗಮ ಸಂಗೀತ ಸಮ್ಮೇಳನ ಜೀವನದ ನಾಡಿ ಹಿಡಿಯುವ, ಜನರಿಗೆ ಖುಷಿ ನೀಡುವ ಸಾಂಸ್ಕೃತಿಕ ಸಮ್ಮೇಳನವಾಗಿದೆ. ದೇಶದಲ್ಲೇ ಕರ್ನಾಟಕ ಸುಗಮ ಸಂಗೀತಕ್ಕೆ ಹೆಸರಾಗಿದೆ. ಕನ್ನಡ ನುಡಿಯ ಸೊಗಸನ್ನು ತಿಳಿಸುವ ಸುಗಮ ಸಂಗೀತವು ಡಿಜಿಟಲ್ ಯುಗದಲ್ಲೂ ಹೊಸ ರೂಪದಲ್ಲಿ ಮೂಡಿಬರುತ್ತಿದೆ. ಸಾಹಿತ್ಯದ ಸ್ಪಷ್ಟ ಉಚ್ಚಾರಣೆಯೊಂದಿಗೆ ಕಡಿಮೆ ಆಡಂಬರದ ಗಾಯನವೇ ಸುಗಮ ಸಂಗೀತ. ಈ ಸಂಗೀತದಿಂದ ಬದುಕು ಹಸನಾಗುತ್ತದೆ. ಜನರ ಆಯಸ್ಸು ಹೆಚ್ಚುತ್ತದೆ. ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಸಮ್ಮೇಳನಕ್ಕೆ ನೆರವಾಗುವಂತೆ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದೆ. ಪ್ರಗತಿಪರ ಚಿಂತನೆಯುಳ್ಳ ಅವರು, 25 ಲಕ್ಷ ರೂ. ಬಿಡುಗಡೆ ಮಾಡಿದರು. ಸುಗಮ ಸಂಗೀತಕ್ಕೆ ಪ್ರತ್ಯೇಕ ಅಕಾಡೆಮಿ ಸ್ಥಾಪನೆಯ ಅವಶ್ಯಕತೆ ಇದ್ದು, ಮುಂದಿನ ದಿನಗಳಲ್ಲಿ ಪ್ರತ್ಯೇಕ ಅಕಾಡೆಮಿ ಸ್ಥಾಪನೆಯಾಗುವ ವಿಶ್ವಾಸವಿದೆ ಎಂದರು.

ಸಮ್ಮೇಳನಾಧ್ಯಕ್ಷ ನಗರ ಶ್ರೀನಿವಾಸ ಉಡುಪ ಮಾತನಾಡಿ, ಸುಗಮ ಸಂಗೀತ ಕ್ಷೇತ್ರಕ್ಕಾಗಿ ಶ್ರಮಿಸಿದ ಮಹನೀಯರನ್ನು ಸ್ಮರಿಸಬೇಕು. ಸುಗಮ ಸಂಗೀತವು ಕ್ರಮಬದ್ಧ ಧ್ವನಿ ತರಂಗಗಳ, ಹಾಡುವ, ನುಡಿಸುವ ಕಲಾ ಮಾಧ್ಯಮ. ಸಕಲ ಕಲೆಗಳಲ್ಲಿ ಶ್ರೇಷ್ಠವಾದ ಕಲೆ ಇದು. ನೇರವಾಗಿ ಕಲೆಗಳ ಮೂಲಕ ಹೃದಯಕ್ಕೆ ಪ್ರವಹಿಸುವ ಮಧುರ ನಿನಾದ. ಎಂತಹ ನೋವಿದ್ದರೂ ಅನಿರ್ವಚನೀಯ ಆನಂದದ ಕಡೆಗೆ ಒಯ್ಯುವ ಶಕ್ತಿ ಹೊಂದಿದೆ. ಅದರಲ್ಲೂ ವಿಶೇಷವಾಗಿ ನಾಡಿದ ಕವಿಶ್ರೇಷ್ಠರ ಆಶಯಗಳನ್ನು ಜನಸಾಮಾನ್ಯರ ಹೃದಯ ಸಿಂಹಾಸನದಲ್ಲಿ ಸ್ಥಾಪಿಸುವ ಮಹಾನ್ ಶಕ್ತಿ ಸುಗಮ ಸಂಗೀತಕ್ಕಿದೆ. ಇದಕ್ಕೂ ಸಾಹಿತ್ಯಕ್ಕೂ ಅವಿನಾಭಾವ ಸಂಬಂಧವಿದೆ ಎಂದು ಪ್ರತಿಪಾದಿಸಿದರು.

ಸುಗಮ ಸಂಗೀತದಲ್ಲಿ ಮುಖ್ಯವಾಗಿ ಮೂರು ಕವಲುಗಳನ್ನು ನೋಡುತ್ತೇವೆ. ಸಂಗೀತಕ್ಕೆ, ಭಾವಸಂಪತ್ತಿಗೆ ಹಾಗೂ ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಡುವುದು ಕಂಡು ಬರುತ್ತದೆ. ವಚನಗಳನ್ನು, ಅನುಭಾವ ಪದಗಳನ್ನು ಸುಗಮ ಸಂಗೀತ ಶೈಲಿಯಲ್ಲಿ ಹಾಡಿದಾಗ ಅವು ಹೆಚ್ಚು ಅರ್ಥಪೂರ್ಣವಾಗಿ ಸಂವಹನಗೊಳ್ಳುತ್ತವೆ. ನಾಡಿನ ಹೆಮ್ಮೆಯ ಸುಗಂಧವನ್ನು ಹರಡುವ ಕಾವ್ಯ, ಸುಗಮ ಸಂಗೀತದಿಂದ ಜನಸಾಮಾನ್ಯರಿಗೆ ಹತ್ತಿರವಾಗುತ್ತಿರುವುದು ನಿಜಕ್ಕೂ ಆಶಾದಾಯಕವಾಗಿದೆ. ಜನರು 3–4 ಗಂಟೆಗಳವರೆಗೂ ಕುಳಿತು ಕೇಳುವುದನ್ನು ಕಾಣುತ್ತೇವೆ ಎಂದರು.

ಸನ್ಮಾನ: ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕಲಾವಿದ ರಾಜಶೇಖರ ಕದಂಬ, ಬ್ರಾಹ್ಮಣ ಸಮಾಜದ ಮುಖಂಡ ಕೆ.ರಘುರಾಂ ವಾಜಪೇಯಿ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕವಿ ಜಯಪ್ಪ ಹೊನ್ನಾಳಿ ಅವರನ್ನು ಸನ್ಮಾನಿಸಲಾಯಿತು. ಗೀತ ಸಂಗಮ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರರು ಕಾರ್ಯಕ್ರಮಕ್ಕೆ ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಸಮ್ಮೇಳನಾಧ್ಯಕ್ಷ ನಗರ ಶ್ರೀನಿವಾಸ ಉಡುಪ, ಶಾಸಕ ಟಿ.ಎಸ್. ಶ್ರೀವತ್ಸ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ, ಗಾಯಕರಾದ ಕಿಕ್ಕೇರಿ ಕೃಷ್ಣಮೂರ್ತಿ, ರತ್ನಮಾಲ ಪ್ರಕಾಶ್, ನಾ. ದಾಮೋದರ ಶೆಟ್ಟಿ, ಕೆ.ಎಸ್. ಸುರೇಖಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯತ್ರಿ, ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ನಾಗರಾಜ್ ವಿ. ಬೈರಿ, ಗಂಗಾಧರಪ್ಪ ಸಿರಿಬಾಲು, ಬೆಟ್ಟೇಗೌಡ, ಮಹದೇವ್, ಡಾ.ವೈ.ಡಿ. ರಾಜಣ್ಣ, ರಾಜಶೇಖರ ಕದಂಬ, ನಾರಾಯಣಗೌಡ, ವೀರೇಶ್, ಮಡ್ಡಿಕೆರೆ ಗೋಪಾಲ್ ಇನ್ನಿತರಿದ್ದರು.

ರಾಜ್ಯದಲ್ಲಿ ಸುಗಮ ಸಂಗೀತ ಅಕಾಡೆಮಿ ಸ್ಥಾಪನೆ ಸಂಬಂಧ ಶೀಘ್ರ ಸೂಕ್ತ ನಿರ್ಧಾರ

ಮೈಸೂರು: ರಾಜ್ಯದಲ್ಲಿ ಸುಗಮ ಸಂಗೀತ ಅಕಾಡೆಮಿ ಸ್ಥಾಪಿಸುವ ಸಂಬಂಧ ಚರ್ಚಿಸಿ ಸೂಕ್ತ ತೀರ್ಮಾನ ಪ್ರಕಟಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭರವಸೆ ನೀಡಿದ್ದಾರೆ.

ಕಲಾಮಂದಿರದಲ್ಲಿ ನಡೆದ ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ನನ್ನ ಅನುಪಸ್ಥಿತಿಯಲ್ಲಿ ನ್ಯಾ. ಗೋಪಾಲಗೌಡರು ಉದ್ಘಾಟಿಸಿರುವುದು ಸಂತೋಷವನ್ನುಂಟು ಮಾಡಿದೆ. ಪ್ರಗತಿಪರ ಆಲೋಚನೆಯುಳ್ಳ, ಸಂವಿಧಾನ ಬದ್ಧವಾಗಿ ಕೆಲಸ ಮಾಡುವ ಗೋಪಾಲಗೌಡರಿಂದ ಉದ್ಘಾಟನೆಗೊಂಡಿರುವುದು ಸಂತೋಷದ ಸಂಗತಿ. ಸಂಗೀತ ಮತ್ತು ಸಾಹಿತ್ಯದ ಮಿಲನ ಜನರ ಜೀವನವನ್ನು ಉಲ್ಲಾಸಿತಗೊಳಿಸುತ್ತದೆ. ಈ ಸಮ್ಮೇಳನದಲ್ಲಿ ಅತಿರಥ–ಮಹಾರಥರು ವಿವಿಧೆಡೆಯಿಂದ ಆಗಮಿಸಿದ್ದಾರೆ. ಸಂಗೀತಕ್ಕೆ ಮೈಸೂರು ಅರಸರಿಂದ ಹೆಚ್ಚು ಬೆಂಬಲ ದೊರಕಿತು. ಈಗಾಗಲೇ ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ ಇದೆ. ಇದನ್ನು ಪ್ರತ್ಯೇಕಿಸಬೇಕೇ ಅಥವಾ ಹಾಗೆಯೇ ಉಳಿಸಬೇಕೇ ಎಂಬುದನ್ನು ಕೂಲಂಕುಷವಾಗಿ ಚರ್ಚಿಸಿ ತೀರ್ಮಾನಿಸುವುದಾಗಿ ಹೇಳಿದರು.

ಮನವಿ ಪತ್ರ ಸಲ್ಲಿಕೆ...



ಮಂಡ್ಯ ಜಿಲ್ಲಾ ಕೆಡಿಪಿ ಸಭೆಯಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಅವರಿಗೆ ಬಿಎಸ್ಸಿ ಫಾರೆಸ್ಟ್ರಿ ಪದವಿಯನ್ನು ದಕ್ಷಿಣ ಶಿಕ್ಷಕರ ಕ್ಷೇತ್ರ ವ್ಯಾಪ್ತಿಯಲ್ಲಿ (ಕೃಷಿ ವಿಶ್ವವಿದ್ಯಾನಿಲಯದಡಿ) ಆರಂಭಿಸುವಂತೆ ಎಂಎಲ್‌ಸಿ ಕೆ.ವಿವೇಕಾನಂದ ಮನವಿ ಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕರು ಹಾಗೂ ಚೆಸ್ಕಾಂ ಅಧ್ಯಕ್ಷರೂ ಆದ ರಮೇಶ್ ಬಂಡಿಸಿದ್ದೇಗೌಡರು ಉಪಸ್ಥಿತರಿದ್ದರು.

ಮೃಗಾಲಯ ಪ್ರವೇಶ ದರ ಏರಿಕೆ ಕೈ ಬಿಡುವಂತೆ ಹೋಟೆಲ್ ಮಾಲೀಕರ ಸಂಘ ಆಗ್ರಹ



ಮೈಸೂರು, ಆ.2(ಎಂಕೆ)– ಮೈಸೂರಿನ ಮೃಗಾಲಯದಲ್ಲಿ ಟಿಕೆಟ್ ದರ ಹೆಚ್ಚಳ ಮಾಡಿರುವುದಕ್ಕೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಪ್ರವೇಶದಿಂದ ಬರುವ ಆದಾಯ ಮೃಗಾಲಯದ ಎಲ್ಲಾ ಖರ್ಚು–ವೆಚ್ಚಗಳ ಸರಿದೂಗಿಸಲು ಈಗಾಗಲೇ ಸಾಕಾಗುತ್ತಿದೆ. ಆದಾಗ್ಯೂ ಏಕಾಏಕಿ ಟಿಕೆಟ್ ದರ ಹೆಚ್ಚಳ ಮಾಡಿರುವುದು ಸರಿಯಲ್ಲ. ಟಿಕೆಟ್ ದರ ಹೆಚ್ಚಿಸುವ ಮೊದಲು ಮೃಗಾಲಯದ ಆದಾಯ ಮತ್ತು ಖರ್ಚನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಬೇಕು ಎಂದಿದ್ದಾರೆ. ಸರ್ಕಾರ ಪ್ರವಾಸೋದ್ಯಮ ಬೆಳೆಯಲು ಉತ್ತೇಜನ ನೀಡಿ ಅನುಕೂಲ ಮಾಡಿಕೊಡಬೇಕು. ಆದರೆ, ಆದಾಯಕ್ಕೆ ಟಿಕೆಟ್ ದರಗಳನ್ನು ಹೆಚ್ಚಿಸಿರುವುದು ಸರಿಯಲ್ಲ. ಅರಮನೆ, ಕೆಆರ್‌ಎಸ್ ಪ್ರವೇಶ ದರಗಳನ್ನು ಕಳೆದ 8 ತಿಂಗಳ ಹಿಂದೆಯಷ್ಟೇ ಹೆಚ್ಚಿಸಲಾಗಿದ್ದು, ಅದರಿಂದಲೂ ಆದಾಯ ಬರುತ್ತಿದೆ. ಆದುದರಿಂದ ಮೃಗಾಲಯ ಪ್ರಾಧಿಕಾರದ ಆಡಳಿತ ಮಂಡಳಿ ಹೆಚ್ಚಿಸಿರುವ ಪ್ರವೇಶ ಟಿಕೆಟ್ ದರವನ್ನು ಕೂಡಲೇ ಕೈ ಬಿಡಬೇಕೆಂದು ಒತ್ತಾಯಿಸಿದ್ದಾರೆ.

ಕಾರ್ಯಕ್ರಮ ಉದ್ಘಾಟನೆ...



ಮೈಸೂರು ವಕೀಲರ ಸಂಘದ ಕಚೇರಿಯಲ್ಲಿ ಆಯೋಜಿಸಿದ್ದ ಮೈಸೂರು ವಕೀಲರ ಸಂಘದ ಬಾಗಿಲಿಗೆ ಕರ್ನಾಟಕ ರಾಜ್ಯ ವಕೀಲರ ಪರಿಷತ್ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಅಧ್ಯಕ್ಷ ಮಿಟ್ಟಲಕೋಡ ಎಸ್.ಎಸ್. ಅವರು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಪರಿಷತ್ತಿನ ಮಾಜಿ ಅಧ್ಯಕ್ಷ ಎಚ್.ಎಲ್.ವಿಶಾಲ್ ರಘು, ಸದಸ್ಯರಾದ ಚಂದ್ರಮೌಳಿ ಬಿ.ಆರ್., ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಸುಧೀರ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಪದಾಧಿಕಾರಿಗಳು ಹಾಗೂ ಸಂಘದ ಸದಸ್ಯರು ಉಪಸ್ಥಿತರಿದ್ದರು.

ಯಶಸ್ವಿ ಮಹಿಳಾ ಉದ್ಯಮಿಗೆ ಅಭಿನಂದನೆ



ಮೈಸೂರಿನ ಆದಿಶಕ್ತಿ ಕಾಳಮ್ಮ ಬಂದಂತಮ್ಮ ಕಲ್ಯಾಣ ಮಂಟಪದಲ್ಲಿ ನಡೆದ ಆದಿಚುಂಚನಗಿರಿ ಒಕ್ಕಲಿಗ ಮಹಿಳಾ ಸಮಾಜದ 25ನೇ ವಾರ್ಷಿಕೋತ್ಸವದಲ್ಲಿ ಸಮಾಜ ಸೇವೆ ಪರಿಗಣಿಸಿ ಉದ್ಯಮಿ ಶ್ರೀಮತಿ ಖುಷಿ ವಿನು ಅವರನ್ನು ಡಾ.ನಿರ್ಮಲಾನಂದ ನಾಥ ಸ್ವಾಮೀಜಿ ಅಭಿನಂದಿಸಿದರು. ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ ಇದ್ದರು.

ಇಂದು ಪರೀಕ್ಷಾ ಕೇಂದ್ರಗಳ ಸುತ್ತಲೂ ನಿಷೇಧಾಜ್ಞೆ

ಮೈಸೂರು,ಆ.2– ಆಗಸ್ಟ್ 3 ರಂದು ಮೈಸೂರು ನಗರದ 2 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿರುವ ನೀಟ್–ಪಿಜಿ ಪ್ರವೇಶ ಪರೀಕ್ಷೆಯ, ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ನಿಷೇಧಾಜ್ಞೆಯನ್ನು ರಾತ್ರಿಯನ್ನು ಜಾರಿ ಮಾಡಲಾಗಿದೆ. **ಪರೀಕ್ಷಾ ಕೇಂದ್ರಗಳು:** ICON digital Zone, IDZ Hebbal Jyothigamaya Mansion, 299/D, Hebbal Industrial Area, Opp Bharath Cancer hospital, mysuru., Chandana Resource Center, Sathagalli KSRTC Bus stand Complex, 3rd floor, Mahadevapura main road, mysuru.

ಈ ಪ್ರದೇಶದಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರು ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷೆ ಕೇಂದ್ರಗಳ ಸುತ್ತಮುತ್ತಲಿನ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು: ಹೊನ್ನುಸಿರಿ ವಿವಿಧೋದ್ದೇಶ ಸಹಕಾರ ಸಂಘದಿಂದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದವರು ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ. 0821–4253655, ಮೊ. 9741930447 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.08.2025 ಭಾನುವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025ರಿಂದ 16.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಅನುರಾಧ, ರಾಹುಕಾಲ: ಸಂಜೆ 4.30ರಿಂದ 6 ರವರೆಗೆ

■ **ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀ ಕರುಮಾರಿಯಮ್ಮನವರ ದೇವಸ್ಥಾನ ಟ್ರಸ್ಟ್ :** 95ನೇ ವರ್ಷದ ವಿಶೇಷ ಕರಗ ಮಹೋತ್ಸವ, ಬೆಳಗ್ಗೆ 8 ಗಂಟೆಗೆ ಕರಗ ಉತ್ಸವವು ಕರಗ ದೇವಸ್ಥಾನದಿಂದ ಹೊರಟು ಚಾಮುಂಡಿಪುರಂ, ಕೃಷ್ಣಮೂರ್ತಿಪುರಂ, ನಂಜುಮಳಿಗೆ ವೃತ್ತಗಳಲ್ಲಿ ಮೆರವಣಿಗೆ, ಮಧ್ಯಾಹ್ನ 3 ಗಂಟೆಗೆ ದೇವಸ್ಥಾನದಲ್ಲಿ ಪೂಜೆಗಳು ಮತ್ತು ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ವಿದ್ಯಾರಣ್ಯಪುರಂ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಅರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಸಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ ಚಿಕಿತ್ಸಾ ಶಿಬಿರ, ಕೊಬ್ಬಿನ ಗಂಟು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಕಾನೂನು ಕಾಲೇಜು :** ದೀಕ್ಷಾರಂಭ, ಪುನಶ್ಚೇತನ ಕಾರ್ಯಕ್ರಮ, ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ, ಬೆಳಗ್ಗೆ 9ಕ್ಕೆ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜೆ, ಸ್ಥಳ: ದೇವಸ್ಥಾನದ ಆವರಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಮೈಸೂರು ಘಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ರಾಜ್ಯಮಟ್ಟದ ಸುಗಮ ಸಂಗೀತ ಸಮ್ಮೇಳನ 'ಗೀತೋತ್ಸವ–2025', ಬೆಳಗ್ಗೆ 10ಕ್ಕೆ ನವ ಅನ್ವೇಷಣೆ, ಉಪಸ್ಥಿತರು: ಶಶಿಧರ ನರಸಿಂಹಮೂರ್ತಿ, ಇಂಚರ ಬಿ.ಆರ್., ಪ್ರಕೃತಿ ಆರ್, ನಿಶ್ಚಯ್ ಜೈನ್, ಸಿರಿಗೌರಿ, ಸಾಕೇತ್ ಶಾಸ್ತ್ರಿ, ಸಂಗೀತ್ ಯೋಗೀಶ್, ಬೆಳಗ್ಗೆ 11ಕ್ಕೆ ನವ್ಯ–ನವೋದಯ ಕವಿಗೀತೆಗಳು, ಮಧ್ಯಾಹ್ನ 12ಕ್ಕೆ ರಾಗಾಧಾರಿತ ಗೀತೆಗಳು, ಮಧ್ಯಾಹ್ನ 3 ರಿಂದ ಕವಿ ಎಂ.ಎನ್. ವ್ಯಾಸರಾವ್ ವಿರಚಿತ–ಗೀತ ನೃತ್ಯ, ಮಧ್ಯಾಹ್ನ 3.30ಕ್ಕೆ ಕವಿಯ ನೋಡಿ–ಕವಿತೆ ಕೇಳಿ, ಸಂಜೆ 4.30ಕ್ಕೆ ಸಂಸ್ಮರಣೆ, ಸಂಜೆ 5.30ಕ್ಕೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ನಾಡೋಜ ಡಾ. ಹಂಪ ನಾಗರಾಜಯ್ಯ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಸಿ. ಸೋಮಶೇಖರ್, ಮುಖ್ಯ ಅತಿಥಿಗಳು : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಸಂಜೆ 6.15ಕ್ಕೆ ಒಂದು ಸಾಲಿನ ಕವಿತೆ, ಸಂಜೆ 6.30ಕ್ಕೆ ಗೀತ ಸಂಗೀತ, ಸ್ಥಳ: ಕಲಾಮಂದಿರ.

■ **ಪರಿವರ್ತನ ಬ್ಯುಸಿನೆಸ್ ಸ್ಕೂಲ್ :** ಸೈಬರ್ ಸೆಕ್ಯೂರಿಟಿ ಓರಿಯೆಂಟೇಷನ್, ಭಾಗವಹಿಸುವವರು : ಕೋರ್ಸ್‌ನ ನಿರ್ದೇಶಕ ಡಾ. ಎ.ಎಂ. ಸುಧಾಕರ, ಸ್ಥಳ: ಸ್ಕೂಲ್ ಆವರಣ, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಮಹಿಳಾ ಕಾಲೇಜು, ಪರೀಕ್ಷಾ ಸ್ಪೂರ್ತಿ ಫೌಂಡೇಶನ್ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ :** ರಾಜ್ಯಮಟ್ಟದ ಪರೀಕ್ಷಾ ಸ್ಪೂರ್ತಿ ಗುರು ಶ್ರೇಷ್ಠ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಗುಂಡ್ಲುಪೇಟೆ ಶಾಸಕ ಗಣೇಶ್ ಪ್ರಸಾದ್, ಉದ್ಘಾಟನೆ : ವಿಧಾನಪರಿಷತ್ ಸದಸ್ಯ ವಿವೇಕಾನಂದ, ಉಪಸ್ಥಿತರು : ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀವತ್ಸ, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಉಪ ನಿರ್ದೇಶಕ ನಿರಂಜನಮೂರ್ತಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಇಫೀಮೆಡ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎ. ಸುಧೀಂದ್ರ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10ಕ್ಕೆ.

■ **ಮೈಸೂರು ಸಿಟಿ ಗಾಂಧಿನಗರ ಆದಿಕರ್ನಾಟಕ ಅಭಿವೃದ್ಧಿ ಸಂಘ :** ಪ್ರತಿಭಾ ಪುರಸ್ಕಾರ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು : ವಿಧಾನಪರಿಷತ್ ಸದಸ್ಯ ಕೆ. ವಿವೇಕಾನಂದ, ಎಸ್ಪಿ ಎನ್. ವಿಷ್ಣುವರ್ಧನ್, ಆರಕ್ಷಕ ಉಪ ಅಯುಕ್ತ ಕೆ.ಎಸ್.ಸುಂದರರಾಜ್, ಸ್ಥಳ: ಸಂಘದ ಸಮುದಾಯ ಭವನ, ಗಾಂಧಿನಗರ, ಬೆಳಗ್ಗೆ 10ಕ್ಕೆ

■ **ದಿ ಆರ್ಟ್ ಆಫ್ ಲಿವಿಂಗ್ :** ನಾಡಿ ಪರೀಕ್ಷೆ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ಸೂತ್ರ ಆಯುರ್ಧಾಮ :** ಉಚಿತ ವೈದ್ಯಕೀಯ ತಪಾಸಣಾ ಮತ್ತು ಸಲಹಾ ಶಿಬಿರ, ಸ್ಥಳ: ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.

■ **ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠ :** ಚಾತುರ್ಮಾಸ್ಯದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದ್ವಾನ್ ವಿ. ಶ್ರೀನಿವಾಸ ವರದನ್ ಅವರಿಂದ ವೇದಾಂತ ದೇಶಿಕರ 'ದಯಾಶತಕ' ಕುರಿತು ಉಪನ್ಯಾಸ, ಸ್ಥಳ: ಪರಕಾಲ ಮಠ, ಬೆಳಗ್ಗೆ 10.30ಕ್ಕೆ.

■ **ವಿಶ್ವಮಾನವ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ:** ನೂತನ ಸಂಘದ ಉದ್ಘಾಟನೆ, ಡಾ.ಬಿ.ಆರ್. ಅಂಬೇಡ್ಕರ್ ಜನ್ಮ ದಿನಾಚರಣೆ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ: ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು: ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಬಿ.ಸಿದ್ದರಾಜು, ಪುರುಷೋತ್ತಮ್, ಪ್ರಭುಮೂರ್ತಿ, ಶ್ರೀಮತಿ ಪಲ್ಲವಿ ಬೇಗಂ, ಸ್ಥಳ: ವಿಶ್ವಮಾನವ ಡಾ.ಅಂಬೇಡ್ಕರ್ ಸಮುದಾಯ ಭವನ, ಅಶೋಕಪುರಂ, ಬೆಳಗ್ಗೆ 10.30ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಮೈಸೂರು ಜಿಲ್ಲಾ ಮಟ್ಟದ ಸರ್ಕಾರಿ ಪ್ರೌಢಶಾಲಾ ಕನ್ನಡ ಭಾಷಾ ಶಿಕ್ಷಕರಿಗೆ ಸನ್ಮಾನ, ಉದ್ಘಾಟನೆ : ಕಲ್ಮಳ್ಳಿ ನಟರಾಜು, ಅಧ್ಯಕ್ಷತೆ : ಕರ್ನಾಟಕ ರಾಜ್ಯ ಶಿವಾರ್ಚಕ ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಪ್ರಾಸ್ತಾವಿಕ ನುಡಿ : ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ

■ **ಬಾಸುದೇವ ಸೋಮಾನಿ ಕಾಲೇಜು:** ಗುರುವಂದನಾ ಕಾರ್ಯಕ್ರಮ, ಉದ್ಘಾಟನೆ: ಡಾ.ಎಂ. ಪುಟ್ಟಸ್ವಾಮಿ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಎಂ.ಮಹದೇವಸ್ವಾಮಿ, ಉಪಸ್ಥಿತರು: ಡಾ.ಟಿ.ರಮೇಶ್, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ

■ **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ :** ಶ್ರೀಮನ್ ಮಹಾರಾಜ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪುಣ್ಯಸ್ಮರಣೆ, ಮಹಾರಾಜರ ಕುರಿತು : ಸಂಸ್ಕೃತಿ ಚಿಂತಕ ರಘು ಕೌಟಿಲ್ಯ, ಉಪಸ್ಥಿತರು : ಹೆಚ್.ಕೆ. ರಾಮು, ಡಾ. ವಸಂತಕುಮಾರ್ ತಿಮಕಾಪುರ, ಅರಮನೆ ಮಂಡಳಿ ಸಹಾಯಕ ನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಪತ್ರಕರ್ತ ಸಿ.ಕೆ. ಮಹೇಂದ್ರ, ಡಾ. ಎಂ.ಜಿ.ಆರ್. ಅರಸು, ಸ್ಥಳ:ಮಹಾರಾಜರ ಬೃಂದಾವನ ಮಧುವನ, ನಂಜನಗೂಡು ರಸ್ತೆ, ಬೆಳಗ್ಗೆ 11.45ಕ್ಕೆ.

■ **108 ಆಚಾರ್ಯ ಶ್ರೀ ಪುಣ್ಯಸಾಗರ ಮುನಿ ಮಹಾರಾಜರ ಚಾತುರ್ಮಾಸ್ಯ ವರ್ಷಾಯೋಗ :** 1008 ಭಗವಾನ್ ಶ್ರೀ ಪಾರ್ಶ್ವನಾಥ ತೀರ್ಥಂಕರರ ಮೋಕ್ಷ ಕಲ್ಯಾಣ ಪೂಜೆ 'ಮುಕುಟ ಸಪ್ತಮಿ' ಮೆರವಣಿಗೆ, ಸ್ಥಳ: ಪಾಲಿಕೆ ಮುಂಭಾಗ, ಮಧ್ಯಾಹ್ನ 12ಕ್ಕೆ.

■ **ಹಿಯರ್‌ಜಾಪ್ :** ನೂತನ ಕೇಂದ್ರ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅತಿಥಿಗಳು : ಬೆಂಗಳೂರು ಆಯಿಷ್ ನಿರ್ದೇಶಕ ಡಾ. ಎಂ. ಜಯರಾಮ್, ಡಾ. ವಿನಯ್ ಸ್ವರ್ಣಲತಾ ನಾಗರಾಜ್, ಹಿಯರ್‌ಜಾಪ್ ಎಂಡಿ ಎಸ್. ರಾಜ, ಸ್ಥಳ: ಎಂ.ಜಿ. ರಸ್ತೆ, ಜೆಎಸ್‌ಎಸ್ ಆಸ್ಪತ್ರೆ ಸಮೀಪ, ಮಧ್ಯಾಹ್ನ 2.30ಕ್ಕೆ.

■ **ಶ್ರೀ ಪಲ್ಲವಿ ಫೌಂಡೇಷನ್, ಭಾರತೀಯ ಸಾಂಸ್ಕೃತಿಕ ಕಲಾ ತರಬೇತಿ ಕೇಂದ್ರ :** ಕಲಾ ಪ್ರಪಂಚ–2025, ಮೈಸೂರು ಸಾಂಸ್ಕೃತಿಕ ಉತ್ಸವ, ಉಪಸ್ಥಿತರು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಕಂಚಿ ಕಾಮಕೋಟಿ ಆಸ್ಥಾನ ವಿದ್ವಾನ್ ಚಿಂತಲಪಲ್ಲಿ ವಿ. ಶ್ರೀನಿವಾಸ್, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಕಲಾ ಸೌರಭ ಫೌಂಡೇಷನ್ ಅಧ್ಯಕ್ಷ ಬೆಂಗಳೂರು ವಿದ್ವಾನ್ ದತ್ತಾತ್ರಿ, ಕಲಾ ಸೌರಭ ಇಂಟರ್‌ನ್ಯಾಷನಲ್ ಸಿಇಓ ಡಾ. ರಾಜೇಶ್ ನಾಯಕ್, ಸಮರ್ಪಣಾ ಸೇವಾ ಟ್ರಸ್ಟ್ ಛೇರ್ಮನ್ ಲಯನ್ ಕುಮಾರ್, 10.33 ರಿಂದ. ಸುಸ್ವರ ಗಾನ ಕಲಾ ಕೇಂದ್ರದ ಶಿಷ್ಯರಿಂದ ಪ್ರಾರ್ಥನಾ ಗೀತೆ, ಕು. ರೇಷ್ಮಿತಾ ಶ್ರೀಕಾಂತ್ ಅವರಿಂದ ಭರತನಾಟ್ಯ; ಬೆಳಗ್ಗೆ 11.36 ರಿಂದ ವಿದುಷಿ ಸವಿತಾ ಮೋಹನ್ ಅವರ ಶ್ರುತಿಲಯ ಸಂಗೀತ ಶಾಲಾ ಶಿಷ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಮಧ್ಯಾಹ್ನ 12.49 ರಿಂದ ವಿದುಷಿ ಮಮತಾ ಕಾತ್ಯಾಯಿನಿ, ಕಲಾವಿದೆ ನಿವೇದಿತಾ ದತ್ತಾತ್ರಿ, ಕು. ಐಶ್ವರ್ಯ ಲಕ್ಷ್ಮಿ ಅವರಿಂದ ಗೀತ ಚಿತ್ರ ನೃತ್ಯ, ಮಧ್ಯಾಹ್ನ 2.43 ರಿಂದ ವಿದುಷಿ ಉಷಾ ಶ್ರೀನಿವಾಸ್ ಅವರ ಸುಸ್ವರ ಗಾನ ಕಲಾ ಶಿಷ್ಯರಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 4.02 ರಿಂದ ಬೆಂಗಳೂರು ವಿದ್ವಾನ್ ದತ್ತಾತ್ರಿ, ಚೆನ್ನೈ ವಿದ್ವಾನ್ ವರಪ್ರಸಾದ್, ಗಾಯಕ ಆನಂದ್ ಶ್ರೀಧರನ್ ಅವರಿಂದ ಕರ್ನಾಟಕ ಕ್ಲಾಸಿಕಲ್ ಮ್ಯೂಸಿಕ್, ಸಂಜೆ 5.24 ರಿಂದ ವಿದುಷಿ ಉಷಾ ಶ್ರೀನಿವಾಸ್ ಮತ್ತು ತಂಡದವರಿಂದ ಶ್ರೀ ತ್ಯಾಗರಾಜರ ಪಂಚರತ್ನ ಕೃತಿಗಳ ಗಾಯನ ಗೋಷ್ಠಿ, ಸಂಜೆ 6.46 ರಿಂದ ಪ್ರಶಸ್ತಿ ಪತ್ರ ವಿತರಣೆ, ಸನ್ಮಾನ ಕಾರ್ಯಕ್ರಮ, ಸ್ಥಳ: ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾನಿಲಯ ಸಭಾಂಗಣ.

■ **ಮನುಜ ರಂಗ ಟ್ರಸ್ಟ್ :** ಪ್ರಥಮ ಬಾರಿಗೆ ಮಹಿಳೆಯರಿಂದ ಯಕ್ಷಗಾನ ಪ್ರಸಂಗ : ಶ್ರೀ ದೇವಿ ಮಹಾತ್ಮೆ, ಆಹ್ವಾನಿತರು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೆಜೆಎಸ್‌ಓ ಅಂಡ್ ಡಿಕೆ ಅಧ್ಯಕ್ಷ ಗ್ರೇಶಿಯನ್ ರೋಡ್ರಿಗಸ್, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಚಲನಚಿತ್ರ ನಟ ಮಂಡ್ಯ ರಮೇಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಮಧ್ಯಾಹ್ನ 3 ರಿಂದ.

■ **ಆದರ್ಶ ಸೇವಾ ಸಂಘ :** ಪ್ರತಿಭಾ ಪುರಸ್ಕಾರ, ಅಭಿನಂದನಾ ಸಮಾರಂಭ, ಸಮ್ಮುಖ : ಶ್ರೀ ಬ್ರಹ್ಮಾನಂದ ಭಾರತೀ ಸ್ವಾಮೀಜಿ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಡಾ. ಎಸ್. ಮುರಳಿ, ಡಾ. ವಲ್ಲೀಶ್ ಎನ್. ಹೆರೂರ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಜಿ.ಆರ್. ನಾಗರಾಜ, ಸ್ಥಳ: ಗೋಪಾಲಸ್ವಾಮಿ ಶಿಶುಶಿಕ್ಷಣ ಸಂಸ್ಥೆ, ಲಕ್ಷ್ಮೀಪುರಂ, ಮಧ್ಯಾಹ್ನ 3ಕ್ಕೆ.

■ **ರಾಗ ಮ್ಯಾಜಿಕ್ ಅಕಾಡೆಮಿ :** ವಿದುಷಿ ಅಕ್ಕರೈ ಎಸ್. ಸುಬ್ಬಲಕ್ಷ್ಮಿ ಮತ್ತು ವಿದುಷಿ ಅಕ್ಕರೈ ಎಸ್. ಸ್ವರ್ಣಲತಾ ಅವರಿಂದ ದ್ವಂದ್ವ ವಯೋಲಿನ್ ವಾದನ, ವಿದ್ವಾನ್ ಕೆ.ಯು. ಜಯಚಂದ್ರ ರಾವ್ – ಮೃದಂಗ, ವಿದ್ವಾನ್ ಗಿರಿಧರ್ ಉಡುಪ–ಘಟಂ, ಸ್ಥಳ: ಪದ್ಮಜಾ ಶ್ರೀನಿವಾಸ ಸಭಾಂಗಣ, ಶ್ರೀ ರಾಘವೇಂದ್ರಸ್ವಾಮಿ ಮಠದ ಹತ್ತಿರ, ಕೃಷ್ಣಮೂರ್ತಿಪುರಂ, ಸಂಜೆ 5.30 ರಿಂದ.

■ **ಸುಶಿರ, ಶ್ರೀ ವಿ. ದೇಶಿಕಾಚಾರ್ ಅಕಾಡೆಮಿ ಆಫ್ ಮ್ಯೂಸಿಕ್ :** ವಾರ್ಷಿಕ ಸಂಗೀತ ಸಂಭ್ರಮ, ವಿದ್ವಾನ್ ರಕ್ಷಿತ್ ರಮೇಶ್ ಅವರಿಂದ ವೀಣೆ, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟಂ, ಸ್ಥಳ: ಸುಶಿರ ಸಭಾಂಗಣ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರವಚನ: ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು, ವಾಚನ : ವಿಶ್ರಾಂತ ಕಾರ್ಯಪಾಲಕ ಅಭಿಯಂತರ ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ರಂಗಾಯಣ :** ಸಿಜಿಕೆ ನೆನಪಿನ ಗ್ರೀಷ್ಮ ರಂಗೋತ್ಸವ, ಮಂಡ್ಯ ಕರ್ನಾಟಕ ಸಂಘದ ಕಲಾವಿದರಿಂದ ನಿತ್ಯ ಸಚಿವ ನಾಟಕ ಪ್ರದರ್ಶನ, ರಚನೆ : ಡಾ. ರಾಜಪ್ಪ ದಳವಾಯಿ, ನಿರ್ದೇಶನ : ಪ್ರಮೋದ್ ಶಿಗ್ಗಾಂವ್, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನಿಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸದಾಶಿವ ಪಾಟೀಲ್ ಹಾಗೂ ಜಿ. ಪುಷ್ಪಲತಾ, ವ್ಯಾಖ್ಯಾನ–ಡಾ.ಜಿ.ಆರ್.ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ವಿಶ್ವ ಹದಿಹರೆಯದವರ ದಿನದ ಧ್ಯೇಯವಾಕ್ಯ ಮತ್ತು ಹದಿಹರೆಯದವರ ಆರೋಗ್ಯ ಸಮಸ್ಯೆಗಳು ಮತ್ತು ಚಿಕಿತ್ಸೆ ಕುರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಚೆಲುವಾಂಬ ಆಸ್ಪತ್ರೆಯ ಮಕ್ಕಳ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಹಾಗೂ ಶಿಶು ಮತ್ತು ಹದಿಹರೆಯದವರ ಎಂಡೋಕ್ರೈನಾಲಜಿಸ್ಟ್ ಡಾ. ಅಕ್ಷತಾ ಎ. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೊ ಹಾಡು ಹೇಳ್ತೀಯೋ, 10.30 KRISH TRISH and Balty boy ನಾವು ಭಾರತೀಯರು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಚೈತನ್ಯ ಚಿಲುಮೆ–ಬಹುಮುಖ ಪ್ರತಿಭೆ ವಿಶ್ರುತ್ ಎ.ಧನ್ಯ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸಿದ್ದಾರೆ ದಿಗ್ವಿಜಯ್ ಬಿ., 11.00 ಮಿಶ್ರಮಾಧುರ್ಯ **ಮಧ್ಯಾಹ್ನ:** 12.00 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ: ಮೈಸೂರಿನ ಯರಗನ ಹಳ್ಳಿಯ ಸಿದ್ಧಮ್ಮ ಮತ್ತು ಸಂಗಡಿಗರಿಂದ ಮಾದೇಶ್ವರನ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಶ್ರುತಿ ಜಿ.ರಾವ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, ಹೆಸರಾಂತ ನಿರ್ದೇಶಕ ಮಹೇಶ್‌ಬಾಬು ಅವರೊಂದಿಗೆ ಸಂದರ್ಶನ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರ ಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ಶಾಂಭವೀ ವಿಲಾಸ, ಪ್ರಸ್ತುತಿ–ಮುಳಿಯ ಗೋವಿಂದ ಭಟ್ ಮತ್ತು ಸಂಗಡಿಗರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ನಾದ ಮೀಮಾಂಸೆ–ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪುರೇಷೆ ಕುರಿತ ಸರಣಿ, ಸಂಶೋಧನೆ ಹಾಗೂ ಸಾಹಿತ್ಯ–ಡಾ.ಸಿ.ಎ.ಶ್ರೀಧರ್, ಪ್ರಸ್ತುತಿ–ಜಿ.ಕೆ.ರವೀಂದ್ರ ಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಜಿ.ಆರ್.ರಾಮಚಂದ್ರ, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತ ಸಂಗೀತ ಸಭಾ, ಅರ್ಚನ ಎಲ್ –ಹಾಡುಗಾರಿಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಆಗಸ್ಟ್ 3 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 108 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ಪ್ರಕರಣ

ಮಾಜಿ ಸಂಸದ ಪ್ರಜ್ವಲ್ ರೇವಣ್ಣಗೆ ಜೀವನಪೂರ್ತಿ ಜೈಲು

■ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಮಹತ್ವದ ತೀರ್ಪು ■ 11.60 ಲಕ್ಷ ರೂ. ದಂಡ; ಇದರಲ್ಲಿ ಸಂತ್ರಸ್ತೆಗೆ 11.25 ಲಕ್ಷ ರೂ. ಪರಿಹಾರ ■ ಈಗ ಅನುಭವಿಸಿರುವ 14 ತಿಂಗಳ ಜೈಲುವಾಸ ಇದಕ್ಕೆ ಅನ್ವಯವಾಗದು ■ ತಕ್ಷಣದಿಂದಲೇ ಶಿಕ್ಷೆ ಜಾರಿ; ಮೇಲ್ಮನವಿಗೆ ಅವಕಾಶ ■ ಇನ್ನೂ 3 ಪ್ರಕರಣಗಳು ವಿಚಾರಣಾ ಹಂತದಲ್ಲಿವೆ

ಬೆಂಗಳೂರು,ಆ.2–ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರವೆಸಗಿದ ಪ್ರಕರಣದಲ್ಲಿ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ದೋಷಿ ಎಂದು ಶುಕ್ರವಾರ ಘೋಷಿಸಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಇಂದು ಅವರಿಗೆ ಜೀವನ ಪರ್ಯಂತ ಜೈಲು ಶಿಕ್ಷೆ ಹಾಗೂ 11.60 ಲಕ್ಷ ದಂಡ ವಿಧಿಸಿದೆ. ದಂಡದ ಮೊತ್ತದಲ್ಲಿ 11.25 ಲಕ್ಷ ರೂ.ಗಳನ್ನು ಸಂತ್ರಸ್ತ ಮಹಿಳೆಗೆ ನೀಡಬೇಕೆಂದು ಆದೇಶಿಸಲಾಗಿದೆ.

ಪ್ರಜ್ವಲ್ ರೇವಣ್ಣ ವಿರುದ್ಧ 8 ಸೆಕ್ಷನ್‌ಗಳಡಿ ಶಿಕ್ಷೆ ವಿಧಿಸಲಾಗಿದ್ದು, ಐಪಿಸಿ ಸೆಕ್ಷನ್ 376 (2)(ಕೆ) ಅಂದರೆ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಯಿಂದ ಅತ್ಯಾಚಾರ ಅಪರಾಧಕ್ಕೆ ಜೀವಾವಧಿ ಶಿಕ್ಷೆ ಹಾಗೂ 5 ಲಕ್ಷ ದಂಡ, ಐಪಿಸಿ 376(2)(ಎನ್) ಅಂದರೆ ಪದೇ ಪದೆ ಅತ್ಯಾಚಾರ ಅಪರಾಧಕ್ಕೆ ಜೀವನಪರ್ಯಂತ ಜೀವಾವಧಿ ಶಿಕ್ಷೆ ಹಾಗೂ 5 ಲಕ್ಷ ದಂಡ, ಐಪಿಸಿ 354(ಎ) ಅಪರಾಧಕ್ಕೆ 3 ವರ್ಷ ಜೈಲು 25 ಸಾವಿರ ದಂಡ, ಐಪಿಸಿ 354(ಬಿ) ಅಪರಾಧಕ್ಕೆ 7 ವರ್ಷ ಜೈಲು 50 ಸಾವಿರ ದಂಡ, ▶ 5ನೇ ಪುಟಕ್ಕೆ



ನನ್ನ ರಾಜಕೀಯ ಭವಿಷ್ಯ ಹಾಳು ಮಾಡುವ ಸಂಚಿದು!

ಬೆಂಗಳೂರು: ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ದೋಷಿ ಎಂದು ವಿಚಾರಣಾ ನ್ಯಾಯಾಲಯದಿಂದ ಘೋಷಿಸಲ್ಪಟ್ಟಿದ್ದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ, 'ನನ್ನ ರಾಜಕೀಯ ಜೀವನ ಮತ್ತು ಭವಿಷ್ಯ ಹಾಳುಮಾಡಲು ಸಂಚು ರೂಪಿಸಿ ಈ ಪ್ರಕರಣವನ್ನು ದಾಖಲಿಸಲಾಗಿದೆ' ಎಂದು ವಿಚಾರಣಾ ನ್ಯಾಯಾಲಯದಲ್ಲಿ ಅಲವತ್ತುಕೊಂಡರು.

ನ್ಯಾಯಾಧೀಶರ ಮುಂದೆ ಅಲವತ್ತುಕೊಂಡ ಪ್ರಜ್ವಲ್

ಪ್ರಕರಣದ ವಿಚಾರಣೆ ನಡೆಸಿ ಪ್ರಜ್ವಲ್ ರೇವಣ್ಣ ದೋಷಿ ಎಂದು ಆ.1ರಂದು ತೀರ್ಮಾನಿಸಿದ್ದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಶಿಕ್ಷೆಯ ಪ್ರಮಾಣವನ್ನು ನಿಗದಿಪಡಿಸಬೇಕಿದ್ದ ಹಿನ್ನೆಲೆಯಲ್ಲಿ ಪ್ರಜ್ವಲ್ ರೇವಣ್ಣನನ್ನು ಶನಿವಾರ ಬೆಳಗ್ಗೆ ಕೋರ್ಟ್‌ಗೆ ಹಾಜರುಪಡಿಸಲಾಗಿತ್ತು. ಈ ವೇಳೆ ನ್ಯಾಯಾಧೀಶರಾದ ಸಂತೋಷ ಗಜಾನನ ಭಟ್ ಅವರ ಮುಂದೆ, ಶಿಕ್ಷೆ ಪ್ರಮಾಣವನ್ನು ಕಡಿಮೆ ಮಾಡುವಂತೆ ಪ್ರಜ್ವಲ್ ಮನವಿ ಮಾಡಿದರು. ಹಾಸನದಲ್ಲಿ ನನಗೆ ಒಳ್ಳೆಯ ಹೆಸರಿತ್ತು. 2024ರ ಲೋಕಸಭಾ ಚುನಾವಣೆಯ ಮತದಾನಕ್ಕೆ 6 ದಿನ ಬಾಕಿ ಇದೆ ಎನ್ನುವಾಗ ಪೆನ್‌ಡ್ರೈವ್‌ಗಳನ್ನು ಹಂಚಲಾಯಿತು. ಚುನಾವಣೆಯಲ್ಲಿ ನನ್ನನ್ನು ಸೋಲಿಸಲು ಈ ರೀತಿ ಮಾಡಲಾಗಿದೆ. ನನ್ನ ವಿರುದ್ಧ ಯಾರೂ ದೂರು ನೀಡಿರಲಿಲ್ಲ. ನಂತರ ದೂರು ಪಡೆಯಲಾಗಿದೆ ಎಂದು ಇಂಗ್ಲೀಷ್‌ನಲ್ಲಿ ಹೇಳುತ್ತಿದ್ದ ಪ್ರಜ್ವಲ್ ದಿಢೀರನೇ ಅಳಲಾರಂಭಿಸಿದರು. ನಂತರ ಕನ್ನಡದಲ್ಲಿ ಮಾತನಾಡಿದ ಅವರು, ನಾನು ನನ್ನ ತಂದೆ–ತಾಯಿಯ ಮುಖ ನೋಡಿ ▶ 5ನೇ ಪುಟಕ್ಕೆ

ಸಮಾಜಕ್ಕೆ ಸಂದೇಶ ನೀಡುವ ಶಿಕ್ಷೆ ವಿಧಿಸಿ...

ಸರ್ಕಾರದ ವಿಶೇಷ ಅಭಿಯೋಜಕ ಬಿ.ಎನ್.ಜಗದೀಶ್ ಮನವಿ

ಪ್ರಜ್ವಲ್ ರಾಜಕಾರಣಕ್ಕೆ ಬಂದಿದ್ದು ಹಣ ಮಾಡಲಲ್ಲ; ಜನಸೇವೆಗಾಗಿ ಬಂದವರು: ಆರೋಪಿ ಪರ ವಕೀಲರಾದ ನಳಿನಿ ಮಾಯೇಗೌಡ ವಾದ

ಬೆಂಗಳೂರು: ಮನೆಗೆಲಸದ ಮಹಿಳೆ ಮೇಲೆ ಅತ್ಯಾಚಾರವೆಸಗಿದ ಆರೋಪದಡಿ ದೋಷಿ ಎಂದು ಘೋಷಿಸಲ್ಪಟ್ಟಿದ್ದ ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಶಿಕ್ಷೆ ನಿಗದಿಪಡಿಸುವ ಸಂಬಂಧ ಅಂತಿಮ ವಾದ–ಪ್ರತಿವಾದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ಅವರ ಮುಂದೆ ಶನಿವಾರ ಬೆಳಗ್ಗೆ ನಡೆಯಿತು. ಮೊದಲಿಗೆ ಸರ್ಕಾರದ ಪರವಾಗಿ ವಾದ ಮಂಡಿಸುವಂತೆ ನ್ಯಾಯಾಧೀಶರು ಸೂಚಿಸಿದ ಮೇರೆಗೆ ಸರ್ಕಾರದ ವಿಶೇಷ ಅಭಿಯೋಜಕರಾದ ಬಿ.ಎನ್.ಜಗದೀಶ್ ವಾದ ಮಂಡಿಸಿ, ಪ್ರಜ್ವಲ್ ನಡೆಸಿರುವ ಕೃತ್ಯ ಅತ್ಯಂತ ಹೀನಾಯವಾದದ್ದು. ಜೀವನೋಪಾಯಕ್ಕಾಗಿ ತನ್ನ ಮನೆಯಲ್ಲಿ ಕೆಲಸಕ್ಕೆ ಸೇರಿದ್ದ ಅನಕ್ಷರಸ್ಥ ಮಹಿಳೆ ಮೇಲೆ ಘೋರ ಕೃತ್ಯ ಎಸಗಲಾಗಿದೆ. ತಾನು ಎಸಗಿದ ಹೀನ ಕೃತ್ಯವನ್ನು ವೀಡಿಯೋ ಚಿತ್ರೀಕರಣ ಮಾಡಲಾಗಿದೆ. ವೀಡಿಯೋಗಳು ಬಹಿರಂಗಗೊಂಡ ನಂತರ ಸಂತ್ರಸ್ತ ಮಹಿಳೆ ಮಾನಸಿಕ ಹಿಂಸೆ ಅನುಭವಿಸಿ, ಆತ್ಮಹತ್ಯೆಗೂ ಯತ್ನಿಸಿದ್ದರು. ಪ್ರಜ್ವಲ್ ಓರ್ವ ಚಟಗಾರನಾಗಿದ್ದು, ಆತನ ವಿರುದ್ಧ ಇಂತಹುದ್ದೇ ಇನ್ನೂ ಮೂರು ಪ್ರಕರಣಗಳು ವಿಚಾರಣಾ ಹಂತದಲ್ಲಿವೆ ಎಂದು ನ್ಯಾಯಾಧೀಶರ ಗಮನಕ್ಕೆ ತಂದರು. ವಾದ ಮುಂದುವರೆಸಿದ ಅವರು, ತಾವು ವಹಿಸಿದ್ದ ಉನ್ನತ ಸ್ಥಾನವನ್ನು ದುರುಪಯೋಗಪಡಿಸಿಕೊಂಡು ಪಶ್ಚಾತ್ತಾಪವಿಲ್ಲದೇ ಹೀನ ಕೃತ್ಯವನ್ನು ಎಸಗಲಾಗಿದೆ. ಸಂತ್ರಸ್ತೆ ಎಷ್ಟೇ ಬೇಡಿಕೊಂಡರೂ ಅದನ್ನು ಲೆಕ್ಕಿಸದೇ ಅತ್ಯಾಚಾರ ಮಾಡಿ, ವೀಡಿಯೋ ಚಿತ್ರೀಕರಣ ಮಾಡಿರುವುದು ಪ್ರಜ್ವಲ್‌ನ ವಿಕೃತ ಮನಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಪ್ರಜ್ವಲ್ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಅತ್ಯಂತ ಪ್ರಬಲನಾಗಿದ್ದು, ಈತನಿಗೆ ಹೋಲಿಸಿದರೆ ಸಂತ್ರಸ್ತ ಮಹಿಳೆಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಯಾವುದೇ ಸ್ಥಾನಮಾನವಿಲ್ಲ. ಕೇವಲ 10 ಸಾವಿರ ರೂ. ಸಂಬಳಕ್ಕಾಗಿ ಮನೆಗೆಲಸಕ್ಕೆ ಸೇರಿಕೊಂಡಿದ್ದರು. ಈತನ ಪ್ರಭಾವದ ಮುಂದೆ ಏನೂ ಮಾಡಲಾಗದಂತಹ ದುಸ್ಥಿತಿಗೆ ಒಳಗಾಗಿದ್ದ ಸಂತ್ರಸ್ತೆ, ದೂರು ನೀಡಲೂ ಹಿಂಜರಿಯುವಂತಹ ವಾತಾವರಣ ನಿರ್ಮಾಣವಾಗಿ ಬಹಳಷ್ಟು ವಿಳಂಬವಾಗಿ ದೂರು ನೀಡಲಾಯಿತು. ಪ್ರಜ್ವಲ್ ಎಸಗಿರುವ ಅಪರಾಧಕ್ಕೆ ಕನಿಷ್ಠ 10 ವರ್ಷದಿಂದ ಗರಿಷ್ಠ ಜೀವಾವಧಿ ಶಿಕ್ಷೆ ▶ 5ನೇ ಪುಟಕ್ಕೆ

ಪ್ರಜ್ವಲ್ ವಿರುದ್ಧ 8 ಸೆಕ್ಷನ್‌ಗಳಡಿ ಶಿಕ್ಷೆ

- ಐಪಿಸಿ ಸೆಕ್ಷನ್ 376(2)(ಕೆ) ಅಂದರೆ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಯಿಂದ ಅತ್ಯಾಚಾರ ಅಪರಾಧಕ್ಕೆ ಜೀವಾವಧಿ ಶಿಕ್ಷೆ, 5 ಲಕ್ಷ ದಂಡ
- ಐಪಿಸಿ 376(2)(ಎನ್) ಅಂದರೆ ಪದೇ ಪದೆ ಅತ್ಯಾಚಾರ ಅಪರಾಧಕ್ಕೆ ಜೀವನಪರ್ಯಂತ ಜೀವಾವಧಿ ಶಿಕ್ಷೆ, 5 ಲಕ್ಷ ದಂಡ
- ಐಪಿಸಿ 354(ಎ) ಅಪರಾಧಕ್ಕೆ 3 ವರ್ಷ ಜೈಲು 25 ಸಾವಿರ ದಂಡ
- ಐಪಿಸಿ 354(ಬಿ) ಅಪರಾಧಕ್ಕೆ 7 ವರ್ಷ ಜೈಲು 50 ಸಾವಿರ ದಂಡ
- ಐಪಿಸಿ 354(ಸಿ) ಅಪರಾಧಕ್ಕೆ 3 ವರ್ಷ ಜೈಲು 25 ಸಾವಿರ ದಂಡ
- ಐಪಿಸಿ 506 ಅಪರಾಧಕ್ಕೆ 2 ವರ್ಷ ಜೈಲು 10 ಸಾವಿರ ದಂಡ
- ಐಟಿ ಕಾಯಿದೆ 66(ಇ) ಅಪರಾಧಕ್ಕೆ 3 ವರ್ಷ ಜೈಲು, 26 ಸಾವಿರ ದಂಡ
- ಐಪಿಸಿ 201 ಅಪರಾಧಕ್ಕೆ 3 ವರ್ಷ ಜೈಲು 25 ಸಾವಿರ ದಂಡ

ಒಟ್ಟು 11.60 ಲಕ್ಷ ದಂಡ ಸೇರಿ ಜೀವನಪರ್ಯಂತ ಜೀವಾವಧಿ ಶಿಕ್ಷೆ

Justice for women

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನೀಡಿರುವ ತೀರ್ಪಿನಿಂದ Justice for women (ಮಹಿಳೆಯರಿಗೆ ನ್ಯಾಯ) ಎಂದು ಎಸ್‌ಐಟಿ ತನಿಖಾ ತಂಡದ ಸದಸ್ಯರಲ್ಲಿ ಒಬ್ಬರಾದ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಪ್ರತಿಕ್ರಿಯೆ ವ್ಯಕ್ತಪಡಿಸಿದರು. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ತನಿಖಾ ತಂಡ ಸಲ್ಲಿಸಿದ ಚಾರ್ಜ್‌ಶೀಟ್‌ಗೆ ನ್ಯಾಯಾಲಯ ಮನ್ನಣೆ ನೀಡಿದೆ ಎಂದರು.



ಪ್ರಜ್ವಲ್ ಪ್ರಕರಣದಲ್ಲಿ ಕಲ್ಲು ಬಂಡೆಯಂತೆ ನಿಂತ ಸಂತ್ರಸ್ತೆ

● ತನಿಖಾ ತಂಡ ಮುಖ್ಯಸ್ಥ ಬಿ.ಕೆ.ಸಿಂಗ್ ಹೇಳಿಕೆ ● ಜಪ್ತಿ ಮಾಡಿದ ಪೆನ್‌ಡ್ರೈವ್‌ನಲ್ಲಿ ಹಲವು ಹೆಣ್ಣು ಮಕ್ಕಳ ಅಶ್ಲೀಲ ವಿಡಿಯೋಗಳಿದ್ದವು ● ತೀರ್ಪು ವಿಳಂಬವಾಗಿ ಬರುವಂತೆ ಷಡ್ಯಂತ್ರ ಮಾಡಿದ್ದರು

ಬೆಂಗಳೂರು,ಆ.2–ಅತ್ಯಾಚಾರಕ್ಕೆ ಸಂಬಂಧಿಸಿದ ಒಂದು ಪ್ರಕರಣದಲ್ಲಿ ಅಪರಾಧಿ ಪ್ರಜ್ವಲ್ ರೇವಣ್ಣನಿಗೆ ನ್ಯಾಯಾಲಯವು ಜೀವನ ಪರ್ಯಂತ ಶಿಕ್ಷೆ ವಿಧಿಸಿದೆ. ತನಿಖಾ ಹಂತದಲ್ಲಿ ಸಂತ್ರಸ್ತೆ ಕಲ್ಲು ಬಂಡೆಯಂತೆ ನಿಂತು ಸಹಕಾರ ನೀಡಿದ್ದರು ಎಂದು ವಿಶೇಷ ತನಿಖಾ ದಳದ (ಎಸ್‌ಐಟಿ) ಮುಖ್ಯಸ್ಥ, ಎಡಿಜಿಪಿ ಬಿ.ಕೆ.ಸಿಂಗ್ ಹೇಳಿದರು.

ಅತ್ಯಾಚಾರ ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣಗೆ ಶಿಕ್ಷೆ ಪ್ರಮಾಣ ಪ್ರಕಟವಾದ ಬೆನ್ನಲ್ಲೇ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ಹಾಸನದಲ್ಲಿ ಪೆನ್‌ಡ್ರೈವ್ ವಿತರಣೆಯಾಗಿತ್ತು. ಅದರಲ್ಲಿ ಹಲವಾರು ಹೆಣ್ಣು ಮಕ್ಕಳ ಅಶ್ಲೀಲ ವಿಡಿಯೋಗಳಿದ್ದವು. ಅತ್ಯಾಚಾರ ಹಾಗೂ ಪೆನ್‌ಡ್ರೈವ್ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾಗಿದ್ದ ಐದು ಹಾಗೂ ಮತ್ತೊಂದು ಪ್ರಕರಣ ಸೇರಿದಂತೆ ಒಟ್ಟು ಪ್ರಕರಣಗಳ ತನಿಖೆ ನಡೆಸುವಂತೆ ರಾಜ್ಯ ಸರ್ಕಾರ ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ಆದೇಶಿಸಿತ್ತು. ಒಂದು ಪ್ರಕರಣದಲ್ಲಿ ಸಂತ್ರಸ್ತೆ ಎಲ್ಲಿಯೂ ತನ್ನ ಹೇಳಿಕೆಯನ್ನು ಬದಲಿಸಲಿಲ್ಲ. ಸಂತ್ರಸ್ತೆಯನ್ನು ಮೂರು ದಿನ ವಿಚಾರಣೆ ನಡೆಸಲಾಯಿತು. ಅಪರಾಧಿ ಪ್ರಜ್ವಲ್ ರೇವಣ್ಣ ಪರ ವಕೀಲರು ಎರಡು ದಿನ ಎಂಟು ತಾಸು ಪ್ರಶ್ನೆ ಕೇಳಿದರು. ಸಂತ್ರಸ್ತೆ ಆತಂಕಕ್ಕೆ ಒಳಗಾಗದೇ ಧೈರ್ಯದಿಂದ ನಡೆದ ಘಟನೆಯನ್ನು ▶ 5ನೇ ಪುಟಕ್ಕೆ



ಸುದ್ದಿಗೋಷ್ಠಿಯಲ್ಲಿ ವಿಶೇಷ ತನಿಖಾ ದಳದ (ಎಸ್‌ಐಟಿ) ಮುಖ್ಯಸ್ಥ, ಎಡಿಜಿಪಿ ಬಿ.ಕೆ.ಸಿಂಗ್, ಐಪಿಎಸ್ ಅಧಿಕಾರಿ ಸುಮನ್ ಡಿ.ಪನ್ನೇಕರ್, ಇನ್‌ಸ್ಪೆಕ್ಟರ್ ಎನ್.ಶೋಭಾ, ಎಸ್‌ಪಿಸಿ ಅಶೋಕ್ ನಾಯಕ್ ಉಪಸ್ಥಿತರಿದ್ದರು.

ಪ್ರಜ್ವಲ್ ರೇವಣ್ಣನಿಂದ ಇನ್ನೂ ಹಲವರು ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಎನ್ನುವ ಮಾಹಿತಿ ತನಿಖಾ ತಂಡಕ್ಕೆ ಸಿಕ್ಕಿದೆ. ಅಂತಹವರು ದೂರು ನೀಡಿದರೆ ತನಿಖೆ ನಡೆಸುತ್ತೇವೆ ಎಂದು ಎಸ್‌ಐಟಿ ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈಗೆ ಮೈಸೂರಿಂದ ಸರಬರಾಜಾಗಿದ್ದ 44 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಮೈಸೂರು, ಆ.2(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಡ್ರಗ್ಸ್ ತಯಾರಿಕೆ ಜಾಲವನ್ನು ಮುಂಬೈ ಪೊಲೀಸರು ಭೇದಿಸಿದ ನಂತರ ಅಂತರರಾಷ್ಟ್ರೀಯ ಮಟ್ಟದ ಬೃಹತ್ ಡ್ರಗ್ಸ್ ಜಾಲ ಒಂದೊಂದಾಗಿ ಬಯಲಾಗುತ್ತಿದೆ. ಮೈಸೂರಿಂದ ಮುಂಬೈಗೆ ಸರಬರಾಜು ಮಾಡಿದ್ದ 44 ಕೋಟಿ ಮೌಲ್ಯದ ಡ್ರಗ್ಸ್ ಹಾಗೂ 16 ಕೋಟಿ ನಗದನ್ನು ಮುಂಬೈ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಮೂಲಕ ಮೈಸೂರಿನ ಡ್ರಗ್ಸ್ ಜಾಲದಿಂದ ಒಟ್ಟು 435 ಕೋಟಿ ಡ್ರಗ್ಸ್ ಜಪ್ತಿ ಮಾಡಲಾಗಿದೆ.

ಇಲ್ಲಿವರೆಗೆ 435 ಕೋಟಿ ಡ್ರಗ್ಸ್ ವಶಕ್ಕೆ

ಮೈಸೂರು ಹಾಗೂ ಮುಂಬೈನಲ್ಲಿ ಸೆರೆ ಸಿಕ್ಕಿರುವ ಡ್ರಗ್ಸ್ ಪೆಡ್ಲರ್ ಹಾಗೂ ಡ್ರಗ್ಸ್ ತಯಾರಕರನ್ನು ಮುಂಬೈ ಪೊಲೀಸರು ತೀವ್ರ ವಿಚಾರಣೆ ಮಾಡುತ್ತಿದ್ದು, ಆರೋಪಿಗಳು ಸ್ಫೋಟಕ ಮಾಹಿತಿ ನೀಡುತ್ತಿದ್ದಾರೆ.

ಮೈಸೂರಿನಲ್ಲಿ 390 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡ ನಂತರ ಆರೋಪಿಗಳು ನೀಡಿದ ಸುಳಿವಿನ ಮೇರೆಗೆ ಮುಂಬೈನ ಪೊವೈನ ಹಿರಾನಂದಾನಿ ಪ್ರದೇಶದಲ್ಲಿ 44 ಕೋಟಿ ಮೌಲ್ಯದ 22 ಕೆ.ಜಿ. ಡ್ರಗ್ಸ್ ಹಾಗೂ ಡ್ರಗ್ಸ್ ತಯಾರಿಕೆಗೆ ಬಳಸುವ ರಾಸಾಯನಿಕ ಸೇರಿದಂತೆ ಹಲವು ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಅಲ್ಲದೆ 16 ಲಕ್ಷ ರೂಪಾಯಿ ನಗದು ಕೂಡ ವಶಕ್ಕೆ ಪಡೆದಿದ್ದಾರೆ. ಈ ತನಕ ಮುಂಬೈ ಪೊಲೀಸರ ಆಂಟಿ ನಾರ್ಕೋಟಿಕ್ಸ್ ಘಟಕದವರು 435 ಕೋಟಿ ಮೌಲ್ಯದ 213 ಕೆ.ಜಿ. ಮೆಫೆಡ್ರೋನ್ ಪತ್ತೆ ಮಾಡಿದ್ದಾರೆ. ನಾರ್ಕೋಟಿಕ್ಸ್ ಡ್ರಗ್ಸ್ ಮತ್ತು ಸೈಕೋಟ್ರೋಪಿಕ್ ಸಬ್‌ಸ್ಟನ್ಸ್ (ಎನ್‌ಡಿಪಿಎಸ್) ಕಾಯ್ದೆಯಡಿ ಪ್ರಕರಣ ದಾಖಲು ಮಾಡಲಾಗಿದೆ. ಮೈಸೂರಿನಿಂದ ಮುಂಬೈಗೆ ಡ್ರಗ್ಸ್ ಸರಬರಾಜು ಮಾಡಿರುವಂತೆ ದೇಶದ ಇನ್ನು ಹಲವು ರಾಜ್ಯಗಳಿಗೆ ಪೂರೈಕೆ ಮಾಡಿರುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಸೆರೆ ಸಿಕ್ಕಿರುವ ಎಂಟು ಮಂದಿ ಆರೋಪಿಗಳು ನೀಡಿರುವ ಸುಳಿವು ಆಧರಿಸಿ ಮುಂಬೈ ಪೊಲೀಸರು ಡ್ರಗ್ಸ್ ಜಾಲ ಭೇದಿಸುತ್ತಲೇ ಇದ್ದಾರೆ. ಈ ಮೂಲಕ ಮೈಸೂರಿನ ಡ್ರಗ್ಸ್ ನಂಟು ದೇಶವ್ಯಾಪಿ ಆವರಿಸಿರುವುದು ಪತ್ತೆಯಾಗುತ್ತಿದೆ.

ಫಾಲ್ಕನ್ ಟೈರ್ಸ್ ಕಾರ್ಖಾನೆ ಮಾರಾಟ

■ ಹರಾಜಿನಲ್ಲಿ ಖರೀದಿಸಿದ ಗಾರ್ಮೆಂಟ್ಸ್ ಕಂಪನಿ ಮಾಲೀಕ ■ ಕಾರ್ಮಿಕರಿಗೆ ಅರೆಬರೆ ಪರಿಹಾರ ವಿತರಣೆ



ಮೈಸೂರಿನ ಫಾಲ್ಕನ್ ಟೈರ್ಸ್ ಕಾರ್ಖಾನೆಯ ಹೊರನೋಟ.

ಮೈಸೂರು,ಆ.2(ಎಸ್‌ಬಿಡಿ)–ಆರ್ಥಿಕ ಅಶಿಸ್ತು, ನಿರ್ವಹಣೆ ವೈಫಲ್ಯ ಇನ್ನಿತರ ಕಾರಣಗಳಿಂದ ದಶಕದ ಹಿಂದೆ ಮುಚ್ಚಲ್ಪಟ್ಟ ಮೈಸೂರಿನ ಫಾಲ್ಕನ್ ಟೈರ್ಸ್ ಕಾರ್ಖಾನೆಯನ್ನು ಇ–ಹರಾಜು ಮೂಲಕ ಗಾರ್ಮೆಂಟ್ಸ್ ಕಂಪನಿಯೊಂದು ಖರೀದಿಸಿರುವುದು ತಡವಾಗಿ ಬೆಳಕಿಗೆ ಬಂದಿದೆ.

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ (ಎನ್‌ಸಿಎಲ್‌ಟಿ)ಯ ಬೆಂಗಳೂರು ಪೀಠವು ನಿಯೋಜಿಸಿದ್ದ ಲಿಕ್ವಿಡೇಟರ್ ಶಿವದತ್ ಬನ್ನಂಜೆ ಮೇಲ್ವಿಚಾರಣೆಯಲ್ಲಿ 2022ರ ಫೆಬ್ರವರಿಯಲ್ಲಿ ಇ–ಹರಾಜು ಪ್ರಕ್ರಿಯೆ ನಡೆದಿದೆ. ಫಾಲ್ಕನ್ ಟೈರ್ಸ್ ಲಿಮಿಟೆಡ್‌ನ 18 ಎಕರೆ ಕೈಗಾರಿಕಾ ಭೂಮಿ, ಕಟ್ಟಡಗಳು, ಸ್ಥಾವರ ಮತ್ತು ಯಂತ್ರೋಪಕರಣಗಳು ಸೇರಿ ಒಟ್ಟು 117.50 ಕೋಟಿ ರೂ. ಮೀಸಲು(ರಿಸರ್ವ್) ಬೆಲೆ ನಿಗದಿಗೊಳಿಸಿ ನಡೆಸಲಾಗಿದ್ದ ಹರಾಜಿನಲ್ಲಿ ಗಾರ್ಮೆಂಟ್ಸ್ ಕಂಪನಿಯೊಂದರ ಮಾಲೀಕರು ಖರೀದಿ ಮಾಡಿರುವುದಾಗಿ ತಿಳಿದುಬಂದಿದೆ. ಆದರೆ ಕಾರ್ಖಾನೆ ಯಥಾಸ್ಥಿತಿಯಲ್ಲಿದ್ದು, ಇನ್ನೂ ಯಾವುದೇ ಕಾರ್ಯ ಚಟುವಟಿಕೆ ಆರಂಭವಾಗಿಲ್ಲ.

ವೇತನ, ಬೋನಸ್, ಗ್ರಾಚ್ಯುಟಿ, ಪಿಎಫ್ ಬಾಕಿ ಸಂಬಂಧ ಫಾಲ್ಕನ್ ಟೈರ್ಸ್ ನೌಕರರು ಎನ್‌ಸಿಎಲ್‌ಟಿ(The National Company Law Tribunal) ಮೊರೆ ಹೋಗಿದ್ದರ ಹಿನ್ನೆಲೆಯಲ್ಲಿ ಪ್ರಕರಣದ ವಿಚಾರಣೆ ನಡೆಸಿದ ಪೀಠವು, ಗ್ರಾಚ್ಯುಟಿ ಹಾಗೂ ಪಿಎಫ್ ನೀಡುವಂತೆ ಆದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಎಲ್ಲಾ ನೌಕರರಿಗೂ ಗ್ರಾಚ್ಯುಟಿ ವಿತರಿಸಲಾಗಿದ್ದು, ಎರಡು ವರ್ಷದ ಪಿಎಫ್ ಮೊತ್ತವನ್ನು ನೀಡಲಾಗಿದೆ ಎಂದು ತಿಳಿದುಬಂದಿದೆ. ಕಾರ್ಖಾನೆ ಪ್ರಾರಂಭಿಸುವಂತೆ ನೊಂದ ಕಾರ್ಮಿಕರು ಬಹು ವರ್ಷಗಳ ಕಾಲ ನಿರಂತರವಾದ ಹೋರಾಟ ನಡೆಸಿದ ನಂತರ ಫಾಲ್ಕನ್ ಟೈರ್ಸ್ ಕಾರ್ಮಿಕ ಸಂಘದಿಂದ ▶ 5ನೇ ಪುಟಕ್ಕೆ

ಕಾರ್ಮಿಕರ ಕಣ್ಣೀರು ಆರಿಲ್ಲ

2015ರ ಆರಂಭದಲ್ಲಿ 2 ತಿಂಗಳು ವೇತನ ನೀಡದೆ, 3ನೇ ತಿಂಗಳು ಕಾರ್ಯಚಟುವಟಿಕೆಯನ್ನೇ ಸ್ಥಗಿತಗೊಳಿಸಿದ್ದರಿಂದ 2 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಅತಂತ್ರರಾದರು. ದಿಕ್ಕು ತೋಚದೆ ಕುಟುಂಬದವರೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿ ಬಳಿ 141 ದಿನ ನಿರಂತರ ಧರಣಿ ನಡೆಸಿದ್ದರ ಪರಿಣಾಮ ಪುನರಾರಂಭಿಸುವ ನಾಟಕವಾಡಿ ಮತ್ತೆ ಬಂದ್ ಮಾಡಲಾಯಿತು. ಇದರಿಂದ ಕಾರ್ಮಿಕರ ಕುಟುಂಬಗಳು ಅಕ್ಷರಶಃ ಬೀದಿಗೆ ಬಿದ್ದವು. ಮಕ್ಕಳ ವಿದ್ಯಾಭ್ಯಾಸಕ್ಕೆ ಶುಲ್ಕ ಭರಿಸಲಾಗದೆ, ಮನೆ ಬಾಡಿಗೆ ಕಟ್ಟಲಾಗದ ದುಃಸ್ಥಿತಿಗೆ ಬಂದರು. 40 ವರ್ಷ ಮೀರಿದ್ದರಿಂದ ಎಲ್ಲಿಯೂ ಕೆಲಸವೂ ಸಿಗದೆ ಕಂಗಾಲಾದರು. ಕೆಲವರು ಆತ್ಮಹತ್ಯೆಗೆ ಶರಣಾದರು. ಹಲವರು ಆಘಾತದಿಂದ ಪ್ರಾಣಬಿಟ್ಟರು. ಈಗಲೂ ಆಘಾತದ ಸಾವಿನ ಸರಣಿ ಮುಂದುವರೆದಿದೆ. ಮನೆ ಯಜಮಾನನನ್ನು ಕಳೆದುಕೊಂಡು ಕುಟುಂಬದವರು ಶೋಕದಲ್ಲಿ ಮುಳುಗುತ್ತಿದ್ದಾರೆ. ಬಾಕಿ ಪಿಎಫ್ ಮೊತ್ತವನ್ನು ಶೀಘ್ರ ಬಿಡುಗಡೆ ಮಾಡಿದರೆ ಸ್ವಲ್ಪ ಸಹಾಯವಾಗುತ್ತದೆ. –ಕಾರ್ಮಿಕರ ಮನವಿ

ನಕ್ಕರೆ ಅದೇ ಸ್ವರ್ಗ

ಅಧಿಕಾರಿ : ನೋಡ್ರಿ ಆಫೀಸನ್ನು ಒಂದು ದೇವಸ್ಥಾನ ಅಂತ ಭಾವಿಸಿಕೊಂಡು ಕೆಲಸ ಮಾಡಬೇಕು.

ಗುಂಡ : ಸರಿ ಸಾರ್..., ಹಾಗೇ ಯಾರಾದರೂ ದಕ್ಷಿಣೆ ಕೊಟ್ಟರೆ ಸ್ವೀಕರಿಸಬಹುದಾ?

ಮೈಸೂರು ಮಿತ್ರ

ಭಾನುವಾರ, 3 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕೊಟ್ಟದ್ದನ್ನು ನೆನೆಯದೆ ಮತ್ತು ಪಡೆದದ್ದನ್ನು ಮರೆಯದೆ ಇರುವವರೇ ಜಗತ್ತಿನಲ್ಲಿ ಧನ್ಯರು...

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪೀತಾಂಬರ ಉಟ್ಟರೂ ಕೊತ್ತಂಬರಿ ಮಾರೋದು ತಪ್ಪಲಿಲ್ಲ.

ನಿಮ್ಮ ಪತ್ರಗಳು

ಅಂದು–ಇಂದು

ಮಾನ್ಯರೆ,

ಅಂದು ಎಲ್ಲರೂ ಒತ್ತು ನೀಡುತ್ತಿದ್ದುದ್ದು– 'ಆಟ–ಪಾಠ–ಓಡಾಟ ಏನಾದರೂ ಸಾಧಿಸಬೇಕೆಂಬ ಹಠ'. ಇಂದು ಎಲ್ಲರ ಆದ್ಯತೆಗಳಿಗೆ ಮುಳುವಾಗಿರುವುದು ಮೊಬೈಲ್‌ನ 'ಚಟ'. ಅಂದು ಮನೆಯಲ್ಲಿ ಎಲ್ಲರೊಂದಿಗೂ ಕುಳಿತು ಮಾತನಾಡುವಾಗ ಸಿಗುತ್ತಿತ್ತು 'ಸುಖ'. ಇಂದು ಕೆಲವರಿಗೆ ಮೂರೂ ಹೊತ್ತು ಇನ್ಸ್ಟಾ'ಗ್ರಾಂ' ಮುಂದೆ ಕುಳಿತು ಏರುತ್ತಿದೆ ಎರಡೆರಡು 'ಕೆಜಿ' ದೇಹದ 'ತೂಕ'. ಅಂದು ಎಲ್ಲಾರೂ Face to Face ಮಾತನಾಡುತ್ತಾ Book ಓದುತ್ತಾ ಕಳೆಯುತ್ತಿದ್ದರು 'ಸಮಯ'. ಇಂದು Facebook ನಿಂದ Face to Face ಮತ್ತು Book ಎರಡೂ 'ಮಂಗಮಾಯ'

ಅಂದು ಬೇಕಾಗಿದ್ದು ಮಾತ್ರ ಕಲಿಯಲು ಇರುತ್ತಿದ್ದವು 'ಯೂನಿವರ್ಸಿಟಿ'. ಇಂದು ಬೇಕಾಗಿದ್ದು ಬೇಡದೇ ಇರುವುದು ಎರಡೂ ಕಲಿಸುತ್ತಿದೆ 'ವ್ಯಾಟ್ಸಾಪ್ ಯುನಿವರ್ಸಿಟಿ'

ಅಂದು ಏನು ಮಾಡಿದರೂ ಮನೆಯ ಹಿರಿಯರು 'Y'(why) ಎಂದು ತೆಗೆಯುತ್ತಿದ್ದರು 'ಕ್ಯಾತೆ'. ಇಂದು ಯಾರು ಹೇಳಿದರೂ ಕೇಳಿಸಲ್ಲ ಓಪನ್ ಮಾಡಿ ಕುಳಿತರೆ 'X' 'ಖಾತೆ'.

ಅಂದು ಇತ್ತು ಒಬ್ಬರಿಗೊಬ್ಬರು Chat ಮಾಡುತ್ತಾ ಹೊಸ ಹೊಸ ವಿಷಯಗಳನ್ನು ಚರ್ಚಿಸುವ 'ವ್ಯವಸ್ಥೆ'. ಇಂದು ತಲುಪಿದ್ದಾರೆ ಎಲ್ಲಾ ವಿಷಯಕ್ಕೂ ಚರ್ಚೆ ಮಾಯವಾಗಿ Chat GPT ಮೊರೆ ಹೋಗುವ 'ಅವಸ್ಥೆ'

ಅಂದು ಎಲ್ಲಾ ಕೆಲಸಕ್ಕೂ ಬೇಕಿತ್ತು 'I'(ನಾನು)

ಇಂದು ನಾನು ಮಾಡುವ ಅನೇಕ ಕೆಲಸ ಮಾಡುತ್ತಿದೆ 'AI'

ಹೊಸ ಹೊಸ ಆವಿಷ್ಕಾರ ಬೇಕೇ ಬೇಕು, ಬೆಳೆಯಲೇ ಬೇಕು ನಿಜ 'ವಿಜ್ಞಾನ' ಆದರೆ ಅದರ ಬಳಕೆಯನ್ನು ಸರಿಯಾಗಿ ಮತ್ತು ಮಿತವಾಗಿ ಬಳಸಿಕೊಂಡಾಗ ಮಾತ್ರ ಉಳಿಯಲು ಮತ್ತು ಬೆಳೆಯಲು ಸಾಧ್ಯ ನಮ್ಮ ಸ್ವಂತ'ಜ್ಞಾನ'.

ಜ್ಞಾನಾರ್ಜನೆಗೆ, ಮನರಂಜನೆಗೆ, ಸುದ್ದಿ ತಿಳಿಯಲು, ವ್ಯವಹಾರ– ವ್ಯಾಪಾರಕ್ಕೆ ಮಿತವಾಗಿ ಆಶ್ರಯಿಸಬೇಕು 'ಸಾಮಾಜಿಕ ಜಾಲತಾಣ'. ಆದರೆ ಅದನ್ನು ಅತಿಯಾಗಿ ದುರ್ಬಳಕೆ ಮಾಡಿಕೊಂಡು ಅಲ್ಲೇ ಆಶ್ರಯ ಪಡೆದು ಮಾಡದಿರಲು ವೃಥಾ 'ಕಾಲಹರಣ'.

–ರಾಘವೇಂದ್ರ ಜೋಯಿಸ್, ಮೈಸೂರು

ಆದೇಶ ಸಡಿಲಗೊಳಿಸುವಂತೆ ಮನವಿ

ಮಾನ್ಯರೆ,

ಪ್ರಸ್ತುತ ಚಾಲ್ತಿಯಲ್ಲಿ ಇರುವ ESI ನಿಯಮಗಳ ಪ್ರಕಾರ ESI ಕಾರ್ಮಿಕರ ಮಾಸಿಕ ವೇತನ 21000 ಇರಬೇಕು. ಇದರ ಪ್ರಕಾರ ಕಾರ್ಮಿಕರು ಪ್ರತಿ ದಿನ 700 ರೂ. ಮಾತ್ರ ಸಂಪಾದನೆ ಮಾಡಬೇಕು. ಈ ಆದೇಶವನ್ನು ಸಡಿಲಗೊಳಿಸಿ 35000 ರೂ.ಗೆ ಇರುವಂತೆ ಮಾಡಿ ಕಾರ್ಮಿಕರಿಗೆ ಸಹಾಯ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳು ಮತ್ತು ಇಲಾಖೆಗೆ ಈ ಪತ್ರದ ಮೂಲಕ ಮನವಿ.

–ಮನೋಜ್ ಕುಮಾರ್, ವೆಂಕಟರಾಜು, ಎನ್.ಆರ್.ಮೊಹಲ್ಲಾ, ಮೈಸೂರು

ಶಕ್ತಿಶಾಲಿ ಭಾರತ ಅಮೆರಿಕದಿಂದ ಪಾಠ ಕಲಿಯಬೇಕಿಲ್ಲ

ಮಾನ್ಯರೆ,

ಭಾರತದ್ದು 'ಸತ್ತ' ಆರ್ಥಿಕತೆ ಎಂಬ ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ಹೇಳಿಕೆ ಬಾಲಿಶತನದಿಂದ ಕೂಡಿದೆ. ಜಗತ್ತಿನ ಹಲವು ದೇಶಗಳ ಆಂತರಿಕ ವಿಚಾರಗಳಲ್ಲಿ ತನ್ನ ಮೂಗು ತೂರಿಸಿ ದಿನಕ್ಕೊಂದು ಹೇಳಿಕೆ ನೀಡುತ್ತಾ ಬಂದಿರುವ ಟ್ರಂಪ್, ನಮ್ಮ ಭಾರತದ ಬಗ್ಗೆ ಮಾತನಾಡುವಾಗ ಪ್ರಜ್ಞಾವಂತಿಕೆಯಿಂದ ಮಾತನಾಡುವುದೊಳಿತು. ಭಾರತ ಇಂದಿಗೆ ಬಹಳ ಶಕ್ತಿಶಾಲಿ ದೇಶವಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಭಾರತದ ಶಕ್ತಿ ಅದರ ಜನಸಂಖ್ಯೆ. ಭಾರತದ ಜನಸಂಖ್ಯೆಯನ್ನು ಶಾಪ ಎನ್ನುವಂತೆ ಈ ಹಿಂದೆ ಬಿಂಬಿಸಲಾಗುತ್ತಿತ್ತು. ಆದರೆ ಇಂದಿಗೆ ಅದೇ ಜನಸಂಖ್ಯೆಯನ್ನು ಭಾರತ ವಿಶ್ವ ಮಟ್ಟದಲ್ಲಿ ವರವನ್ನಾಗಿಸಿ ಪ್ರಪಂಚದ ಹಲವು ದೇಶಗಳ ಜೊತೆಗೆ ಉತ್ತಮ ಬಾಂಧವ್ಯ ಹೊಂದುವ ಮೂಲಕ ತನ್ನ ಮೇಲೆ ಏರುವ ಇತರ ದೇಶಗಳ ತೆರಿಗೆಗಳನ್ನು, ನಿರ್ಬಂಧಗಳನ್ನು ಸಲೀಸಾಗಿ ನಿಭಾಯಿಸುವ ಜಾಣ್ಮೆ ಹಾಗೂ ತಾಕತ್ತು ಎರಡೂ ಕೂಡ ಭಾರತಕ್ಕಿದೆ.

ಭಾರತ ಹಾಗೂ ರಷ್ಯಾ ದೇಶಗಳು ಉತ್ತಮ ಬಾಂಧವ್ಯವನ್ನು ಹೊಂದಿದ್ದು, ಪರಸ್ಪರ ವ್ಯಾಪಾರ ವಹಿವಾಟುಗಳೊಂದಿಗೆ ಸ್ನೇಹಮಯಿ ದೇಶಗಳಾಗಿವೆ. ಹೀಗಿರುವಾಗ ಇವತ್ತಿಗೆ ಜಗತ್ತಿನಲ್ಲಿ ಯಾರು ಯಾರೊಂದಿಗೆ ವ್ಯಾಪಾರ ಮಾಡಬೇಕು ಮತ್ತು ಮಾಡಬಾರದು ಎನ್ನುವುದನ್ನು ಯಾರು ನಿರ್ದೇಶಿಸುವಂತಿಲ್ಲ. ಈ ಸತ್ಯ ಟ್ರಂಪ್‌ಗೆ ಗೊತ್ತಿರದೆ ಇರದು. ಜಾಗತಿಕವಾಗಿ ಹಣ ಮತ್ತು ಅಧಿಕಾರದ ಮೇಲಿನ ಹಿಡಿತಕ್ಕೆ ಹಾತೊರೆಯುತ್ತಿರುವ ಅಮೆರಿಕ, ಭಾರತದ ಸರಕುಗಳ ಮೇಲೆ ತನ್ನ ದೇಶದಲ್ಲಿ ಶೇಕಡ 25ರಷ್ಟು ಸುಂಕ ವಿಧಿಸುವುದರ ಮೂಲಕ ಭಾರತದ ಆರ್ಥಿಕತೆಯ ವೇಗವನ್ನು ಕಟ್ಟಿಹಾಕಲು ಸಾಧ್ಯವಿಲ್ಲ ಎಂಬುದನ್ನು ಮನಗಾಣಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಮನೆ ಮನೆಗೆ ಪೊಲೀಸ್ ವಿನೂತನ ಪ್ರಯೋಗ

ಮಾನ್ಯರೆ,

ಮೈಸೂರಿನಲ್ಲಿ ಮನೆ ಮನೆಗೆ ಪೊಲೀಸ್ ವಿನೂತನ ಕಾರ್ಯಕ್ರಮವನ್ನು ಜನರ ಹಾಗೂ ಪೊಲೀಸರ ನಡುವಣ ಅಂತರವನ್ನು ಕಡಿಮೆ ಮಾಡುವ ಉದ್ದೇಶದಿಂದ ಚಾಲನೆ ನೀಡಿರುವುದು ಸ್ವಾಗತಾರ್ಹ. ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಾವಗಲ್ ಶ್ರೀನಾಥ್ ಅವರು, ಜನರನ್ನು ಕೆಲಸದಿಂದ ಸಮಾಧಾನ ಪಡಿಸುವುದು ಕಷ್ಟವಿದೆ. ಪೊಲೀಸರು ಮನೆ ಮನೆಗೆ ಬಂದು ಹೋದರೆ ಕಾನೂನು ಸುವ್ಯವಸ್ಥೆ ಬಗ್ಗೆ ಜನರಿಗೆ ಅರಿವು ಮೂಡಿ ಎಲ್ಲರಲ್ಲೂ ಸ್ನೇಹ ಭಾವ ಬೆಳೆದು ಇದೊಂದು ಅದ್ಭುತ ಕೆಲಸವಾಗುವುದರಲ್ಲಿ ಸಂಶಯವಿಲ್ಲ ಎಂದು ಹೇಳಿರುವುದು ಶ್ಲಾಘನೀಯ. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ಮಾತನಾಡಿ, ಸಮಾಜದಲ್ಲಿ ಶಾಂತಿಯುತ ವಾತಾವರಣ ನಿರ್ಮಾಣ ಮಾಡುವುದು ನಮ್ಮ ಮೂಲ ಉದ್ದೇಶವಾಗಿದ್ದು, ಬೀಟ್ ಕಾನ್‌ಸ್ಟೇಬಲ್ ಕ್ಲಸ್ಟರ್ ಮಾಡಿ ಒಂದು ಕ್ಲಸ್ಟರ್‌ನಲ್ಲಿ 40 ರಿಂದ 50 ಮನೆಗಳು ಇದ್ದು, ಮನೆ–ಮನೆಗೆ ಬರುವ ಬೀಟ್ ಪೊಲೀಸರಿಗೆ ಜನರು ತಮ್ಮ ಬಡಾವಣೆಯ ಅನುಮಾನಾಸ್ಪದ ವಿಷಯಗಳ ಕುರಿತು ಸ್ಪಷ್ಟ ಮಾಹಿತಿ ನೀಡಬಹುದು. ಇಂತಹ ವಿನೂತನ ಕಾರ್ಯಕ್ರಮ ಯಶಸ್ವಿಯಾಗಲು ನಾಗರಿಕರ ಬೆಂಬಲ ಅತ್ಯಗತ್ಯ, ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಪೊಲೀಸ್ ಕಾರ್ಯಕ್ಕೆ ಒತ್ತಾಸೆಯಾಗಿ ನಿಲ್ಲಬೇಕು ಎಂದು ಮನವಿ ಮಾಡಿರುವುದು ಪ್ರತಿಯೊಬ್ಬರೂ ಮೆಚ್ಚುವಂತದ್ದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಮಾನವತಾವಾದಿ, ಆದರ್ಶ ದೊರೆ

ಚುನಾವಣೆಯ ಸಮಯ.
ಜಯಮ್ಮ, ಯಾರಿಗೆ ಓಟು ಹಾಕುತ್ತೀಯೇ
ಮಾರಾಜ್ರಿಗೆ ಅಮ್ಮೋರೇ
ಅಲ್ವೇ, ಮತ್ತೆ ಕಾಂಗ್ರೆಸ್ಸಿನೋರು ದುಡ್ಡು ಕೊಟ್ಟಿದ್ದಾರಲ್ಲ
ಹೌದಮ್ಮ. ಬಿಜೆಪಿಯೋರೂ ಕೊಟ್ಟಿದ್ದಾರೆ.
ಮತ್ತೆ
ಇಬ್ರ ಹತ್ರಾನೂ ದುಡ್ಡು ತೊಗೊಳೋದು. ಓಟು ಮಾರಾಜ್ರೇ ಹಾಕೋದು ಅದೇನು

ಅಲ್ಲಮ್ಮ, ನಮ್ಮ ಅಟ್ಟೀತಂಕ ಬಂದು ಕೈಮುಗೀಬೇಕಾ? ಅವ್ರು ದ್ಯಾವ್ರು, ಅವ್ರನ್ನ ಸಂದಾಗಿಟ್ಟಿರ್ಲಿ.

ನನ್ನನ್ನು ಆಲೋಚಿಸುವಂತೆ ಮಾಡಿದ್ದು, ಎಲ್ಲ ಸ್ತರದ ಪ್ರಜೆಗಳಲ್ಲೂ ಇನ್ನೂ ಉಳಿದು ಬಂದಿರುವ ರಾಜವಂಶದ ಬಗೆಗಿನ ಭಕ್ತಿ. ಹಳೇ ಮೈಸೂರು ಪ್ರಾಂತ್ಯದ ಎಲ್ಲರಲ್ಲೂ ಮಹಾರಾಜರನ್ನು, ಅವರ ವಂಶಸ್ಥರನ್ನು ಕುರಿತಾದ ರಾಜಭಕ್ತಿ, ಕೃತಜ್ಞತಾ ಭಾವ ಮಡುಗಟ್ಟಿರುವುದನ್ನು ನಾನು ಕಂಡಿದ್ದೇನೆ. ಇದು ಸುಮ್ಮಸುಮ್ಮನೇ ಬರುವಂಥದ್ದು ಖಂಡಿತಾ ಅಲ್ಲ. ಮೈಸೂರಿನ ರಾಜ ಸಿಂಹಾಸನದ ಮೇಲೆ ಕುಳಿತು ರಾಜ್ಯಭಾರ ಮಾಡಿದ ಎಲ್ಲ ಅರಸರಲ್ಲೂ ಎದ್ದು ಕಾಣುವ ಗುಣ ಎಂದರೆ ಪ್ರಜಾ ವಾತ್ಸಲ್ಯ ಮತ್ತು ನಾಡಿನ ಸರ್ವತೋಮುಖ ಏಳಿಗೆಗೆ ಆದ್ಯತೆ. ಆಳುವವರಿಗೆ ಈ ಗುಣಗಳು ಇದ್ದಲ್ಲಿ ಪ್ರಜೆಗಳು ಅವರನ್ನು ಸದಾ ಸ್ಮರಿಸುವುದರಲ್ಲಿ ಅಚ್ಚರಿ ಏನು. ಮೈಸೂರನ್ನು ಆಳಿದ ಮಹಾಪ್ರಭುಗಳಲ್ಲೆಲ್ಲ ಪ್ರಜೆಗಳ ಬಗೆಗೆ ಇದ್ದ ಕಾಳಜಿಯನ್ನು ಗಮನಿಸಿದಾಗ ಹೃದಯ ತುಂಬಿ ಬರುವುದರಲ್ಲಿ ಆಶ್ಚರ್ಯವೇನು.

ಯದುರಾಯರಿಂದ ಆರಂಭವಾಯಿತು ಎಂದು ಹೇಳಲಾಗುವ ಈ ವಂಶಸ್ಥರು ವಿಜಯನಗರ ಸಾಮ್ರಾಜ್ಯದಲ್ಲಿ ಇದ್ದಂತಹ ಉದಾರ ಗುಣಗಳನ್ನು ಮೈಗೂಡಿಸಿಕೊಂಡದ್ದು ಪ್ರಜೆಗಳ ಅದೃಷ್ಟವೇ ಸರಿ. ಹಲವು ಅನಿವಾರ್ಯ ಸಂದರ್ಭಗಳಲ್ಲಿ ರಾಜ್ಯಭಾರದ ಸೂತ್ರವನ್ನು ಕೈಗೆತ್ತಿಕೊಂಡ ಈ ವಂಶದ ಮಹಾರಾಣಿಯವರುಗಳೂ ತಮ್ಮ ದೂರದರ್ಶಿತ್ವ ಹಾಗೂ ವಿಚಕ್ಷಣತೆಯಿಂದ, ಕರುಣೆಯಿಂದ, ನಿಸ್ವಾರ್ಥ ಮನೋಭಾವದಿಂದ ನಾಡಿಗೆ ಅಮೋಘ ಸೇವೆಯನ್ನು ಸಲ್ಲಿಸಿದ್ದಾರೆ ಎಂಬುದು ವಾಸ್ತವ. ಆಳಿದ ಎಲ್ಲ ಪ್ರಭುಗಳಲ್ಲಿ ತಮ್ಮ ಮಾನವೀಯ ಮೌಲ್ಯಗಳಾದ ಸಮಾನತೆ, ದಯೆ, ಕರುಣೆ ಹಾಗೂ ಪ್ರಗತಿಪರ ಧೋರಣೆಗಳಿಂದ ಎದ್ದು ಕಾಣುವ ಹೆಸರೆಂದರೆ, ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರ್ ಅವರದು.

ಮಹಾರಾಜ ಹತ್ತನೆಯ ಚಾಮರಾಜ ಒಡೆಯರ್ ಮತ್ತು ಕೆಂಪು ನಂಜಮ್ಮಣ್ಣಿ (ವಾಣಿವಿಲಾಸ ಸನ್ನಿಧಿ) ಅವರ ಮಗನಾಗಿ ಜನಿಸಿದ (1884) ನಾಲ್ವಡಿ ಕೃಷ್ಣರಾಜ ಒಡೆಯರರು ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡರೂ ತಾಯಿಯವರ ಕಟ್ಟುನಿಟ್ಟಿನ ಕಣ್ಗಾವಲಿನಲ್ಲಿ ಶಿಸ್ತುಬದ್ಧ ಜೀವನವನ್ನು ರೂಪಿಸಿಕೊಂಡವರು. ವಿದ್ಯೆಯ ಜೊತೆಗೆ ವಿನಯವನ್ನೂ ಮೈಗೂಡಿಸಿಕೊಂಡಿದ್ದ ಈ ಮುತ್ಸದ್ದಿಯು ಬಾಲ್ಯದಲ್ಲೇ ತಮ್ಮ ಅಪರೂಪದ ಗುಣಗಳನ್ನು ಪ್ರದರ್ಶಿಸಿ, ಮುಂದೆ ತಾವು ಅತ್ಯಂತ ಉತ್ತಮ ಆಡಳಿತಗಾರರಾಗುವರೆಂಬುದರಲ್ಲಿ ಸಂಶಯವಿಲ್ಲ ಎಂಬುದನ್ನು ಎಲ್ಲರಿಗೂ ಮನದಟ್ಟು ಮಾಡಿಸಿದ್ದರು.

ರಾಜರಿಗೆ ಅಗತ್ಯವಾಗಿ ಬೇಕಿದ್ದ ರಾಜ್ಯಾಡಳಿತ ಮತ್ತು ನ್ಯಾಯ ಶಾಸನ ಅಲ್ಲದೆ ಕುದುರೆ ಸವಾರಿ, ವ್ಯಾಯಾಮ, ಈಜು, ಭಾರತೀಯ ಮತ್ತು ಪಾಶ್ಚಾತ್ಯ ಸಂಗೀತ, ಗಣಿತ, ವಿಜ್ಞಾನ, ಕನ್ನಡ, ಇಂಗ್ಲಿಷ್, ಉರ್ದು, ಸಂಸ್ಕೃತ ಮುಂತಾದ ವಿಷಯಗಳ ಅಧ್ಯಯನದಿಂದ ಅವರಲ್ಲಿ ಸರ್ವತೋಮುಖ ಬೆಳವಣಿಗೆಗೆ ಅಗತ್ಯವಿದ್ದ ಎಲ್ಲ ವಿದ್ಯೆಗಳನ್ನೂ ಕಲಿಸಲಾಗಿತ್ತು. ತಮ್ಮ ಹನ್ನೊಂದನೆಯ ಎಳೆಯ ವಯಸ್ಸಿನಲ್ಲಿ ಪಟ್ಟಾಭಿಷಿಕ್ತಗೊಂಡ ಅವರು ತಮ್ಮ ಹದಿನೆಂಟನೆಯ ವಯಸ್ಸಿನಿಂದ ರಾಜ್ಯಭಾರ ಸೂತ್ರವನ್ನು ತಮ್ಮ ಕೈಗೆ ತೆಗೆದುಕೊಂಡರು.

ದೇಶದಲ್ಲಿ ಬ್ರಿಟಿಷ್ ಸಾರ್ವಭೌಮತ್ವ ಇದ್ದರೂ ಮೈಸೂರು ಮಹಾರಾಜರ ಸರ್ಕಾರ ಎಂದೇ ಹೆಸರು ಗಳಿಸಿತ್ತು. ಧರ್ಮಬದ್ಧವಾದ



ಶ್ರೀ ಮನ್ನಾಲ್ವಡಿ ಕೃಷ್ಣರಾಜ ಒಡೆಯರ್

> ಸರಕಾರದ ಹಣವನ್ನು ಎಂದೂ ತಮ್ಮ ಸ್ವಂತಕ್ಕೆ ಬಳಸದೆ, ತಮ್ಮ ಸ್ವಂತ ಹಣವನ್ನು ಜನೋಪಯೋಗಿ ಕಾರ್ಯಗಳಿಗೆ ಬಳಸಲು ಎಂದೂ ಹಿಂದೇಟು ಹಾಕದ, ಪ್ರಜಾಹಿತವನ್ನೇ ತಮ್ಮ ಗುರಿಯಾಗಿಸಿಕೊಂಡಿದ್ದವರು ಅವರು. ಜನತೆಯ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ, ಕೃಷಿ, ಅರಣ್ಯ, ನೀರಾವರಿ, ಕೈಗಾರಿಕೆ, ವಿದ್ಯುಚ್ಛಕ್ತಿ, ಸಾರಿಗೆ, ಶಿಕ್ಷಣ, ವಿಜ್ಞಾನ, ವಾಣಿಜ್ಯ, ವ್ಯಾಪಾರ ಒಂದೊಂದು ವಿಷಯದಲ್ಲೂ ಅವರು ತಂದ ಸುಧಾರಣೆಗಳು, ಹೊಸ ಪ್ರಯೋಗಗಳು ಅವರೊಬ್ಬ ಅತ್ಯುತ್ತಮ ಆಡಳಿತಗಾರ ಎಂಬುದನ್ನು ಜಗತ್ತಿಗೇ ಅರುಹಿತು.

ರಾಜತ್ವ ಮತ್ತು ಜನೋಪಯೋಗಿ ಆಲೋಚನೆಗಳೆ ಅವರ ಆಳ್ವಿಕೆಯ ಬುನಾದಿ ಎಂದರೂ ತಪ್ಪಿಲ್ಲ. ಸರಕಾರದ ಹಣವನ್ನು ಎಂದೂ ತಮ್ಮ ಸ್ವಂತಕ್ಕೆ ಬಳಸದೆ, ತಮ್ಮ ಸ್ವಂತ ಹಣವನ್ನು ಜನೋಪಯೋಗಿ ಕಾರ್ಯಗಳಿಗೆ ಬಳಸಲು ಎಂದೂ ಹಿಂದೇಟು ಹಾಕದ, ಪ್ರಜಾಹಿತವನ್ನೇ ತಮ್ಮ ಗುರಿಯಾಗಿಸಿಕೊಂಡಿದ್ದವರು ಅವರು. ಜನತೆಯ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ, ಕೃಷಿ, ಅರಣ್ಯ, ನೀರಾವರಿ, ಕೈಗಾರಿಕೆ, ವಿದ್ಯುಚ್ಛಕ್ತಿ, ಸಾರಿಗೆ, ಶಿಕ್ಷಣ, ವಿಜ್ಞಾನ, ವಾಣಿಜ್ಯ, ವ್ಯಾಪಾರ ಒಂದೊಂದು ವಿಷಯದಲ್ಲೂ ಅವರು ತಂದ ಸುಧಾರಣೆಗಳು, ಹೊಸ ಪ್ರಯೋಗಗಳು ಅವರೊಬ್ಬ ಅತ್ಯುತ್ತಮ ಆಡಳಿತಗಾರ ಎಂಬುದನ್ನು ಜಗತ್ತಿಗೇ ಅರುಹಿತು.

ಮೈಸೂರಿನಲ್ಲಿ 1903ರಲ್ಲಿಯೇ 8 ಜಿಲ್ಲಾ ಬೋರ್ಡುಗಳು, 22 ತಾಲೂಕು ಮಂಡಳಿಗಳು ಮತ್ತು ಮೈಸೂರು ನಗರಾಭಿವೃದ್ಧಿ ಮಂಡಲಿಗಳು ರಚಿತವಾಗಿದ್ದುವು. 1905ರಲ್ಲಿ ಬೆಂಗಳೂರಿಗೆ ಪ್ರಥಮವಾಗಿ ವಿದ್ಯುಚ್ಛಕ್ತಿ ದೀಪಗಳು ಅಳವಡಿಸಲ್ಪಟ್ಟವು. ನಂತರ ಮೈಸೂರಿಗೂ ಆ ಸೌಲಭ್ಯವನ್ನು ಕಲ್ಪಿಸಿಕೊಡಲಾಯಿತು. ಕೃಷ್ಣರಾಜ ಒಡೆಯರ ಕಾಲದಲ್ಲಿಯೇ ಕೃಷ್ಣರಾಜ ಸಾಗರ ಜಲಾಶಯದ ಕಾರ್ಯ ಆರಂಭವಾದುದು. ಇದರಿಂದ ನಮ್ಮ ರೈತರಿಗೆ ಆದ ಅನುಕೂಲವನ್ನು ಬಣ್ಣಿಸಲು ಸಾಧ್ಯವೇ. ಜೋಗದ ಬಳಿ ಶರಾವತಿ ನದಿಗೆ ವಿದ್ಯುದಾಗರವನ್ನು ನಿರ್ಮಿಸುವ ಕಾರ್ಯವೂ ಇವರ ಕಾಲದಲ್ಲೇ ಆರಂಭವಾದುದು. ಅನೇಕ ಆಸ್ಪತ್ರೆ, ಮೆಡಿಕಲ್ ಕಾಲೇಜು, ಹಲವು ಕಾರ್ಖಾನೆಗಳು, ಕೈಗಾರಿಕೆಗಳು ಎಲ್ಲವೂ ಭರದಿಂದ ಮುನ್ನಡೆಯ ಹಾದಿಯಲ್ಲಿ ನಡೆಯಲಾರಂಭಿಸಿದುವು. ಸಂಸ್ಕೃತಿ ಮತ್ತು ಸಾಹಿತ್ಯವೂ ಇವರ ಕಾಲದಲ್ಲಿ ಅಪಾರ ಪ್ರೋತ್ಸಾಹವನ್ನು ಕಂಡಿತು. ಕನ್ನಡ ಸಾಹಿತ್ಯ ಪರಿಷತ್ತು ಅವರ ಕಲ್ಪನೆಯ ಕೂಸು. ಸ್ವತಃ ಸಂಗೀತ ಶಿಕ್ಷಣವನ್ನು ಪಡೆದಿದ್ದ ಮಹಾರಾಜರು ಮೈಸೂರಿನ ಸಂಗೀತ ವಿದ್ವಾಂಸರಿಗೆ, ಕಲಾವಿದರಿಗೆ ಅದೆಷ್ಟು ಪ್ರೋತ್ಸಾಹ ನೀಡಿದರೆಂದರೆ, ಅಂದು ಇಡೀ ಭಾರತದ ಕಲಾಲೋಕದಲ್ಲಿ ಮೈಸೂರಿನ ಸ್ಥಾನವು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಾದುದಾಗಿತ್ತು. ಮೈಸೂರು ಎಂದರೆ ಒಂದು ಆದರ್ಶ ಹಾಗೂ ಮಾದರಿ ಸಂಸ್ಥಾನ ಎಂದು ಹೆಸರು ಗಳಿಸಿತ್ತು. ಮಹಾತ್ಮ ಗಾಂಧಿಯವರು, ನಾಲ್ವಡಿ ಕೃಷ್ಣರಾಜ ಒಡೆಯರನ್ನು ರಾಜರ್ಷಿ ಎಂದು ಕರೆದರು. ಅವರ ಆಳ್ವಿಕೆಯ ಮೈಸೂರನ್ನು ರಾಮರಾಜ್ಯ ಎಂದರು.

ಸಮಾನತೆ ಎಂಬುದು ಅವರಲ್ಲಿ ಸಹಜವಾಗಿಯೇ ಮೈಗೂಡಿದ್ದ ಗುಣ. ಅದರ ಫಲವಾಗಿಯೇ ಹಿಂದುಳಿದ ವರ್ಗದವರಿಗೆ ಶಿಕ್ಷಣ ನೀಡುವುದರಲ್ಲಾಗಲಿ, ಇತರ ಸೌಲಭ್ಯಗಳನ್ನು ಒದಗಿಸುವುದರಲ್ಲಾಗಲೀ ಅವರು ಸದಾ ಮುಂದು. ಲಂಬಾಣಿ, ಬೋವಿ, ಕುರುಬ ಮುಂತಾದ ಎಲ್ಲ ಹಿಂದುಳಿದ ವರ್ಗದವರಿಗೂ, ಹೆಣ್ಣು ಮಕ್ಕಳಿಗೂ ಶಿಕ್ಷಣ ನೀಡಲು ಅವರು ಆದ್ಯತೆಯನ್ನು ಕೊಟ್ಟವರು. ಇವರು ಪಟ್ಟಾಭಿಷಿಕ್ತರಾಗುವ ಮೊದಲು ಆಡಳಿತದ ಚುಕ್ಕಾಣಿಯನ್ನು ಹಿಡಿದಿದ್ದವರು ಇವರ ತಾಯಿ ವಾಣಿವಿಲಾಸ ಸನ್ನಿಧಾನ ಕೆಂಪು ನಂಜಮ್ಮಣ್ಣಿಯವರೂ ಮಹಿಳೆಯರಿಗಾಗಿ ಆಸ್ಪತ್ರೆ, ಶಾಲಾ–ಕಾಲೇಜುಗಳನ್ನು ಮೈಸೂರಿನಲ್ಲಿ ಆರಂಭಿಸಿ, ಮಹಿಳಾ ಶಿಕ್ಷಣ ಹಾಗೂ ಸ್ವಾತಂತ್ರ್ಯಕ್ಕೆ ಒತ್ತು ನೀಡಿದ್ದರು. ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ಗಾಗಿ ಅರಮನೆಯ ಭೂಮಿಯನ್ನು ನೀಡಿದವರು ಆಕೆ. ಬಡ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನೂ ನೀಡುತ್ತಿದ್ದ ಇವರು ಬೇರೆ ಊರಿನಿಂದ ಬರುವ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯವನ್ನೂ ಕಟ್ಟಿಸಿದ್ದರು. ಅದೆಲ್ಲಕಿಂತ ಹೆಚ್ಚಾಗಿ ಕನ್ನಂಬಾಡಿ ಕಟ್ಟೆ ಕಟ್ಟಲು ಹಣದ ಅಡಚಣೆ ಉಂಟಾದಾಗ ಅರಮನೆಯ ಎಲ್ಲ ಮುತ್ತು, ರತ್ನ, ಒಡವೆ ವಸ್ತ್ರಗಳನ್ನು ಮಾರಿ ತಮ್ಮ ಅಮೂಲ್ಯ ಉದಾರತೆಯನ್ನು ಮೆರೆದಿದ್ದರು.

ಕಾವೇರಿ ನದಿಯಿಂದ ಮೈಸೂರು ನಗರಕ್ಕೆ ನೂತನ ಪೈಪುಗಳಲ್ಲಿ ನೀರನ್ನು ಸರಬರಾಜು ಮಾಡಿ, ಶೋಧಿಸಿ ಅದನ್ನು ನಾಗರಿಕರಿಗೆ ಪೂರೈಸುವ ವ್ಯವಸ್ಥೆಯನ್ನು ಆರಂಭಿಸಿದವರು ಈಕೆಯೇ. ಮಗನಲ್ಲೂ ಈ ಜನಸೇವಾ ಮನೋಭಾವವನ್ನು ಹುಟ್ಟುಹಾಕಿದುದರಲ್ಲಿ ವಿಶೇಷವೇನು. ಅವರ ಹಾದಿಯಲ್ಲೇ ನಡೆದ ನಾಲ್ವಡಿಯವರು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ, ಬಾವಿಗಳ ಸ್ವಚ್ಛತೆಗೆ ವಿಶೇಷ ಗಮನ ನೀಡಿದರು. ಇವರ ಆಳ್ವಿಕೆಯಲ್ಲಿ ತೋಟಗಾರಿಕೆಯೂ ಸಹ ತುಂಬಾ ಅಭಿವೃದ್ಧಿ ಹೊಂದಿತು. ಸಂಗೀತ, ನೃತ್ಯ, ನಾಟಕ, ಸಾಹಿತ್ಯ ಎಲ್ಲವೂ ಇವರ ನಿರಂತರ ಪ್ರೋತ್ಸಾಹದಿಂದ ಸಮೃದ್ಧವಾಗಿ ಬೆಳೆಯಲು ಸಾಧ್ಯವಾಯಿತು.

ಈಗ ಹೇಳಿ, ಇಂತಹ ಶ್ರೇಷ್ಠ ಆಡಳಿತಗಾರರನ್ನು, ಪ್ರಜಾಪಾಲಕನನ್ನು, ಓಟಿಗಾಗಿ ಏನನ್ನು ಮಾಡಲೂ ತಯಾರಾಗುವ, ಸ್ವಾರ್ಥ ಮತ್ತು ತನ್ನ ಕುಟುಂಬದ ಏಳಿಗೆಯನ್ನೇ ಗುರಿಯಾಗಿಸಿಕೊಳ್ಳುವ, ಸ್ವಿಸ್ ಬ್ಯಾಂಕುಗಳಲ್ಲಿ ಕಪ್ಪು ಹಣವನ್ನು ಕೂಡಿಡುವ, ಪದವಿಗಾಗಿ ಕಚ್ಚಾಡುವ ಇಂದಿನ ಯಾವುದೇ ರಾಜಕಾರಣಿಗೆ ಹೋಲಿಸಲು ಸಾಧ್ಯವೇ

ಮಹಾರಾಣಿ ಟ್ರೋಫಿ ಗೆಲ್ಲುವ ಉತ್ಸುಕತೆಯಲ್ಲಿ ಮೈಸೂರು ವಾರಿಯರ್ಸ್ ಮಹಿಳಾ ತಂಡ

ಶುಭಾ ಸತೀಶ್ ನೇತೃತ್ವದ ತಂಡ ಪ್ರಕಟಿಸಿದ ತಂಡದ ಮಾಲೀಕರೂ ಆದ ಸೈಕಲ್ ಪ್ಯೂರ್ ಅಗರ್‌ಬತ್ತೀಸ್ ಎಂಡಿ ಅರ್ಜುನ ರಂಗಾ

ಮೈಸೂರು, ಆ.2(ಎಂಟಿವೈ)–ಬೆಂಗಳೂರು ಹೊರವಲಯದ ಆಲ್ದೂರು ಮೈದಾನದಲ್ಲಿ ಆ.5ರಿಂದ 10ರವರೆಗೆ ನಡೆಯಲಿರುವ ಚೊಚ್ಚಲ ಮಹಾರಾಣಿ ಟ್ರೋಫಿ ಕೆಎಸ್‌ಸಿಎ ಟಿ–20 ಪಂದ್ಯಾವಳಿಯಲ್ಲಿ ಸೆಣಸಲಿರುವ ಮೈಸೂರು ವಾರಿಯರ್ಸ್ ಮಹಿಳಾ ತಂಡದ ಸದಸ್ಯರನ್ನು ಪ್ರಕಟಿಸಲಾಗಿದ್ದು, ತಂಡದ ನಾಯಕಿಯಾಗಿ ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತದ ಮಹಿಳಾ ತಂಡ ಪ್ರತಿನಿಧಿಸಿದ್ದ ಹಾಗೂ ಆರ್‌ಸಿಬಿ ಮಹಿಳಾ ತಂಡದ ಆಟಗಾರ್ತಿ ಶುಭಾ ಸತೀಶ್ ಆಯ್ಕೆಯಾಗಿದ್ದಾರೆ.

ಮೈಸೂರಿನ ಮಾನಸ ಗಂಗೋತ್ರಿಯ ರೀಜೆಂಟಾ ಜವಾಜಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ನಡೆದ ವರ್ಣರಂಜಿತ ಕಾರ್ಯಕ್ರಮದಲ್ಲಿ ಮಹಾರಾಣಿ ಟ್ರೋಫಿಯಲ್ಲಿ ಮೈಸೂರು ವಾರಿಯರ್ಸ್ ಮಹಿಳಾ ತಂಡದ ಆಟಗಾರರನ್ನು ಪರಿಚಯಿಸಲಾಯಿತು.

ಇದೇ ಮೊದಲ ಬಾರಿಗೆ ಟಿ–20 ಮಾದರಿಯಲ್ಲಿ ಮಹಿಳೆಯರಿಗೆ ಮಹಾರಾಣಿ ಟ್ರೋಫಿ ಟೂರ್ನಿಯನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ವತಿಯಿಂದ ಆಯೋಜಿಸಲಾಗಿದೆ. ಈ ಪಂದ್ಯಾವಳಿಯಲ್ಲಿ ಮೈಸೂರು ವಾರಿಯರ್ಸ್, ಹುಬ್ಬಳ್ಳಿ ಟೈಗರ್ಸ್, ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್, ಮಂಗಳೂರು ಡ್ರಾಗನ್ಸ್ ಮತ್ತು ಶಿವಮೊಗ್ಗ ಲಯನ್ಸ್ ತಂಡಗಳು ಟೂರ್ನಿಯಲ್ಲಿ ಪರಸ್ಪರ ಸೆಣಸಲಿವೆ.

ಕಾರ್ಯಕ್ರಮದಲ್ಲಿ ಮೈಸೂರು ವಾರಿಯರ್ಸ್ ತಂಡದ ಮಾಲೀಕರೂ ಆದ ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗಾ ಮಾತನಾಡಿ, ಚೊಚ್ಚಲ ಮಹಾರಾಣಿ ಟ್ರೋಫಿಯಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸಲಿರುವ ಮಹಿಳಾ ಆಟಗಾರರ ಘೋಷಿಸಿರುವುದು ಸಂತೋಷ ತಂದಿದೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿರುವ ಶುಭಾ ಸತೀಶ್ ಅವರು ನಮ್ಮ ತಂಡದ ನಾಯಕಿಯಾಗಿ ಆಯ್ಕೆಯಾಗಿರುವುದಕ್ಕೆ ಹೆಮ್ಮೆಪಡುತ್ತೇವೆ. ಮೈಸೂರಿನವರೇ ಮೈಸೂರು ತಂಡವನ್ನು ಮುನ್ನಡೆಸುತ್ತಿರುವುದು ಖುಷಿಯ ಸಂಗತಿ. ನಮ್ಮ ಸಂಸ್ಥೆಯು ಮಹಿಳಾ ಕ್ರಿಕೆಟ್‌ಗೆ ಕೊಡುಗೆ ನೀಡಲು ಬಹಳ ಉತ್ಸುಕವಾಗಿದೆ ಎಂದರು.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಎನ್.ಆರ್.ಫೌಂಡೇಷನ್ ಛೇರ್ಮನ್ ಆರ್.ಗುರು ಹಾಗೂ ಮೈಸೂರು ವಾರಿಯರ್ಸ್ ತಂಡದ ಮಾಲೀಕರೂ ಆದ ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗಾ ಅವರೊಂದಿಗೆ ಮೈಸೂರು ವಾರಿಯರ್ಸ್ ಮಹಿಳಾ ತಂಡದ ಆಟಗಾರರನ್ನು ಕಾಣಬಹುದು.



ಮೈಸೂರಿನ ಹೊರವಲಯದ ಕೇರ್ಗಳ್ಳಿಯ ಕಸ್ತೂರ್ ಬಾ ಗಾಂಧಿ ಬಾಲಿಕಾ ವಿದ್ಯಾಲಯಕ್ಕೆ ಇದೇ ವೇಳೆ ಕ್ರೀಡಾ ಸಾಮಗ್ರಿ ವಿತರಿಸಲಾಯಿತು.

ಮಹಾರಾಜ ಟ್ರೋಫಿಯಲ್ಲಿ ಮೈಸೂರು ವಾರಿಯರ್ಸ್ ತಂಡವು ಬಾರಿಸಿದ ಸಿಕ್ಸರ್, ಬೌಂಡರಿ ಹಾಗೂ ಪಡೆದುಕೊಂಡ ವಿಕೆಟ್‌ಗಳಿಗೆ ನೀಡುತ್ತಿದ್ದ ಪ್ರೋತ್ಸಾಹ ಧನದ ಮಾದರಿಯಲ್ಲೇ ಮಹಿಳಾ ತಂಡಕ್ಕೂ ಪ್ರೋತ್ಸಾಹ ನೀಡಲಾಗುತ್ತದೆ. ಪುರುಷ ತಂಡಕ್ಕೆ ನೀಡಿರುವ 18 ಲಕ್ಷ ರೂ ಮೊತ್ತದಲ್ಲಿ ವಿವಿಧ ರೀತಿಯ ಸಾಮಾಜಿಕ ಸೇವಾ ಕಾರ್ಯ ಮಾಡಲಾಗಿದೆ. ಮೂರು ಸಾವಿರ ಗಿಡಗಳನ್ನು ನೆಡಲಾಗಿದೆ ಎಂದರು.

ತಂಡದ ನಾಯಕಿ ಶುಭಾ ಸತೀಶ್ ಮಾತನಾಡಿ, ನಮ್ಮ ತಂಡದ ಸ್ಫೂರ್ತಿ ಬಹಳ ಉತ್ತಮವಾಗಿದೆ. ಎಲ್ಲರೂ ಒಳ್ಳೆಯ ಆಟಗಾರರೇ. ಈ ತಂಡವನ್ನು ಮುನ್ನಡೆಸುತ್ತಿರುವುದಕ್ಕೆ ಹೆಮ್ಮೆಯಾಗುತ್ತಿದೆ. ಆರ್‌ಸಿಬಿ ಮಹಿಳಾ ತಂಡದಲ್ಲಿ ಆಡಿರುವ ಅನುಭವವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುತ್ತೇನೆ ಎಂದು ತಿಳಿಸಿದರು.

ತಂಡದ ಮುಖ್ಯ ಕೋಚ್ ಕರುಣಾ ಜೈನ್ ಮಾತನಾಡಿ, ನಮಗೆ ಬೇಕಾಗಿರುವ ತಂಡವೇ ಸಿಕ್ಕಿದೆ. ಈ ಟೂರ್ನಿಯಲ್ಲಿ ಯಶಸ್ಸುಗಳಿಸುತ್ತೇವೆ ಎನ್ನುವ ವಿಶ್ವಾಸವಿದೆ. ಮೈಸೂರಿನಲ್ಲಿ ಆಟಗಾರರಿಗೆ ತರಬೇತಿ ನೀಡಲು ಉತ್ತಮ ವಾತಾವರಣವಿರುವುದರಿಂದ ಇಲ್ಲೇ ನಮ್ಮ ತಂಡದ ಆಟಗಾರರು ತರಬೇತಿ ಪಡೆಯುತ್ತಿದ್ದಾರೆ ಎಂದರು.

ಧ್ಯೇಯ ಗೀತೆ ಬಿಡುಗಡೆ: ಕಾರ್ಯಕ್ರಮದಲ್ಲಿ ಮೈಸೂರು ವಾರಿಯರ್ಸ್‌ನ ಧ್ಯೇಯಗೀತೆಯ ವಿಡಿಯೋವನ್ನು ಕೂಡ ಬಿಡುಗಡೆ ಮಾಡಲಾಯಿತು. ಈ ಗೀತೆಗೆ ರಾಕ್ ಸಂಗೀತಗಾರ ರಘು ದೀಕ್ಷಿತ್ ರಾಗ ಸಂಯೋಜನೆ ಮಾಡಿದ್ದಾರೆ. ಅಲ್ಲದೇ ಮೈಸೂರಿನ ಹೊರವಲಯದ ಕೇರ್ಗಳ್ಳಿಯ ಕಸ್ತೂರ್ ಬಾ ಗಾಂಧಿ ಬಾಲಿಕಾ ವಿದ್ಯಾಲಯಕ್ಕೆ ಕ್ರೀಡಾ ಸಲಕರಣೆಗಳನ್ನು ವಿತರಿಸಲಾಯಿತು. ಎನ್.ಆರ್. ಫೌಂಡೇಷನ್ ಛೇರ್ಮನ್ ಆರ್.ಗುರು ಹಾಗೂ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

ತಂಡ ಇಂತಿದೆ

ಶುಭಾ ಸತೀಶ್ (ನಾಯಕಿ), ಸಹನಾ ಪಿ.ಪವಾರ್, ಪೂಜಾ ಕುಮಾರಿ, ಶಿಶಿರಗೌಡ, ರೋಹಿತಾ ಚೌಧರಿ, ವಂದಿತಾ ಕೆ.ರಾವ್, ದೀಕ್ಷಿತಾ ಜೆ.ಹೊನ್ನುಶ್ರೀ, ಎನ್.ಜಿ.ಪ್ರಕೃತಿ, ತನ್ವಿ ಎಸ್.ರಾಜ್, ಶ್ರೇಯ ಪೊಟೆ, ರಚಿತಾ ಹತ್ವಾರ್, ಕಿಂಜಲ್ ಪಟೇಲ್, ಅಲಂ ಫರಿಹಾ ಸೈಯದ್, ಎ.ರೂಹಿ, ಕುಸುಮ ಗೌಡ, ಸಿಲ್ಕಿನ್ ಪಟೇಲ್.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೂರನೇ ಪುಟದಿಂದ

ಪ್ರಜ್ವಲ್ ರೇವಣ್ಣಗೆ ಜೀವನಪೂರ್ತಿ ಜೈಲು

ಐಪಿಸಿ 354(ಸಿ) ಅಪರಾಧಕ್ಕೆ 3 ವರ್ಷ ಜೈಲು 25 ಸಾವಿರ ದಂಡ, ಐಪಿಸಿ 506 ಅಪರಾಧಕ್ಕೆ 2 ವರ್ಷ ಜೈಲು 10 ಸಾವಿರ ದಂಡ, ಐಟಿ ಕಾಯಿದೆ 66(ಇ) ಅಪರಾಧಕ್ಕೆ 3 ವರ್ಷ ಜೈಲು 26 ಸಾವಿರ ದಂಡ, ಐಪಿಸಿ 201 ಅಪರಾಧಕ್ಕೆ 3 ವರ್ಷ ಜೈಲು 25 ಸಾವಿರ ದಂಡ ಸೇರಿ ಒಟ್ಟು 11.60 ಲಕ್ಷ ದಂಡ ವಿಧಿಸಲಾಗಿದೆ. ಪ್ರತ್ಯೇಕ ಸೆಕ್ಷನ್‌ಗಳಡಿ ಜೈಲು ಶಿಕ್ಷೆ ವಿಧಿಸಿದ್ದರೂ ಅವುಗಳನ್ನೆಲ್ಲಾ ಒಂದೇ ಬಾರಿ ಅನುಭವಿಸಬೇಕಾಗಿರುವುದರಿಂದ ಗರಿಷ್ಠ ಶಿಕ್ಷೆಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಹೀಗಾಗಿ ಪ್ರಜ್ವಲ್ ಅವರಿಗೆ ಜೀವನ ಪರ್ಯಂತ ಜೀವಾವಧಿ ಶಿಕ್ಷೆ ಅನ್ವಯಿಸುತ್ತದೆ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಂತೋಷ್ ಗಜಾನನ ಭಟ್ ನೀಡಿದ ತೀರ್ಪಿನಲ್ಲಿ ಪ್ರಕಟಿಸಿದ್ದಾರೆ.

ಈ ಶಿಕ್ಷೆಯನ್ನಾಯ ಸನ್ನಡತೆ ಆಧಾರ ಹಾಗೂ ರಾಜ್ಯ ಸರ್ಕಾರಕ್ಕಿರುವ ಯಾವುದೇ ವಿಶೇಷ ಅಧಿಕಾರ ಪ್ರಯೋಗಿಸಿ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲು ಅವಕಾಶವಿಲ್ಲದ ಕಾರಣ ಪ್ರಜ್ವಲ್ ಜೀವನ ಪರ್ಯಂತ ಜೈಲಿನಲ್ಲೇ ಇರಬೇಕಾಗುತ್ತದೆ. ಆದರೆ ಕೆಲವೊಮ್ಮೆ ಕೆಲವೇ ಕೆಲವು ದಿನಗಳು ಮಾತ್ರ ಪರೇಲ್‌ನಲ್ಲಿ ಜೈಲಿನಿಂದ ಬಿಡುಗಡೆಯಾಗಿ ಮತ್ತೆ ಜೈಲು ಸೇರಲು ನ್ಯಾಯಾಲಯ ಅನುಮತಿ ನೀಡುತ್ತದೆ. ಇಂತಹ ಪರೇಲ್‌ಗೆ ಸಕಾರಣವನ್ನು ನೀಡಿ ನ್ಯಾಯಾಲಯದಿಂದ ಅನುಮತಿ ಪಡೆಯಬೇಕಾಗುತ್ತದೆ.

ಏನಿದು ಪ್ರಕರಣ: 2024ರ ಮೇ ತಿಂಗಳಿನಲ್ಲಿ ನಡೆದ ಲೋಕಸಭಾ ಚುನಾವಣೆಮತದಾನಕ್ಕೂ 6 ದಿನಗಳ ಮುನ್ನ ಹಾಸನ ನಗರಾದ್ಯಂತ ಅಲ್ಲಲ್ಲಿ ಪೆನ್ ಡ್ರೈವ್‌ಗಳನ್ನು ಬಿಸಾಡಲಾಗಿತ್ತು ಅದರಲ್ಲಿ ಹಲವಾರು ಮಹಿಳೆಯರ ಅಶ್ಲೀಲ ವೀಡಿಯೋ ದೃಶ್ಯಾವಳಿಗಳಿತ್ತು. ಯಾವುದೇ ದೃಶ್ಯದಲ್ಲೂ ಅಂದಿನ ಸಂಸದ ಹಾಗೂ ಜೆಡಿಎಸ್-ಬಿಜೆಪಿ ಮೈತ್ರಿ ಅಭ್ಯರ್ಥಿ ಪ್ರಜ್ವಲ್ ಮುಖ ಕಾಣಿಸಿಕೊಂಡಿಲ್ಲವಾದರೂ, ಅದು ಅವರದೇ ವೀಡಿಯೋ ಎಂದು ವ್ಯಾಪಕವಾಗಿ ಪ್ರಚಾರ ಪಡೆದುಕೊಂಡು ರಾಜ್ಯ ಮಾತ್ರವಲ್ಲದೇ ಇಡೀ ದೇಶದಲ್ಲೇ ಸಂಚಲನ ಸೃಷ್ಟಿಸಿತ್ತು.

ಈ ಪ್ರಕರಣದ ತನಿಖೆಗಾಗಿ ರಾಜ್ಯ ಸರ್ಕಾರ ಎಡಿಜಿಪಿ ಬಿ.ಕೆ.ಸಿಂಗ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿತ್ತು. ಈ ತಂಡಕ್ಕೆ ಮಹಿಳಾ ಐಪಿಎಸ್ ಅಧಿಕಾರಿಗಳಾದ ಸೀಮಾ ಲಾಟ್ಕರ್ (ಹಾಲಿ ಮೈಸೂರು ನಗರ ಪೊಲೀಸ್ ಆಯುಕ್ತೆ), ಸುಮನ್ ಡಿ.ಪನ್ನೇಕರ್ ಅವರನ್ನು ಸೇರ್ಪಡೆಗೊಳಿಸಲಾಗಿತ್ತು. ವೀಡಿಯೋ ತುಣುಕುಗಳು ಹರಿದಾಡುತ್ತಿದ್ದಂತೆಯೇ ವೈರಲ್ ಆಗಿದ್ದ ವೀಡಿಯೋದಲ್ಲಿ ಇದ್ದ ಕೆ.ಆರ್.ನಗರ ಮೂಲದ 48 ವರ್ಷ ವಯಸ್ಸಿನ ಮಹಿಳೆ ಯೋರ್ವರು ನಾಪತ್ತೆಯಾಗಿದ್ದರು. ಈ ಸಂಬಂಧ ಆಕೆಯ ಪುತ್ರ 2024ರ ಮೇ 2ರಂದು, ವೈರಲ್ ವೀಡಿಯೋದಲ್ಲಿ ಇರುವುದು ತನ್ನ ತಾಯಿಯೇ ಆಗಿದ್ದು, ಆಕೆಯನ್ನು ಪ್ರಜ್ವಲ್ ತಂದೆ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಮತ್ತು ಅವರ ಸಂಬಂಧಿ ಬಾಬಣ್ಣ ಅಪಹರಿಸಿದ್ದಾರೆ ಎಂದು ಕೆ.ಆರ್.ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಆ ಸಂದರ್ಭದಲ್ಲಿ ಎಸ್‌ಐಟಿ ತಂಡ ಹುಣಸೂರು ತಾಲೂಕಿನ ಕಾಳೇನಹಳ್ಳಿಯಲ್ಲಿರುವ ರೇವಣ್ಣರ ಆಪ್ತ ರಾಜಗೋಪಾಲ್ ಎಂಬುವರ ತೋಟದ ಮನೆಯಲ್ಲಿದ್ದ ಮಹಿಳೆಯನ್ನು ರಕ್ಷಿಸಿದ್ದರು. ಬಳಿಕ ಈ ಮಹಿಳೆಯು ಪ್ರಜ್ವಲ್ ರೇವಣ್ಣ ತನ್ನ ಮೇಲೆ ಪದೇ ಪದೆ ಅತ್ಯಾಚಾರವೆಸಗಿ ಮೊಬೈಲ್‌ನಲ್ಲಿ ವೀಡಿಯೋ ರೆಕಾರ್ಡ್ ಮಾಡಿಕೊಂಡಿದ್ದರು ಎಂದು ನೀಡಿದ ದೂರು ಕೆ.ಆರ್.ನಗರ ಠಾಣೆಯಲ್ಲಿ ದಾಖಲಾಗಿತ್ತು.

ಇಂದು ಈ ಪ್ರಕರಣದ ತೀರ್ಪು ಪ್ರಕಟವಾಗಿದ್ದು, ಪ್ರಜ್ವಲ್ ರೇವಣ್ಣ ವಿರುದ್ಧ ಒಟ್ಟು ನಾಲ್ವರು ಮಹಿಳೆಯರು ಅತ್ಯಾಚಾರ ಆರೋಪದಡಿ ದೂರು ಸಲ್ಲಿಸಿದ್ದರು. ಈಗ, ಇನ್ನೂ 3 ಪ್ರಕರಣಗಳು ವಿಚಾರಣಾ ಹಂತದಲ್ಲಿದ್ದು, ತೀರ್ಪು ಹೊರಬೀಳಬೇಕಾಗಿದೆ. ಪ್ರಜ್ವಲ್ ರೇವಣ್ಣ ಕಳೆದ 14 ತಿಂಗಳಿಂದ ಜೈಲಿನಲ್ಲಿದ್ದರೂ ಕೂಡ ಇಂದಿನ ತೀರ್ಪಿಗೆ ಅವರ ಕಳೆದ ಜೈಲು ವಾಸ ಅನ್ವಯವಾಗುವುದಿಲ್ಲ. ಕಾರಣವೇನೆಂದರೆ ಈ ಪ್ರಕರಣದಲ್ಲಿ ಎಸ್‌ಐಟಿ ತಂಡ ಅವರನ್ನು ಬಂಧಿಸಿರಲಿಲ್ಲ. ಬೇರೊಂದು ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ಜೈಲಿನಲ್ಲಿದ್ದ ಪ್ರಜ್ವಲ್ ಅವರನ್ನು ಈ ಪ್ರಕರಣದಲ್ಲಿ ಬಾಡಿ ವಾರೆಂಟ್ ಮೇಲೆ ವಶಕ್ಕೆ ಪಡೆಯಲಾಗಿತ್ತು. ಹೀಗಾಗಿ ಇಂದು ಪ್ರಕಟವಾದ ತೀರ್ಪಿನಂತೆ ಪ್ರಜ್ವಲ್ ರೇವಣ್ಣ ಅವರ ಜೈಲು ವಾಸ ಈ ಪ್ರಕರಣದಲ್ಲಿ ಇಂದಿನಿಂದ (ಆ.2) ಆರಂಭವಾಗಲಿದೆ.

ನನ್ನ ರಾಜಕೀಯ ಭವಿಷ್ಯ ಹಾಳು ಮಾಡುವ ಸಂಚಿದು!

6 ತಿಂಗಳಾಗಿದೆ ಎಂದು ಕಣ್ಣೀರಿಟ್ಟರು. ನಾನು ವಿದ್ಯಾವಂತ, ಮೆರಿಟ್ ವಿದ್ಯಾರ್ಥಿಯಾಗಿದ್ದೆ. ನನ್ನ ಬಗ್ಗೆ ಹಾಸನದಲ್ಲಿ ಇದ್ದ ಒಳ್ಳೆಯ ಅಭಿಪ್ರಾಯ, ನನ್ನ ವಿದ್ಯೆ, ಮೆರಿಟ್ ಇವೆಲ್ಲವನ್ನೂ ನೋಡಿ ಎನ್ನುತ್ತಿದ್ದಾಗಲೇ ನ್ಯಾಯಾಧೀಶರು, 'ನಿಮ್ಮ ವಿದ್ಯಾರ್ಹತೆ ಏನು' ಎಂದು ಪ್ರಶ್ನಿಸಿದರು. ಅದಕ್ಕೆ ಉತ್ತರಿಸಿದ ಪ್ರಜ್ವಲ್, 'ಬಿ.ಇ ಇನ್ ಮೆಕ್ಯಾನಿಕಲ್' ಎಂದು ಉತ್ತರಿಸಿದರು. ಇದೇ ವೇಳೆ ಪ್ರಜ್ವಲ್ ಪರ ಹಾಜರಿದ್ದ ಹಿರಿಯ ವಕೀಲೆ ನಳಿನಿ ಮಾಯೇಗೌಡ, 'ಪ್ರಜ್ವಲ್ ರೇವಣ್ಣ ಅವರ ತಾತ ಮಾಜಿ ಪ್ರಧಾನಿ. ಚುನಾವಣೆ ಸಂದರ್ಭದಲ್ಲಿ ಆರೋಪದ ವಿಡಿಯೋ ವೈರಲ್ ಮಾಡಲಾಗಿದೆ. ಇದರ ಹಿಂದೆ ರಾಜಕೀಯ ದುರುದ್ದೇಶ ಅಡಗಿದೆ. ಸಂತ್ರಸ್ತ ಮಹಿಳೆಯ ಸಾಮಾನ್ಯ ಜೀವನಕ್ಕೆ ಯಾವುದೇ ತೊಂದರೆ ಆಗಿಲ್ಲ. ಆಕೆ ಗಂಡ ಮಕ್ಕಳೊಂದಿಗೆ ಸಾಮಾನ್ಯ ಜೀವನ ಸಾಗಿಸುತ್ತಿದ್ದಾರೆ. ಇಂತಹ ಯುವ ರಾಜಕಾರಣಿಯನ್ನು ಜೀವನ ಪರ್ಯಂತ ಜೈಲಿನಲ್ಲಿ ಇಡುವುದು ಸರಿಯಲ್ಲ. ಹೀಗಾಗಿ, ಕನಿಷ್ಠ ಪ್ರಮಾಣದ ಶಿಕ್ಷೆ ವಿಧಿಸಬೇಕು ಎಂದು ಮನವಿ ಮಾಡಿದರು.

ಸಮಾಜಕ್ಕೆ ಸಂದೇಶ ನೀಡುವ ಶಿಕ್ಷೆ ವಿಧಿಸಿ...

ವಿಧಿಸಲು ಅವಕಾಶವಿದೆಯಾದರೂ, ಸಮಾಜಕ್ಕೆ ಒಂದು ಸಂದೇಶ ರವಾನಿಸುವ ಸಲುವಾಗಿ ಆತನಿಗೆ ಗರಿಷ್ಠ ಶಿಕ್ಷೆಯಾದ ಜೀವಾವಧಿ ಶಿಕ್ಷೆಯನ್ನೇ ವಿಧಿಸಬೇಕು ಎಂದು ಕೋರಿದರು.

ಮತ್ತೋರ್ವ ವಿಶೇಷ ಸರ್ಕಾರಿ ಅಭಿಯೋಜಕರಾದ ಅಶೋಕ ನಾಯಕ್ ವಾದ ಮಂಡಿಸಿ, ಪ್ರಜ್ವಲ್ ಕಿರಿಯ ವಯಸ್ಸಿನಲ್ಲಿ ಸಂಸದರಾಗಿ ಆಯ್ಕೆಯಾಗಿದ್ದು, ಆ ಸ್ಥಾನಕ್ಕೆ ಕಳಂಕ ತಂದಿದ್ದಾನೆ. ಆತನಿಗೆ ಗರಿಷ್ಠ ಶಿಕ್ಷೆ ವಿಧಿಸುವುದರ ಜೊತೆಗೆ ಈ ಪ್ರಕರಣದಲ್ಲಿ ಗರಿಷ್ಠ 25 ಲಕ್ಷದವರೆಗೆ ದಂಡ ವಿಧಿಸಬಹುದಾಗಿದ್ದು, ಪ್ರಜ್ವಲ್ ಬಡವನಲ್ಲ. ಆತ ಕೋಟ್ಯಾಧಿಪತಿ. ದೊಡ್ಡ ಮೊತ್ತದ ದಂಡ ಪಾವತಿಸುವ ಆರ್ಥಿಕ ಶಕ್ತಿಯೂ ಆತನಿಗಿದೆ. ಹೀಗಾಗಿ 25 ಲಕ್ಷ ರೂ. ದಂಡ ವಿಧಿಸಬೇಕು. ಸಂತ್ರಸ್ತೆಯು ಸಾಮಾಜಿಕವಾಗಿ ಅನುಭವಿಸಿದ ಅವಮಾನ ಹಾಗೂ ಮುಜುಗರಕ್ಕಾಗಿ ದೊಡ್ಡ ಮೊತ್ತದ ಹಣವನ್ನು ಆಕೆಗೆ ಪರಿಹಾರವಾಗಿ ನೀಡಬೇಕು ಎಂದು ಮನವಿ ಮಾಡಿದರು. ಸರ್ಕಾರಿ ವಿಶೇಷ ಅಭಿಯೋಜಕರ ವಾದವನ್ನು ಆಕ್ಷೇಪಿಸಿ ಪ್ರತಿವಾದ ಮಂಡಿಸಿದ ಪ್ರಜ್ವಲ್ ಪರ ವಕೀಲೆ ನಳಿನಿ ಮಾಯೇಗೌಡ, ಪ್ರಜ್ವಲ್ ರೇವಣ್ಣ ಹಣಕ್ಕಾಗಿ ರಾಜಕಾರಣಕ್ಕಾಗಿ ಬಂದವರಲ್ಲ. ಜನ ಸೇವೆಯ ಉದ್ದೇಶಕ್ಕಾಗಿ ರಾಜಕಾರಣಕ್ಕೆ ಬಂದವರು. ಸಂಸದರಾಗಿ ಅತ್ಯುತ್ತಮ ಕೆಲಸಗಳನ್ನು ಮಾಡಿದ್ದಾರೆ. 2024ರ ಲೋಕಸಭಾ ಚುನಾ ವಣೆಯಲ್ಲಿ ಅವರು ಸ್ಪರ್ಧಿಸಿದ್ದಾಗ ಮತದಾನಕ್ಕೆ ಕೆಲವೇ ದಿನಗಳು ಬಾಕಿ ಇರುವಾಗ ಅವರ ರಾಜಕೀಯ ಭವಿಷ್ಯವನ್ನು ನಾಶ ಮಾಡುವ ಕುತಂತ್ರ ಹೊಂದಿರುವವರು ದುರುದ್ದೇಶದಿಂದ ವೀಡಿಯೋ ಗಳನ್ನು ಹರಿಬಿಟ್ಟಿದ್ದಾರೆ. ಅದುವರೆಗೂ ಪ್ರಜ್ವಲ್ ವಿರುದ್ಧ ಯಾವುದೇ ಪ್ರಕರಣ ದಾಖಲಾಗಿರಲಿಲ್ಲ. ಇದು ಸಂಪೂರ್ಣವಾಗಿ ರಾಜಕೀಯ ಕುತಂತ್ರದ ಪ್ರಕರಣವಾಗಿದೆ.

ಪ್ರಜ್ವಲ್ ಇನ್ನೂ 34 ವರ್ಷದ ಯುವಕ. ಈಗಾಗಲೇ 1 ವರ್ಷ 4 ತಿಂಗಳಿನಿಂದ ಜೈಲಿನಲ್ಲಿದ್ದಾರೆ. ಈ ಪ್ರಕರಣದಿಂದ ಅವರ ತೇಜೋವಧೆಯಾಗಿದೆ. ಸಂತ್ರಸ್ತೆಗಿಂತಲೂ ಹೆಚ್ಚಾಗಿ ಪ್ರಜ್ವಲ್‌ಗೆ ಹಾನಿಯಾಗಿದೆ. ಅಪಾರ ನಷ್ಟವನ್ನು ಅನುಭವಿಸಿದ್ದಾರೆ. ಪ್ರತಿಷ್ಠಿತ ಕುಟುಂಬಕ್ಕೆ ಸೇರಿದ ಅವರ ವೃತ್ತಿ ಜೀವನಕ್ಕೆ ಮಾರಕವಾಗುವಂತಹ ಶಿಕ್ಷೆಯನ್ನು ವಿಧಿಸಬಾರದು. ಕನಿಷ್ಠ ಶಿಕ್ಷೆಯನ್ನಷ್ಟೇ ವಿಧಿಸಬೇಕು ಎಂದು ಮನವಿ ಮಾಡಿದರು.

ಕಲ್ಲು ಬಂಡೆಯಂತೆ ನಿಂತ ಸಂತ್ರಸ್ತೆ

ನ್ಯಾಯಾಧೀಶರ ಎದುರು ವಿವರಿಸಿದ್ದರು ಎಂದರು. ಸಂತ್ರಸ್ತೆಯು ಆರ್ಥಿಕ ಹಾಗೂ ಸಾಮಾಜಿಕವಾಗಿ ಬಲಾಢ್ಯರಲ್ಲ. ಅಪರಾಧಿ ಆರ್ಥಿಕವಾಗಿ ಬಲಾಢ್ಯನಿದ್ದ. ರಾಜಕೀಯ ಪ್ರಭಾವ ಇತ್ತು. ಈ ವ್ಯತ್ಯಾಸವಿದ್ದರೂ ನ್ಯಾಯ ಬೇಕೇ ಬೇಕೆಂದು ಒಂದು ವರ್ಷದಿಂದ ಪ್ರಾಸಿಕ್ಯೂಷನ್ ಜತೆಗೆ ಆಕೆ ಧೈರ್ಯದಿಂದ ನಿಂತಿದ್ದರು. ತೀರ್ಪು ವಿಳಂಬವಾಗಿ ಬರುವಂತೆ ಮಾಡಲು ಕೆಲವರು ಷಡ್ಯಂತ್ರ ಮಾಡಿದ್ದರು. ಸಂತ್ರಸ್ತೆಗೆ ನ್ಯಾಯ ಕೊಡಿಸಿದ ತೃಪ್ತಿ ತನಿಖಾ ತಂಡಕ್ಕಿದೆ. ಪ್ರಕರಣದಲ್ಲಿ ಮಹಿಳಾ ಅಧಿಕಾರಿಗಳಾದ ಸೀಮಾ ಲಾಟ್ಕರ್, ಸುಮನ್ ಡಿ.ಪನ್ನೇಕರ್ ಹಾಗೂ ಬೆಂಗಳೂರು ಪೂರ್ವ ವಿಭಾಗದ ಮಹಿಳಾ ಠಾಣೆಯ ಇನ್‌ಸ್ಪೆಕ್ಟರ್ ಎನ್.ಶೋಭಾ ಅವರು ಸಾಕಷ್ಟು ಪರಿಶ್ರಮದೊಂದಿಗೆ ತನಿಖೆ ನಡೆಸಿದ್ದರು ಎಂದರು. ಸಿಐಡಿ ಸೈಬರ್ ಅಪರಾಧ ಠಾಣೆಯಲ್ಲಿ ಮೂರು, ಹಾಸನ ಜಿಲ್ಲೆಯ ಹೊಳೆನರಸೀಪುರ ಹಾಗೂ ಮೈಸೂರಿನ ಕೆ.ಆರ್.ನಗರ ಠಾಣೆಯಲ್ಲಿ ತಲಾ ಒಂದು ಪ್ರಕರಣ ದಾಖಲಾಗಿದ್ದವು. ಒಂದು ಪ್ರಕರಣದಲ್ಲಿ ತೀರ್ಪು ಬಂದಿದೆ. ಉಳಿದ ಪ್ರಕರಣಗಳು ವಿಚಾರಣೆಯ ಹಂತದಲ್ಲಿವೆ. ಜನಪ್ರತಿನಿಧಿಗಳ ವಿರುದ್ಧ ದಾಖಲಾಗುವ ಪ್ರಕರಣಗಳನ್ನು ತ್ವರಿತವಾಗಿ ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಬೇಕು ಎಂದು ಸುಪ್ರೀಂಕೋರ್ಟ್ ಆದೇಶವಿದೆ. ತ್ವರಿತವಾಗಿ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಯಿತು ಎಂದರು.

100ಕ್ಕೂ ಹೆಚ್ಚು ಪೆನ್‌ಡ್ರೈವ್ ಖರೀದಿ: ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ತನಿಖೆ ಬಹುತೇಕ ಮುಕ್ತಾಯವಾಗಿದೆ. 15 ದಿನಗಳ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸಲಾಗುವುದು. ವಿಡಿಯೊ ಹಂಚಿಕೆ ಮಾಡಲು 100ಕ್ಕೂ ಹೆಚ್ಚು ಪೆನ್‌ಡ್ರೈವ್ ಖರೀದಿ ಮಾಡಲಾಗಿದೆ. ಹೊಸ ಲ್ಯಾಪ್‌ಟಾಪ್ ಸಹ ಖರೀದಿಸಲಾಗಿದೆ. ಎಲ್ಲದಕ್ಕೂ ಸಾಕ್ಷ್ಯಾಧಾರಗಳು ಸಿಕ್ಕಿವೆ ಎಂದರು.

ತನಿಖಾ ತಂಡದಲ್ಲಿದ್ದ ಐಪಿಎಸ್ ಅಧಿಕಾರಿ ಸುಮನ್ ಡಿ.ಪನ್ನೇಕರ್ ಮಾತನಾಡಿ, ಒತ್ತಡ ಬಂದಿದ್ದರೆ ಕೆಳಹಂತದವರೆಗೂ ಬರಬೇಕಿತ್ತು. ಅಂತಹ ಸಂದರ್ಭ ಬಂದಿರಲಿಲ್ಲ. ಸಾಕ್ಷ್ಯಾಧಾರ ಹಾಗೂ ಹೇಳಿಕೆಗಳನ್ನು ಆಧರಿಸಿ ತನಿಖೆ ನಡೆಸಿದ್ದೆವು. ವೈಜ್ಞಾನಿಕ ವಿಧಾನ ಅನುಸರಿಸಿ ಪ್ರಕರಣದ ತನಿಖೆ ನಡೆಸಿದ್ದರಿಂದಲೇ ಸಂತ್ರಸ್ತೆಗೆ ನ್ಯಾಯ ಕೊಡಿಸಲು ಕೊಡಲು ಸಾಧ್ಯವಾಯಿತು ಎಂದರು. ಪತ್ರಿಕಾಗೋಷ್ಠಿಯಲ್ಲಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಅಶೋಕ್ ಎನ್. ನಾಯಕ್ ಹಾಗೂ ತನಿಖಾ ತಂಡದ ಅಧಿಕಾರಿಗಳು ಹಾಜರಿದ್ದರು.

ಫಾಲ್ಕನ್ ಟೈರ್ಸ್ ಕಾರ್ಖಾನೆ ಮಾರಾಟ

ಕಾರ್ಖಾನೆ ವಿರುದ್ಧ ಬೆಂಗಳೂರಿನ ಎನ್‌ಸಿಎಲ್‌ಟಿ ನ್ಯಾಯಾಲಯದಲ್ಲಿ 2017ರಲ್ಲಿ ದಾವೆ ಹೂಡಲಾಗಿತ್ತು. ಸುಮಾರು 6 ವರ್ಷಗಳ ಕಾಲ ವಿಚಾರಣೆ ನಡೆಸಿದ ನ್ಯಾಯಾಲಯವು, 2023ರ ಮಾ.13ರಂದು ಕಾರ್ಮಿಕರಿಗೆ ಗ್ರಾಚ್ಯುಟಿ ಹಾಗೂ ಬಾಕಿಯಿರುವ 2014ರಿಂದ 2019ರವರೆಗಿನ ಕಾರ್ಮಿಕರ ಭವಿಷ್ಯ ನಿಧಿ(ಪಿಎಫ್)ಯನ್ನು ನೀಡುವಂತೆ ಆದೇಶಿಸಿತು. ಈ ಹಿನ್ನೆಲೆಯಲ್ಲಿ ಈಗಾಗಲೇ ಗ್ರಾಚ್ಯುಟಿ ಹಣವನ್ನು ಕಾರ್ಮಿಕರು ಪಡೆದುಕೊಂಡಿದ್ದು, ಪಿಎಫ್ ಮೊತ್ತ ಬಾಕಿಯಿದೆ ಎಂದು ಫಾಲ್ಕನ್ ಟೈರ್ಸ್ ಯೂನಿಯನ್ ಕಾರ್ಯಕಾರಿ ಸಮಿತಿ ಸದಸ್ಯ ಮಂಜುರಾಜೇ ಅರಸ್ ಸ್ಪಷ್ಟಪಡಿಸಿದ್ದಾರೆ.

ದಶಕದ ಹಿಂದೆ ದಿವಾಳಿ: ಮೈಸೂರು-ಕೆಆರ್‌ಎಸ್ ರಸ್ತೆಯ ಕೈಗಾರಿಕಾ ಪ್ರದೇಶದಲ್ಲಿ 1975ರಲ್ಲಿ ಆರಂಭವಾದ ಫಾಲ್ಕನ್ ಕಾರ್ಖಾನೆ, ಟೈರ್ ಹಾಗೂ ಟ್ಯೂಬ್ ಉತ್ಪಾದನೆ ಮೂಲಕ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿತ್ತು. ಇಲ್ಲಿ ತಯಾರಿಸುತ್ತಿದ್ದ ಡನ್ಲಪ್ ಟೈರ್‌ಗೆ ಭಾರೀ ಬೇಡಿಕೆ ಸೃಷ್ಟಿಯಾಗಿತ್ತು. ನಂತರದಲ್ಲಿ ಭಾರೀ ಪ್ರತಿಸ್ಪರ್ಧಿ ಕಂಪನಿಗಳು ಮಾರುಕಟ್ಟೆ ಪ್ರವೇಶಿಸಿದರೂ ಫಾಲ್ಕನ್ ಉತ್ಪನ್ನಗಳ ಬೇಡಿಕೆ ಕುಸಿದಿರಲಿಲ್ಲ. ಹಂತಹಂತವಾಗಿ ಕಾಯಂ ಹಾಗೂ ಬದಲಿ ಕಾರ್ಮಿಕರು ಸೇರಿ 2 ಸಾವಿರಕ್ಕೂ ಹೆಚ್ಚು ಮಂದಿ ಉದ್ಯೋಗಗಳಿದ್ದರು. ಮಾಲೀಕತ್ವ ಬದಲಾದ ನಂತರ ಫಾಲ್ಕನ್ ಕುಗ್ಗಿತು. ಪಶ್ಚಿಮ ಬಂಗಾಳ ಮೂಲದ ಮಾಲೀಕನ ಆರ್ಥಿಕ ಅಶಿಸ್ತು ಭಾರೀ ಹೊಡೆತ ನೀಡಿತು. ಕಂಪೆನಿ ಮೂಲ ಬಂಡವಾಳ, ಆದಾಯ ಮತ್ತು ಬ್ಯಾಂಕ್ ಸಾಲಗಳಿಂದ ಪಡೆದ ಹಣವನ್ನು ಅನ್ಯ ಕಾರ್ಯಕ್ಕೆ ಬಳಕೆ ಮಾಡಿದ್ದರ ಪರಿಣಾಮ 2015ರ ಆರಂಭದಲ್ಲೇ ದಿವಾಳಿಯತ್ತ ಸಾಗಿ, ಬಂದ್ ಆಯಿತು. ನಂತರ ಸಾಲ ನೀಡಿದ್ದ ಬ್ಯಾಂಕ್‌ಗಳು ಎನ್‌ಸಿಎಲ್‌ಟಿ ಮೊರೆ ಹೋಗಿದ್ದವು. ನ್ಯಾಯಪೀಠ ನಿಯೋಜಿಸಿದ್ದ ಲಿಕ್ವಿಡೇಟರ್ ಮೂಲಕ ನಡೆದ ನಾಲ್ಕನೇ ಇ-ಹರಾಜು ಫಲಪ್ರದವಾಗಿದೆ.

ಸರ್ಕಾರಿ ಕಚೇರಿಗಳಲ್ಲಿ ಹಿರಿಯರ ಗೌರವಿಸಿ

ಬೆಂಗಳೂರು, ಆ. 2(ಕೆಎಂಶಿ)-ಸರ್ಕಾರಿ ಕಚೇರಿಗಳಿಗೆ ತಮ್ಮ ಕೆಲಸ-ಕಾರ್ಯಗಳಿಗಾಗಿ ಭೇಟಿ ನೀಡುವ ಹಿರಿಯ ನಾಗರಿಕರನ್ನು ಗೌರವದಿಂದ ಕಾಣುವಂತೆ ಆದೇಶ ಹೊರಡಿಸಲಾಗಿದೆ. ಹಿರಿಯ ನಾಗರಿಕರಿಗೆ ಮೊದಲು ಆಸನದ ವ್ಯವಸ್ಥೆ ಕಲ್ಪಿಸಿ, ಆದ್ಯತೆ ಮೇರೆಗೆ ಅವರ ಅಹವಾಲುಗಳಿಗೆ ಸ್ಪಂದಿಸಿ ಎಂದು ಡಿಪಿಎಆರ್ ಕಾರ್ಯದರ್ಶಿ ತುಳಸಿ ಮದ್ದಿನೇನಿ ಆದೇಶಿಸಿದ್ದಾರೆ. ಈ ಸಂಬಂಧ ಹಲವು ಸುತ್ತೋಲೆಗಳನ್ನು ನೀಡಿದ್ದರೂ ಕಚೇರಿ ಸಿಬ್ಬಂದಿ ಅವುಗಳ ಪಾಲನೆ ಮಾಡುತ್ತಿಲ್ಲ. ಹಿರಿಯ ನಾಗರಿಕರು ಸಿಬ್ಬಂದಿ ವಿರುದ್ಧ ದೂರು ನೀಡಿದರೆ, ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಮೈಸೂರು ಮಿತ್ರ

ಭಾನುವಾರ 3 ಆಗಸ್ಟ್ 2025

ನಟಿ ರಮ್ಯಾಗೆ ಅಶ್ಲೀಲ ಕಮೆಂಟ್ ಕೇಸ್: ಇಬ್ಬರ ಬಂಧನ





ಆರೋಪಿಗಳು

ಬೆಂಗಳೂರು: ಮಂಡ್ಯದ ಮಾಜಿ ಸಂಸದೆ ಮತ್ತು ನಟಿ ರಮ್ಯಾ ಅವರು ಸಲ್ಲಿಸಿದ ದೂರಿನ ಆಧಾರದ ಮೇಲೆ ಕೇಂದ್ರ ಅಪರಾಧ ವಿಭಾಗವು ಇಬ್ಬರನ್ನು ಬಂಧಿಸಿದೆ ಎಂದು ಬೆಂಗಳೂರು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಶನಿವಾರ ತಿಳಿಸಿದ್ದಾರೆ.

ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಸಿಂಗ್, ಆನ್‌ಲೈನ್‌ನಲ್ಲಿ ನಿಂದನೀಯ ಕಾಮೆಂಟ್ ಪೋಸ್ಟ್ ಮಾಡುವಲ್ಲಿ ನೇರವಾಗಿ ಭಾಗಿಯಾಗಿರುವ 11 ಜನರನ್ನು ಗುರುತಿಸಲಾಗಿದೆ ಮತ್ತು ಶೀಘ್ರದಲ್ಲೇ ಅವರನ್ನು ಬಂಧಿಸಲಾಗುವುದು ಎಂದು ಹೇಳಿದರು.

ರಮ್ಯಾ, ಅಲಿಯಾಸ್ ದಿವ್ಯಾ ಸ್ಪಂದನಾ, ಜುಲೈ 28 ರಂದು ಆಯುಕ್ತರನ್ನು ಭೇಟಿಯಾಗಿ, ತನಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸಿದ್ದಕ್ಕಾಗಿ 43 ಸಾಮಾಜಿಕ ಮಾಧ್ಯಮ ಖಾತೆಗಳ ವಿರುದ್ಧ ದೂರು ದಾಖಲಿಸಿದ್ದರು.

ರೇಣುಕಸ್ವಾಮಿ ಕೊಲೆ ಪ್ರಕರಣದ ವಿಚಾರಣೆಯ ಕುರಿತು ಜುಲೈ 24 ರಂದು ಸುಪ್ರೀಂಕೋರ್ಟ್‌ನಲ್ಲಿ ಸುದ್ದಿ ವರದಿಯನ್ನು ಹಂಚಿಕೊಂಡ ನಂತರ ಆನ್‌ಲೈನ್ ನಿಂದನೆ ಪ್ರಾರಂಭವಾಯಿತು, ಅದರಲ್ಲಿ ಅವರು ಸಂತ್ರಸ್ತರ ಕುಟುಂಬಕ್ಕೆ ನ್ಯಾಯ ಒದಗಿಸಬೇಕೆಂದು ರಮ್ಯಾ ಒತ್ತಾಯಿಸಿದ್ದರು.

ಪರಿಶೀಲನಾ ಪ್ರಕ್ರಿಯೆಯ ನಂತರ, ಸಿಸಿಬಿ, ಸಾಮಾಜಿಕ ಮಾಧ್ಯಮ ಮೇಲ್ವಿಚಾರಣಾ ತಂಡದೊಂದಿಗೆ, ಆನ್‌ಲೈನ್ ನಿಂದನೆಯಲ್ಲಿ ಸಕ್ರಿಯವಾಗಿ ಭಾಗಿಯಾಗಿರುವ 13 ಖಾತೆಗಳನ್ನು ಗುರುತಿಸಿದೆ ಎಂದು ಸಿಂಗ್ ಹೇಳಿದರು. ಬಂಧಿತ ಇಬ್ಬರು ವ್ಯಕ್ತಿಗಳು ನೆರೆಯ ಜಿಲ್ಲೆಗಳಿಂದ ಬಂದವರು ಎಂದು ಅವರು ಹೇಳಿದರು.

ಆರೋಪಿಗಳು ನಟ ದರ್ಶನ್ ಅವರ ಅಭಿಮಾನಿಗಳೇ ಎಂದು ಕೇಳಿದಾಗ, ಆ ಅಂಶವು ಇನ್ನೂ ತನಿಖೆಯಲ್ಲಿದೆ ಎಂದು ಆಯುಕ್ತರು ಮಾಹಿತಿ ನೀಡಿದರು.

ಪ್ರಜ್ವಲ್ ರೇವಣ್ಣಗೆ ಜೀವಾವಧಿ ಶಿಕ್ಷೆ; ನಟಿ ರಮ್ಯಾ ಪೋಸ್ಟ್!

ಬೆಂಗಳೂರು, ಆ.2– 'ಕಾನೂನು ಅನ್ನೋದು ಎಲ್ಲರಿಗೂ ಒಂದೇನೆ ಆಗಿದೆ. ಮಹಿಳೆಯರ ಮೇಲಿನ ಅಪರಾಧಗಳಿಗೆ ಕಠಿಣವಾದ ಶಿಕ್ಷೆ ಇದ್ದೇ ಇರುತ್ತದೆ ಎಂದು ಮಾಜಿ ಸಂಸದೆ ರಮ್ಯಾ ತಮ್ಮ ಇನ್ಸ್ಟಾಗ್ರಾಮ್ ಸ್ಟೇಟಸ್‌ನಲ್ಲಿ ಬರೆದಿದ್ದಾರೆ. ಪ್ರಜ್ವಲ್ ರೇವಣ್ಣಗೆ ಶಿಕ್ಷೆ ಘೋಷಿಸಿದ ಬಳಿಕವೇ ಈ ಒಂದು ಸ್ಟೇಟಸ್ ಅನ್ನು ರಮ್ಯಾ ಹಾಕಿದ್ದಾರೆ. ಸಂಜೆ ಸುಮಾರು ನಾಲ್ಕು ಗಂಟೆ ಹೊತ್ತಿಗೆ ಶಿಕ್ಷೆ ಪ್ರಕಟವಾಯಿತು. ಶಿಕ್ಷೆ ಪ್ರಕಟವಾದ ನಂತರ ರಮ್ಯಾ ತಮ್ಮ ಇನ್ಸ್ಟಾಗ್ರಾಮ್ ಪೇಜ್‌ನ ಸ್ಟೇಟಸ್‌ನಲ್ಲಿ ಕಾನೂನಿನ ಮಹತ್ವ ಮತ್ತು ಮಹಿಳೆಯರಿಗೆ ಕಾನೂನು ಎಷ್ಟು ಸಪೋರ್ಟೀವ್ ಆಗಿದೆ ಎಂಬ ಅರ್ಥದಲ್ಲಿಯೇ ಬರೆದಿದ್ದಾರೆ.

ಒಳ ಮೀಸಲಾತಿ ಜಾರಿ ಸಂದರ್ಭದಲ್ಲಿ ಒಗ್ಗಟ್ಟಾಗಿರಲು ದಲಿತ ಸಚಿವ, ಶಾಸಕರ ಸಭೆಯಲ್ಲಿ ನಿರ್ಧಾರ

ಬೆಂಗಳೂರು, ಆ. 2– ನಾಗಮೋಹನ್ ದಾಸ್ ಆಯೋಗ ಶೀಘ್ರದಲ್ಲೇ ಸರ್ಕಾರಕ್ಕೆ ವರದಿ ಸಲ್ಲಿಸುತ್ತದೆ ಎಂಬ ಮಾಹಿತಿ ಇದೆ. ಆ ವರದಿ ನೀಡುವಾಗ ನಾವು ಒಟ್ಟಾಗಿರಬೇಕೆಂಬ ಬಗ್ಗೆ ಚರ್ಚೆಯಾಗಿದೆ. ವಿವಿಧ ಸಮುದಾಯಗಳು, ಪರಿಶಿಷ್ಟ ಜಾತಿಯ ಒಳಪಂಗಡಗಳು ನಾವೆಲ್ಲರೂ ಒಟ್ಟಾಗಿ ಹೋಗಬೇಕೆಂದು ಚರ್ಚೆ ಮಾಡಿದ್ದೇವೆ. ಏನೇ ವ್ಯತ್ಯಾಸ ಇದ್ದರೂ ಸರಿದೂಗಿಸಿಕೊಂಡು ಹೋಗುತ್ತೇವೆ. ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಮಾಡಿದ್ದೇವೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದರು.

ಅವರ ನಿವಾಸದಲ್ಲಿ ಶನಿವಾರ (ಆ.2) ದಲಿತ ಸಚಿವರು, ಶಾಸಕರ ಸಭೆ ನಡೆಯಿತು. ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನಾವು ಒಗ್ಗಟಾಗಿ ಇಲ್ಲದಿದ್ದರೇ ಮತ್ತೆ ಒಳ ಮೀಸಲಾತಿ ಜಾರಿ ವಿಳಂಬವಾಗುತ್ತದೆ. ಒಳ ಮೀಸಲಾತಿ ಸಮಸ್ಯೆ ಮತ್ತಷ್ಟು ಮುಂದಕ್ಕೆ ಹೋಗುತ್ತದೆ. ಒಳ ಮೀಸಲಾತಿ ಜಾರಿ ಮತ್ತೆ ಮುಂದಕ್ಕೆ ಹೋಗಬಾರದೆಂದು ನಾವೆಲ್ಲರೂ ಒಟ್ಟಾಗಿ ಸಭೆ ಸೇರಿ ತೀರ್ಮಾನಕ್ಕೆ ಬಂದಿದ್ದೇವೆ. ವರದಿಯಲ್ಲಿ ಏನೇ ಬರಲಿ ನಾವೆಲ್ಲರೂ ಆ ಕುರಿತು ಚರ್ಚಿಸುತ್ತೇವೆ. ಒಟ್ಟಾಗಿ ಹೋಗಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದರು.

ನಮ್ಮ ಸಮುದಾಯದಲ್ಲಿ 101 ಒಳ ಜಾತಿಗಳಿವೆ. ಅವರಿಗೆಲ್ಲರಿಗೂ ಸಾಮಾಜಿಕವಾಗಿ ನ್ಯಾಯ ಸಿಗಬೇಕು. ವರದಿ ಬಂದ ಮೇಲೆ ನಾವು ಮುಖ್ಯಮಂತ್ರಿಗಳನ್ನು ಭೇಟಿ ಮಾಡುತ್ತೇವೆ. ಎಲ್ಲರಿಗೂ ನ್ಯಾಯ ಸಿಗುವ ನಿಟ್ಟಿನಲ್ಲಿ ಎಲ್ಲರ ಸಹಮತವೂ ಇದೆ. ಸಹಮತ ಇರಬೇಕು ಎಂದೇ ಚರ್ಚೆ ಮಾಡಿದ್ದೇವೆ. ಸಹಮತಿಯನ್ನು ಎಲ್ಲರೂ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು.

ಹಾಸನ, ಹೊಳೆನರಸೀಪುರದಲ್ಲಿ ನೀರವ ಮೌನ

ಹಾಸನ, ಆ.2– ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಜೀವನ ಪರ್ಯಂತ ಜೈಲು ಶಿಕ್ಷೆ ವಿಧಿಸಿ ನ್ಯಾಯಾಲಯ ಆದೇಶ ಹೊರಡಿಸಿದ ಬೆನ್ನಲ್ಲೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ತವರು ಜಿಲ್ಲೆಯಲ್ಲಿ ನೀರವ ಮೌನ ಮನೆ ಮಾಡಿದೆ.

ನ್ಯಾಯಾಲದ ತೀರ್ಪು ಹೊರಬೀಳುತ್ತಿದ್ದಂತೆ ಹೊಳೆನರಸೀಪುರ, ಹಾಸನ ಸೇರಿದಂತೆ ಜಿಲ್ಲೆಯಾದ್ಯಂತ ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಆಯಾಕಟ್ಟಿನ ಪ್ರದೇಶದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಜೆಡಿಎಸ್ ಕಾರ್ಯಕರ್ತರು ಮತ್ತು ಮುಖಂಡರು ಮೌನ ವಹಿಸಿದ್ದಾರೆ.

ಸದಾ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಹಾಗೂ ಸಾರ್ವಜನಿಕರಿಂದ ಗಿಜಿಗಿಡುತ್ತಿದ್ದ ಹೊಳೆನರಸೀಪುರದಲ್ಲಿನ ಮಾಜಿ ಪ್ರಧಾನಿ ದೇವೇಗೌಡರ ನಿವಾಸ ಬಿಕೋ ಎನ್ನುತ್ತಿದೆ. ಮನೆಯಲ್ಲಿ ದೇವೇಗೌಡರ ಕುಟುಂಬದವರು ಯಾರೂ ಕಾಣಿಸಿಕೊಳ್ಳುತ್ತಿಲ್ಲ. ಕೆಲಸಗಾರರು ಮಾತ್ರ ಮನೆಯಲ್ಲಿದ್ದು ಅವರೂ ಕೂಡಾ ಮೌನ ತಾಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತಮ್ಮ ನೆಚ್ಚಿನ ನಾಯಕನ ವಿರುದ್ಧ ತೀರ್ಪು ಪ್ರಕಟವಾದ ಹಿನ್ನೆಲೆಯಲ್ಲಿ ಜೆಡಿಎಸ್ ಕಾರ್ಯಕರ್ತರು ಮತ್ತು ಅಭಿಮಾನಿಗಳು ಆಕ್ರೋಶ ವ್ಯಕ್ತಪಡಿಸುವ ಸಾಧ್ಯತೆ ಇದೆ ಎಂಬ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲೆಡೆ ಖಾಕಿ ಸರ್ಪಗಾವಲು ಹಾಕಲಾಗಿದೆ.

ಧರ್ಮಸ್ಥಳ ಪ್ರಕರಣ: ಎಸ್‌ಐಟಿ ಎದುರು ಹೊಸ ಸಾಕ್ಷಿ ಹಾಜರು

ಯುವತಿಯೊಬ್ಬಳ ಸಾವಿನ ಬಗ್ಗೆ ಹೊಸ ಮಾಹಿತಿ

ಧರ್ಮಸ್ಥಳ: ಬೆಳ್ತಂಗಡಿ ತಾಲೂಕಿನ ಧರ್ಮಸ್ಥಳ ಗ್ರಾಮದಲ್ಲಿ 15 ವರ್ಷಗಳ ಹಿಂದೆ ನಡೆದಿರುವ ಹುಡುಗಿಯ ಅನುಮಾನಾಸ್ಪದ ಸಾವಿನ ಬಗ್ಗೆ ದೂರು ದಾಖಲಿಸಲು ಮತ್ತು ತನಿಖಾ ತಂಡಕ್ಕೆ ನಿರ್ಣಾಯಕ ಸಾಕ್ಷ್ಯವನ್ನು ಸಲ್ಲಿಸಲು ಶನಿವಾರ ಸಂಜೆ ಬೆಳ್ತಂಗಡಿಯಲ್ಲಿ ಹೊಸ ಸಾಕ್ಷಿಯೊಬ್ಬರು ವಿಶೇಷ ತನಿಖಾ ತಂಡದ (ಎಸ್‌ಐಟಿ) ಮುಂದೆ ಹಾಜರಾದರು.

ಸಾಮಾಜಿಕ ಕಾರ್ಯಕರ್ತರೂ ಆಗಿರುವ ಜಯನ್ ಟಿ, 15 ವರ್ಷಗಳ ಹಿಂದೆ ಸಂಭವಿಸಿರುವ ಹುಡುಗಿಯ ಅನುಮಾನಾಸ್ಪದ ಸಾವಿನ ಬಗ್ಗೆ ದೂರು ನೀಡಲು ಸಂಜೆ 7 ಗಂಟೆ ಸುಮಾರಿಗೆ ಬೆಳ್ತಂಗಡಿಯಲ್ಲಿರುವ ಎಸ್‌ಐಟಿ ಕಚೇರಿಗೆ ಆಗಮಿಸಿದರು.

ನಾನು ಆ ಹುಡುಗಿಯ ಶವವನ್ನು ನೋಡಿದ್ದೇನೆ ಮತ್ತು ಅದನ್ನು ಯಾವುದೇ ಕಾನೂನು ವಿಧಾನಗಳನ್ನು ಅನುಸರಿಸದೆ ಹೂಳಲಾಗಿದೆ. ಧರ್ಮಸ್ಥಳ ಗ್ರಾಮದಲ್ಲಿ ಆಕೆಯ ಶವವನ್ನು ಹೂಳಲಾದ ಸ್ಥಳ ನನಗೆ ತಿಳಿದಿದೆ. ನಾನು ಆ ಸ್ಥಳವನ್ನು ಎಸ್‌ಐಟಿ ಅಧಿಕಾರಿಗಳಿಗೆ ತೋರಿಸುತ್ತೇನೆ. ಬಾಲಕಿಯನ್ನು ಕೊಲೆ ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದು ನನಗೆ ತಿಳಿದಿಲ್ಲ ಆದರೆ ಆಕೆಯ ಶವ ಕೊಳೆತ ಸ್ಥಿತಿಯಲ್ಲಿತ್ತು" ಎಂದು ಅವರು ಎಸ್‌ಐಟಿ ಕಚೇರಿಯ ಹೊರಗೆ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಮಿಮ್ಸ್‌ನಲ್ಲಿ ಮತ್ತೋರ್ವ ವಿದ್ಯಾರ್ಥಿ ಆತ್ಮಹತ್ಯೆ



ಮಂಡ್ಯ: ಮಂಡ್ಯ ಮಿಮ್ಸ್‌ನಲ್ಲಿ ಮತ್ತೋರ್ವ ವಿದ್ಯಾರ್ಥಿ ಆತ್ಮಹತ್ಯೆಗೆ ಶರಣಾಗಿದ್ದು, ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿಯನ್ನು ನಿಶ್ಚಲಾ (21) ಎಂದು ಗುರುತಿಸಲಾಗಿದೆ. ಕಳೆದ 10 ದಿನಗಳಲ್ಲಿ ಇಬ್ಬರು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದು, ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕು ಮೂಲದ ಮೆಡಿಕಲ್ ವಿದ್ಯಾರ್ಥಿ ಭರತ್ ಆತ್ಮಹತ್ಯೆ ಬಳಿಕ ನರ್ಸಿಂಗ್ ವಿದ್ಯಾರ್ಥಿನಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಹಾಸ್ಟೆಲ್‌ನಲ್ಲೇ ನೇಣಿಗೆ ಶರಣಾಗಿರುವ ನರ್ಸಿಂಗ್ ವಿದ್ಯಾರ್ಥಿನಿ ನಿಶ್ಚಲಾ, ಮಂಡ್ಯ ತಾಲೂಕಿನ ಗುನ್ನಾಯಕನಹಳ್ಳಿ ಗ್ರಾಮದವಳಾಗಿದ್ದು, ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಅಂತಿಮ ವರ್ಷದ ಬಿಎಸ್ಸಿ ನರ್ಸಿಂಗ್ ವ್ಯಾಸಂಗ ಮಾಡುತ್ತಿದ್ದಳೆಂದು ತಿಳಿದು ಬಂದಿದೆ.

ಹಾಸ್ಟೆಲ್ ಸಹಪಾಠಿ ಪಕ್ಕದ ರೂಂಗೆ ತೆರಳಿದ್ದ ವೇಳೆ ನಿಶ್ಚಲಾ ನೇಣಿಗೆ ಶರಣಾಗಿದ್ದು, ಹಾಸ್ಟೆಲ್ ಕೊಠಡಿಯ ಫ್ಯಾನ್‌ಗೆ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆತ್ಮಹತ್ಯೆಗೆ ಕಾರಣ ಇನ್ನು ತಿಳಿದುಬಂದಿಲ್ಲ. ಮಂಡ್ಯ ಪೂರ್ವ ಪೊಲೀಸ್ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬ್ರಾಹ್ಮಣ ಸಮುದಾಯದ ಪ್ರತಿ ಮನೆಯಲ್ಲಿ ನಾಲ್ಕು ಮಕ್ಕಳು ಹುಟ್ಟಿದರೆ ಮದುವೆ ಸಮಸ್ಯೆ ಇತ್ಯರ್ಥ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್.ರಘುನಾಥ್ ಅಭಿಪ್ರಾಯ



ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ನಗರದ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ಎಕೆಬಿಎಂಎಸ್‌ನ 50ನೇ ವರ್ಷದ ಸುವರ್ಣ ಸಂಭ್ರಮದ ಸವಿ ನೆನಪಿನ 'ವಿಪ್ರ ಮಿಲನ' ಕಾರ್ಯಕ್ರಮವನ್ನು ಎಕೆಬಿಎಂಎಸ್ ಅಧ್ಯಕ್ಷ ಎಸ್.ರಘುನಾಥ್ ಉದ್ಘಾಟಿಸಿದರು.

ಮೈಸೂರು, ಆ.2(ಜಿಎ)–'ಮಕ್ಕಳಿರಲ್ಲವ ಮನೆ ತುಂಬ' ಎಂಬ ಗಾದೆ ಮಾತಿನಂತೆ ಬ್ರಾಹ್ಮಣರ ಪ್ರತಿ ಮನೆ ಮನೆಯಲ್ಲಿಯೂ ನಾಲ್ಕು ಮಕ್ಕಳು ಹುಟ್ಟಿದ್ದರೇ ಬ್ರಾಹ್ಮಣ ಸಮುದಾಯದ ಮದುವೆ ಸಮಸ್ಯೆ ಬಗೆಹರಿಯುತ್ತದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ(ಎಕೆಬಿಎಂಎಸ್) ಅಧ್ಯಕ್ಷ ಎಸ್.ರಘುನಾಥ್ ಅಭಿಪ್ರಾಯಪಟ್ಟರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ನಗರದ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ಎಕೆಬಿಎಂಎಸ್‌ನ 50ನೇ ವರ್ಷದ ಸುವರ್ಣ ಸಂಭ್ರಮದ ಸವಿ ನೆನಪಿನ 'ವಿಪ್ರ ಮಿಲನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬ್ರಾಹ್ಮಣ ಸಮುದಾಯವನ್ನು ಸಾಕಷ್ಟು ಸಮಸ್ಯೆಗಳು ಕಾಡುತ್ತಿದ್ದು, ಅದರಲ್ಲಿ ಮದುವೆ ಸಮಸ್ಯೆ ಪ್ರಮುಖವಾಗಿದೆ. ಈ ಹಿನ್ನೆಲೆಯಲ್ಲಿ ಸಮುದಾಯದ ಮದುವೆಗಳು ನಡೆದಾಗ ಹಿರಿಯರು ನವ ವಧು–ವರರಿಗೆ 'ಮಕ್ಕಳಿರಲ್ಲವ ಮನೆ ತುಂಬ' ಎಂಬ ಮನೋಭಾವದಿಂದ ಸಂತಾನ ಪ್ರಾಪ್ತಿ ರಸ್ತು ಎಂದು ಆಶೀರ್ವಾದ ಮಾಡಿ. ಅದರಂತೆ ಪ್ರತಿಯೊಬ್ಬರ ಮನೆಯಲ್ಲಿ ನಾಲ್ಕು ಮಕ್ಕಳು ಹುಟ್ಟಿದರೇ ಮದುವೆ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮುನ್ನಡೆಸುವುದು ಸುಲಭವಾದ ಕೆಲಸವಲ್ಲ. ಅದರಲ್ಲಿಯೂ ಹೂವಿನಹಾಸಿಗೆ ಅಲ್ಲ. ಇಲ್ಲಿ ಅನೇಕ ಕಟ್ಟುಪಾಡು, ಸವಾಲುಗಳನ್ನು ಎದುರಿಸಬೇಕಿದೆ. ಈ ಬಾರಿಯ ಚುನಾವಣೆಯಲ್ಲಿ ಸಂದರ್ಭದಲ್ಲಿ ಬೈಲಾ ಬದಲಾವಣೆ ಮಾಡಿ, ಜಿಲ್ಲಾ ಪ್ರತಿನಿಧಿಗಳ ಚುನಾವಣೆಯನ್ನು ನಡೆಸಲಾಯಿತು. ಇದು ಬೇಡ ಎಂದು ಈ ಹಿಂದೆಯೇ ಮನವಿ ಮಾಡಲಾಗಿತ್ತು. ಇದರಿಂದ ಸ್ಥಳೀಯ ಪ್ರತಿನಿಧಿಗಳಿಗೆ ಯಾವುದೇ ಜವಾಬ್ದಾರಿ ನೀಡಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲಾ ಪ್ರತಿನಿಧಿಗಳೊಡನೆ ಎರಡು ಸಭೆ ನಡೆಸಲಾಗಿದೆ. ಅದರಲ್ಲಿ ಪ್ರತಿನಿಧಿಗಳು ಜಿಲ್ಲಾ ಘಟಕ ಸ್ಥಾಪನೆಗೆ ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ. ಈ ರೀತಿ ಮಾಡಲು ಸಾಧ್ಯವಿಲ್ಲ. ಆದರಿಂದ ವಿಶೇಷ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದರು.

ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಸಾಕಷ್ಟು ಸಮಸ್ಯೆಗಳಿದ್ದು, ಮುಂದಿನ ದಿನಗಳಲ್ಲಿ ಎಲ್ಲರನ್ನು ಒಗ್ಗಡಿಸಿಕೊಂಡು ಒಟ್ಟಾಗಿ ಹೋಗಲು ನಿರ್ಧರಿಸಲಾಗಿದೆ. ಹಾಗೇ ಬ್ರಾಹ್ಮಣ ಸಮುದಾಯದ ಎಲ್ಲಾ ಒಳ ಪಂಗಡಗಳ ಅಧ್ಯಕ್ಷ ಉಪಾಧ್ಯಕ್ಷರನ್ನು ಸಂಘದ ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸಂಘದ ಮುಂದಿನ ಕಾರ್ಯಗಳು : ನಮ್ಮದು ಪ್ರತಿಷ್ಠಿತ ಸಂಸ್ಥೆ ಅಷ್ಟೇ. ಆರ್ಥಿಕವಾಗಿ ಸದೃಡವಾಗಿರದಿದ್ದರೆ ಯಾವುದೇ ಸಂಘ ಸಹಾಯ ಮಾಡಲು ಸಾಧ್ಯವಿಲ್ಲ. ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹಾಗೂ ಹಿರಿಯ ನಾಗರಿಕರಿಗೆ ಆರೋಗ್ಯ ವಿಮೆ ಮಾಡಿಸುವ ಹಿನ್ನೆಲೆಯಲ್ಲಿ ಸಮುದಾಯದಲ್ಲಿರುವ ಸಿರಿವಂತ ಬ್ರಾಹ್ಮಣರಿಂದ ತಲಾ ಒಂದು ಲಕ್ಷ ದಂತೆ 100 ಕೋಟಿ ಸಂಗ್ರಹಿಸುವ ಗುರಿ ಇದೆ. ಈಗಾಗಲೇ 52ಲಕ್ಷ ಸಂಗ್ರಹವಾಗಿದೆ ಎಂದರು.

ಈ ಹಿಂದಿನ ಅಧ್ಯಕ್ಷರಾದ ಅಶೋಕ್ ಹಾರನಹಳ್ಳಿ ಅವರ ತಂಡವು ಒಂದು ಕೋಟಿ ರೂ. ಗಳನ್ನು ಸಂಘದಲ್ಲಿ ಉಳಿದಿದೆ. ಅದರೊಟ್ಟಿಗೆ ಮತ್ತಷ್ಟು ಹಣ ಸಂಗ್ರಹ ಮಾಡಿ ಸಂಘದ ಸುವರ್ಣ ಭವನದ ಅಭಿವೃದ್ಧಿ ಕಾರ್ಯ ಮಾಡಲಾಗುತ್ತದೆ. ಈಗ ಇರುವ ಗಾಯತ್ರಿ ಭವನ ಚಿಕ್ಕದಿರುವುದರಿಂದ ಬಾಡಿಗೆ ಹಣ ಹೆಚ್ಚಳವಿರುವುದರಿಂದ ಕಾರ್ಯಕ್ರಮಗಳ ಸಂಖ್ಯೆ ಕಡಿಮೆ ಆಗಿದೆ. ಈ ಹಿನ್ನೆಲೆಯಲ್ಲಿ ಬಾಡಿಗೆ ಕಡಿಮೆ ಮಾಡಲಾಗುತ್ತದೆ. ಮತ್ತೊಂದು ಆದಾಯದ ಮೂಲ ಮಾಡಿಕೊಳ್ಳಲಾಗುತ್ತಿದೆ. ಮತ್ತೊಂದೆಡೆ ಉತ್ತರ ಕರ್ನಾಟಕದ ಬ್ರಾಹ್ಮಣರು ಬಂದಾಗ ಅವರು ಉಳಿದುಕೊಳ್ಳಲು ಉಚಿತವಾಗಿ ವಸತಿ ವ್ಯವಸ್ಥೆ ಮಾಡಲಾಗುತ್ತದೆ ಎಂದರು.

ಸಮುದಾಯದಿಂದ ವಿಪ್ರ ನುಡಿ ಪತ್ರಿಕೆಗೆ ಸಾಕಷ್ಟು ಬೇಡಿಕೆ ಇದೆ. ಆದರೆ, ಅದನ್ನು ರಾಜ್ಯಕ್ಕೆ ಪೂರೈಸಲು ಸಾಕಷ್ಟು ಹಣ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಅಂಚೆ ಇಲಾಖೆಯೊಂದಿಗೆ ಚರ್ಚಿಸಿ, ರಿಯಾಯಿತಿ ಕೇಳಲಾಗಿದೆ. ಅದಕ್ಕೆ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸದ್ಯದಲ್ಲಿಯೇ ವಿಪ್ರ ನುಡಿ ಪತ್ರಿಕೆ ಮನೆ ಮನೆಗೆ ತಲುಪಲಿದೆ. ಸಂಘದ ವೆಬ್ ಸೈಟ್ ಅಪ್‌ಡೇಟ್ ಮಾಡಲಾಗುತ್ತಿದ್ದು, ಅದಕ್ಕಾಗಿ 20 ಮಂದಿ ಐಟಿ ಉದ್ಯೋಗಿಗಳನ್ನು ನೇಮಿಸಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಆನ್‌ಲೈನ್ ಮೂಲಕವೇ ಸದಸ್ಯತ್ವ ಪಡೆದುಕೊಳ್ಳುವ ವ್ಯವಸ್ಥೆ ಮಾಡಲಾಗುತ್ತದೆ. ಈಗ ಚತುರ್ವರ್ಣೀಯ ವ್ಯವಸ್ಥೆ ಇಲ್ಲ. ಸಂವಿಧಾನ ಬಂದ ನಂತರ ನಾವು ಜನರಲ್ ವಿಭಾಗದಲ್ಲಿ ಇರುವುದಿಂದ ಬ್ರಾಹ್ಮಣ ಎಂದು ಸರ್ಟಿಫಿಕೇಟ್ ನೀಡುತ್ತಿಲ್ಲ. ಈ ಬಗ್ಗೆ ಕಾನೂನು ಹೋರಾಟ ನಡೆಸಲಾಗುತ್ತದೆ ಎಂದು ತಮ್ಮ ಮುಂದಿನ ಯೋಜನೆಗಳ ಬಗ್ಗೆ ವಿವರಿಸಿದರು.

ಅಭಿನಂದನೆ ಸಮಾರಂಭದಲ್ಲಿ ಹಾರ–ತುರಾಯಿ ವಿರೋಧಿಸಿದ ಎಸ್.ರಘುನಾಥ್ ಅವರು, ಮೈಸೂರು ಪೇಟಾ ಯಾವಾಗಲೂ ಮೈಸೂರಿನ ಮಹಾರಾಜರಿಗೆ ಮತ್ತು ಸರ್.ಎಂ.ವಿಶ್ವೇಶ್ವರಯ್ಯರಿಗೆ ಮಾತ್ರ ಸೂಕ್ತ ನಮಗಲ್ಲ. ಅದರ ಬದಲು ಪುಸ್ತಕ ನೀಡಿ ಗ್ರಂಥಾಲಯ ನಿರ್ಮಿಸೋಣ ಎಂದು ಕರೆ ನೀಡಿದರು.

ನಂತರ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ ಮಾತನಾಡಿ, ಬ್ರಾಹ್ಮಣ ಸಮುದಾಯದ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿ ಪ್ರತಿಭಾ ಪುರಸ್ಕಾರಕ್ಕೆ ಮಂಡಳಿ ವತಿಯಿಂದ ಹಣ ಮೀಸಲಿಡಲಾಗಿದೆ. ಹಾಗೇ ಐಎಎಸ್, ಐಪಿಎಸ್ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ತಲಾ ಒಂದು ಲಕ್ಷ ರೂ. ಹಣ ನೀಡಲಾಗುತ್ತದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬ್ರಾಹ್ಮಣ ಸಮುದಾಯಕ್ಕೆ ಸಾಕಷ್ಟು ಅನುದಾನ ನೀಡಿದ್ದಾರೆ. ಇಲ್ಲಿ ಪಕ್ಷ ಮುಖ್ಯವಲ್ಲ. ಉಪಕಾರ ಮಾಡಿದವರನ್ನು ನೆನಪು ಮಾಡಿಕೊಳ್ಳುವುದು ಬ್ರಾಹ್ಮಣ ಧರ್ಮ ಎಂದು ತಿಳಿಸಿದರು.

ನಂತರ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠ ಕುಮಾರ್ ಅವರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ(ಎಕೆಬಿಎಂಎಸ್) ನಡೆದು ಬಂದ ಹಾದಿಯ ಏಳು–ಬೀಳುಗಳ ಬಗ್ಗೆ ವಿವರಿಸಿದರು.


ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ (ಎಕೆಬಿಎಂಎಸ್) ರಾಜ್ಯ ಉಪಾಧ್ಯಕ್ಷ ಹಾಗೂ ಮುಡಾ ಮಾಜಿ ಅಧ್ಯಕ್ಷರೂ ಆದ ಹೆಚ್.ವಿ.ರಾಜೀವ್, ಹಿರಿಯ ಉಪಾಧ್ಯಕ್ಷ ಆರ್.ಲಕ್ಷ್ಮಿಕಾಂತ್, ವಿಶ್ವನಾಥಯ್ಯ, ಜೆ.ಹೆಚ್.ಅನಿಲ್ ಕುಮಾರ್, ಜಿಲ್ಲಾ ಪ್ರತಿನಿಧಿಗಳಾದ ಡಿ.ಟಿ.ಪ್ರಕಾಶ್, ಡಾ.ಕೆ.ವಿ.ಲಕ್ಷ್ಮಿದೇವಿ ಉಪಸ್ಥಿತರಿದ್ದರು.

> **ದಲಿತರಂತೆ ನೀವು ಸಂವಿಧಾನ ಓದಿ ಕಾನೂನು ಅರಿವು ಹೆಚ್ಚಿಸಿಕೊಳ್ಳಿ**
>
> ಇತ್ತೀಚೆಗೆ ಸಮುದಾಯದಲ್ಲಿ ಅಣ್ಣ, ತಮ್ಮ ಮತ್ತು ಅಪ್ಪ, ಮಕ್ಕಳು ಸೇರಿದಂತೆ ಕುಟುಂಬಗಳಲ್ಲಿ ವ್ಯಾಜ್ಯಗಳ ಸಂಖ್ಯೆ ಹೆಚ್ಚಳವಾಗುತ್ತಿದ್ದು ಅದನ್ನು ತಪ್ಪಿಸ ಬೇಕು. ಸಂವಿಧಾನವನ್ನು ಓದಬೇಕು. ದಲಿತ ಸಮುದಾಯದವರು ಸಂವಿಧಾನ ವನ್ನು ಓದಿ, ಕಾನೂನಿನ ಸೆಕ್ಷನ್‌ಗಳ ಬಗ್ಗೆ ಅರಿವು ಹೆಚ್ಚಿಸಿಕೊಂಡಿದ್ದಾರೆ. ನಾವು ಓದಿ ಕಾನೂನು ಅರಿವು ಹೆಚ್ಚಿಸಿಕೊಳ್ಳಿ, ಮೂರು ತಿಂಗಳಿಗೊಮ್ಮೆ ತರಗತಿಗಳನ್ನು ನಡೆಸಬೇಕು. ಇದರಿಂದ ವ್ಯಾಜ್ಯಗಳು ಕಡಿಮೆ ಆಗುತ್ತದೆ.
>
> -ಎಸ್.ರಘುನಾಥ್, ಅಧ್ಯಕ್ಷ, ಎಕೆಬಿಎಂಎಸ್

ಮಾದಕ ವಸ್ತು ಜಾಲದ ವಿರುದ್ಧ ಮೈಸೂರು ಪೊಲೀಸರ ಸಮರ

- ಹಲವರ ವಿರುದ್ಧ ಪ್ರಕರಣ ದಾಖಲು
- ಯುವಕರಿಗೆ ವ್ಯಸನ ತ್ಯಜಿಸಲು ಕಿವಿಮಾತು

300ಕ್ಕೂ ಅಧಿಕ ಶಂಕಿತ ವ್ಯಸನಿಗಳ ಪರೀಕ್ಷೆ; 62 ಮಂದಿಗೆ ಪಾಸಿಟಿವ್



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಶನಿವಾರ ಮಾದಕ ವಸ್ತು ಸೇವನೆ ಪರೀಕ್ಷೆಯ ಬೃಹತ್ ತಪಾಸಣೆಯಲ್ಲಿ ಭಾಗವಹಿಸಿದ್ದ ಅನುಮಾನಾಸ್ಪದ ವ್ಯಕ್ತಿಗಳಿಗೆ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳುವಳಿಕೆ ನೀಡಿದರು. ಈ ವೇಳೆ ಡಿಸಿಪಿಗಳಾದ ಬಿಂದು ಮಣಿ, ಸುಂದರ್ ರಾಜ್ ಮತ್ತಿತರ ಅಧಿಕಾರಿಗಳಿದ್ದರು.

ಮೈಸೂರು, ಆ.2(ಎಸ್‌ಬಿಡಿ)– ಮಾದಕ ವಸ್ತು ಜಾಲದ ವಿರುದ್ಧ ಸಮರ ಸಾರಿರುವ ಮೈಸೂರು ಪೊಲೀಸರು, ಶನಿವಾರ ನೂರಾರು ಶಂಕಿತ ವ್ಯಸನಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದರು.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ನಿರ್ದೇಶನದಲ್ಲಿ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಬೃಹತ್ ತಪಾಸಣೆ ಆಯೋಜಿಸಿ, 300ಕ್ಕೂ ಹೆಚ್ಚು ಅನುಮಾನಾಸ್ಪದ ವ್ಯಕ್ತಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಕೆ.ಆರ್. ಆಸ್ಪತ್ರೆ ವೈದ್ಯರು ಹಾಗೂ ಸಿಬ್ಬಂದಿ, ಯೂರಿನ್ ಡ್ರಗ್ ಟೆಸ್ಟ್ ವಿಧಾನದಲ್ಲಿ ಪರೀಕ್ಷೆ ನಡೆಸಿದರು. ಸಂಜೆ ವೇಳೆಗೆ 62 ಮಂದಿಗೆ ಪಾಸಿಟಿವ್ ಬಂದಿದ್ದು, ಅವರನ್ನು ವಶಕ್ಕೆ ಪಡೆದು ಮಾದಕ ವಸ್ತು ಸೇವಿಸಿದ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ.

ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಡಿಸಿಪಿಗಳಾದ ಆರ್.ಎನ್. ಬಿಂದು ಮಣಿ, ಕೆ.ಎಸ್.ಸುಂದರ್ ರಾಜ್, ಎಸಿಪಿ ಸ್ನೇಹ ರಾಜ್ ಸೇರಿದಂತೆ ವಿವಿಧ ಠಾಣೆಯ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ, ವೈದ್ಯಕೀಯ ಪರೀಕ್ಷೆ ನಿರ್ವಹಿಸಿದರು. ಪೊಲೀಸರು ಕರೆತಂದಿದ್ದ ಅನುಮಾನಾಸ್ಪದ ವ್ಯಕ್ತಿಗಳು ಸರದಿಯಲ್ಲಿ ಸಾಗಿ ತಪಾಸಣೆಗೆ ಒಳಗಾದರು.

ಬಹುತೇಕ ಯುವಕರು: ನಗರದ ಎಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲೂ ಟೀ ಅಂಗಡಿ, ಪಾರ್ಕ್, ಖಾಲಿ ನಿವೇಶನ, ಪಿಜಿ ಹಾಸ್ಟೆಲ್‌ಗಳು ಸೇರಿದಂತೆ ಹಲವೆಡೆ ಪರಿಶೀಲನೆ ನಡೆಸಿ, ಮಾದಕ ವಸ್ತು ಸೇವನೆ ಮಾಡಿದಂತೆ ಕಂಡುಬಂದವರನ್ನು ತಪಾಸಣೆಗಾಗಿ ಕರೆತರಲಾಗಿತ್ತು. ಇವರಲ್ಲಿ ಈ ಹಿಂದೆ ಗಾಂಜಾ ಸೇವನೆ ಮಾಡಿ, ಪ್ರಕರಣ ದಾಖಲಾಗಿದ್ದವರೂ ಹಲವರಿದ್ದರು. ಬಹುತೇಕ ಮಂದಿ 20ರ ಆಸುಪಾಸಿನ ಯುವಕರಿದ್ದರು. ಅದರಲ್ಲೂ ಪಿಜಿ, ಬಾಡಿಗೆ ಕೊಠಡಿಯಲ್ಲಿ ನೆಲೆಸಿರುವ ವಿದ್ಯಾರ್ಥಿಗಳೂ ಹೆಚ್ಚಿನ ಸಂಖ್ಯೆಯಲ್ಲಿದ್ದರು ಎನ್ನುವುದು ಆತಂಕಕಾರಿ ಸಂಗತಿ. ವಿದ್ಯಾಭ್ಯಾಸ ಮೊಟಕುಗೊಳಿಸಿ ಗಾರೆ ಕೆಲಸ, ಪೇಂಟಿಂಗ್, ಬಾಡ್‌ಬೆಂಡಿಂಗ್ ಇನ್ನಿತರ ಸಣ್ಣಪುಟ್ಟ ಕೆಲಸ ಮಾಡಿಕೊಂಡಿರುವವರು ವ್ಯಸನಕ್ಕೆ ಬಲಿಯಾಗಿರುವುದು ತಪಾಸಣೆ ವೇಳೆ ಕಂಡುಬಂದಿತು.

ಕಾರ್ಯಾಚರಣೆ ನಿಲ್ಲದು: ಇಂದು ದೊಡ್ಡ ಮಟ್ಟದಲ್ಲಿ ಅನುಮಾನಾಸ್ಪದ ವ್ಯಕ್ತಿಗಳನ್ನು ತಪಾಸಣೆಗೆ ಒಳಪಡಿಸಿ, ಮಾದಕ ವಸ್ತು ಸೇವನೆ ಮಾಡಿದ್ದವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈ ಕಾರ್ಯಾಚರಣೆ ಆಯಾಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮುಂದುವರೆಯಲಿದೆ. ಸಾರ್ವಜನಿಕರು ಸಹಕಾರ ನೀಡಿದರೆ ನಗರವನ್ನು ವ್ಯಸನಮುಕ್ತಗೊಳಿಸಬಹುದು ಎಂದು ಪೊಲೀಸರು ಮನವಿ ಮಾಡಿದ್ದಾರೆ.

ಧರ್ಮಸ್ಥಳದಲ್ಲಿ ಶವಗಳ ಹೂತಿಟ್ಟ ಪ್ರಕರಣ; 9ನೇ ಸ್ಥಳದಲ್ಲಿ ಶೋಧ

ಧರ್ಮಸ್ಥಳ, ಆ.2– ಧರ್ಮಸ್ಥಳದಲ್ಲಿ ನಡೆದ ಸಾಮೂಹಿಕ ಅಂತ್ಯಕ್ರಿಯೆ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ದೂರುದಾರ ಗುರುತಿಸಿದ 9ನೇ ಸ್ಥಳದಲ್ಲಿ ಶನಿವಾರ ಮತ್ತೆ ಶೋಧಕಾರ್ಯ ಆರಂಭಿಸಲಾಯಿತು.

ಅಧಿಕಾರಿಗಳು ಉಜಿರೆ–ಧರ್ಮಸ್ಥಳ–ಕೊಕ್ಕಡ ರಾಜ್ಯ ಹೆದ್ದಾರಿ (ಎಸ್‌ಎಚ್–73) ದ ನೇತ್ರಾವತಿ ನದಿ ದಂಡೆಯ ಪಕ್ಕದಲ್ಲಿರುವ ಸ್ಥಳಕ್ಕೆ ಬೆಳಿಗ್ಗೆ 11.30 ರ ಸುಮಾರಿಗೆ ತಲುಪಿದ್ದು, ಇದು ಸತತ ಐದನೇ ದಿನದ ಶೋಧ ಕಾರ್ಯವಾಗಿದೆ.

ಪೊಲೀಸ್ ಮೂಲಗಳ ಪ್ರಕಾರ ಎಸ್‌ಐಟಿ ಶನಿವಾರ ದೂರುದಾರರ ಸಮ್ಮುಖದಲ್ಲಿ 9 ರಿಂದ 12 ರವರೆಗಿನ ನಾಲ್ಕು ಪಕ್ಕದ ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಲು ಯೋಜಿಸಿದೆ. ಅನಾಮಧೇಯ ದೂರುದಾರ–ಸಾಕ್ಷಿ ಗುರುತಿಸಿದ 15 ಸ್ಥಳಗಳಲ್ಲಿ ಈ ಸ್ಥಳಗಳೂ ಸೇರಿವೆ. ಆತ ಹಲವಾರು ವರ್ಷಗಳಿಂದ ನದಿ ದಂಡೆಯ ಉದ್ದಕ್ಕೂ ಅನೇಕ ಮಾನವ ಶವಗಳನ್ನು ಹೂಳಿದ್ದಾರೆ ಎಂದು ಹೇಳಿಕೊಂಡಿದ್ದಾನೆ.

ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಸ್ಥಳಗಳ ಸುತ್ತಲೂ ರಕ್ಷಣಾತ್ಮಕ ಸುತ್ತುವರಿದಿರುವುದರಿಂದ ಭದ್ರತೆಯನ್ನು ಬಿಗಿಗೊಳಿಸಿದ್ದರು. ಮಾಧ್ಯಮ ಮತ್ತು ಸಾರ್ವಜನಿಕರಿಂದ ಅನಧಿಕೃತ ದೃಶ್ಯ ಪ್ರವೇಶವನ್ನು ತಡೆಯಲು ಹಸಿರು ಬಟ್ಟೆಯ ಬ್ಯಾರಿಕೇಡ್ ಅನ್ನು ನಿರ್ಮಿಸಲಾಗಿತ್ತು.

ಅರಣ್ಯ ಇಲಾಖೆಯಿಂದ ಅರ್ಜುನನ ಹೆಸರಲ್ಲಿ ವಾರ್ಷಿಕ ಪ್ರಶಸ್ತಿ

- ಗಜಪಯಣದ ವೇಳೆ ಪ್ರಶಸ್ತಿ ಪ್ರಧಾನ
- ಅರಣ್ಯ ಸಚಿವ ಈಶ್ವರ ಖಂಡ್ರೆ ಅಧಿಕೃತ ಪ್ರಕಟ

ಚೊಚ್ಚಲ ಪ್ರಶಸ್ತಿ ಭೀಮನ ಮಾವುತ ಗುಂಡಣ್ಣ, ಕಾವಾಡಿ ನಂಜುಂಡಸ್ವಾಮಿಗೆ ಘೋಷಣೆ



ಅರ್ಜುನ ಆನೆ



ಮಾವುತ ಗುಂಡಣ್ಣ



ಕಾವಾಡಿ ನಂಜುಂಡಸ್ವಾಮಿ

ಮೈಸೂರು, ಆ.2(ಎಂಟಿವೈ)– ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಬಲಾಢ್ಯ ಒಂಟಿ ಸಲಗನ ದಾಳಿಯಲ್ಲಿ ಮಡಿದ ದಸರಾ ಆನೆ 'ಅರ್ಜುನ' ಹೆಸರಿನಲ್ಲಿ ಅರಣ್ಯ ಇಲಾಖೆ ರಾಜ್ಯ ಮಟ್ಟದ ಪ್ರಶಸ್ತಿ ಸ್ಥಾಪಿಸಿದ್ದು, ಚೊಚ್ಚಲ ಪ್ರಶಸ್ತಿಯನ್ನು ಭವಿಷ್ಯದ ಅಂಬಾರಿ ಆನೆ ಎಂದೇ ಬಿಂಬಿತವಾಗಿರುವ ಭೀಮನ ಮಾವುತ ಗುಂಡಣ್ಣ ಹಾಗೂ ಕಾವಾಡಿ ನಂಜುಂಡಸ್ವಾಮಿ ಅವರಿಗೆ ನೀಡಲು ಅರಣ್ಯ ಇಲಾಖೆ ನಿರ್ಧರಿಸಿದೆ.

2023ರ ಡಿಸೆಂಬರ್‌ನಲ್ಲಿ ಹಾಸನದ ಯಸಳೂರು ವಲಯದಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ ಮದವೇರಿದ ಒಂಟಿ ಸಲಗವೊಂದು ಅರ್ಜುನ ಆನೆ ಮೇಲೆ ದಾಳಿ ನಡೆಸಿ, ಕೊಂದು ಹಾಕಿತ್ತು. ಅಂಬಾರಿ ಹೊರುವ ಜವಾಬ್ದಾರಿಯಿಂದ ಬಲರಾಮನ ನಿವೃತ್ತಿ ಬಳಿಕ 2012ರಿಂದ 2019ರವರೆಗೆ ದಸರಾ ಮಹೋತ್ಸವದಲ್ಲಿ ಚಿನ್ನದ ಅಂಬಾರಿ ಹೊತ್ತು ಎಲ್ಲರ ಮನ ಸೂರೆಗೊಂಡಿದ್ದ ಅರ್ಜುನ ದುರಂತ ಸಾವು ಅಭಿಮಾನಿಗಳಲ್ಲಿ ಆಘಾತವನ್ನೇ ಉಂಟುಮಾಡಿತ್ತು. ಕರ್ನಾಟಕ ಮಾತ್ರವಲ್ಲದೆ, ದೇಶದ ವಿವಿಧ ರಾಜ್ಯಗಳಲ್ಲೂ ಅಪಾರ ಅಭಿಮಾನಿ ಬಳಗ ಹೊಂದಿದ್ದ ಅರ್ಜುನನ ಸ್ಮರಣಾರ್ಥ ಎರಡು ಕಡೆ ಸ್ಮಾರಕ ನಿರ್ಮಾಣ ಮಾಡಲಾಗಿದೆ. ಈ ಮಧ್ಯೆ ಹೆಚ್. ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಅರ್ಜುನನ ಹೆಸರಲ್ಲಿ ರಾಜ್ಯ ಮಟ್ಟದ ಪ್ರಶಸ್ತಿ ಸ್ಥಾಪಿಸುವಂತೆ ಮನವಿ ಮಾಡಿದ್ದರು.

ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಮೈಸೂರು ವನ್ಯಜೀವಿ ವಿಭಾಗವು 'ಅರ್ಜುನ'ನ ಹೆಸರಲ್ಲಿ ರಾಜ್ಯಮಟ್ಟದ ಪ್ರಶಸ್ತಿ ಸ್ಥಾಪಿಸಿದೆ. ಪ್ರತಿ ವರ್ಷ ರಾಜ್ಯದ ಎಲ್ಲಾ ಆನೆ ಕ್ಯಾಂಪ್‌ಗಳ ಆನೆಗಳನ್ನು ಹೆಚ್ಚಿನ ಮುತುವರ್ಜಿಯಿಂದ ಪಾಲನೆ, ಪೋಷಣೆ ಮಾಡಿರುವ ಮಾವುತ, ಕಾವಾಡಿಗಳಿಗೆ 'ಅರ್ಜುನ' ಪ್ರಶಸ್ತಿ ನೀಡಲು ಉದ್ದೇಶಿಸಲಾಗಿದೆ. ಮೊದಲ ಪ್ರಶಸ್ತಿಯು ಮತ್ತಿಗೋಡು ಆನೆ ಕ್ಯಾಂಪ್‌ನಲ್ಲಿರುವ ದಸರಾ ಆನೆ ಭೀಮ(24)ನ ಪಾಲನೆ ಮಾಡುತ್ತಿರುವ ಮಾವುತ ಗುಂಡಣ್ಣ ಹಾಗೂ ಕಾವಾಡಿ ನಂಜುಂಡಸ್ವಾಮಿಗೆ ದಕ್ಕಿದೆ. ತಾಯಿಯಿಂದ ಬೇರ್ಪಟ್ಟಿದ್ದ ಆನೆ ಮರಿಯನ್ನು ಅರಣ್ಯ ಇಲಾಖೆ ಪಾಲನೆ ಮಾಡಿ, ಭೀಮ ಎಂದು ನಾಮಕರಣ ಮಾಡಲಾಗಿತ್ತು.

ಗಜಪಯಣದ ದಿನ ಪ್ರಶಸ್ತಿ ಪ್ರಧಾನ: ಅರ್ಜುನ ವಾರ್ಷಿಕ ಪ್ರಶಸ್ತಿ ಸ್ಥಾಪಿಸಿ, ಭೀಮ ಆನೆಯ ಮಾವುತ, ಕಾವಾಡಿಗೆ ನೀಡುತ್ತಿರುವುದಾಗಿ ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ ಬೀದರ್‌ನಲ್ಲಿ ಘೋಷಣೆ ಮಾಡಿದ್ದಾರೆ. ಸೆರೆ ಹಿಡಿದ ಆನೆಗಳನ್ನು ಪಳಗಿಸಿ ಆರೈಕೆ ಮಾಡುವಲ್ಲಿ ಯಶಸ್ವಿಯಾಗಿರುವ ಮಾವುತ, ಕಾವಾಡಿ, ಸಿಬ್ಬಂದಿ ಗುರುತಿಸಿ ಪ್ರತಿವರ್ಷದ ಗಜ ಪಯಣ ಸಂದರ್ಭದಲ್ಲಿ 'ಅರ್ಜುನ ಆನೆ' ಪ್ರಶಸ್ತಿ ಪ್ರದಾನ ಮಾಡಲು ತೀರ್ಮಾನಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

1968ರಲ್ಲಿ ಕಾಕನಕೋಟೆಯಲ್ಲಿ ನಡೆದ ಖೆಡ್ಡಾ ಕಾರ್ಯಾಚರಣೆಯಲ್ಲಿ ಸೆರೆಹಿಡಿಯಲಾಗಿದ್ದ ಅರ್ಜುನ 22 ಬಾರಿ ಜಂಬೂಸವಾರಿಯಲ್ಲಿ ಭಾಗಿಯಾಗಿ, 8 ಬಾರಿ 750 ಕೆ.ಜಿ. ತೂಕದ ಚಿನ್ನದ ಅಂಬಾರಿಯನ್ನು ಹೊತ್ತು, ಜನ ಮನ ಗೆದ್ದಿದ್ದ.

ನಾಡಿದ್ದು ವೀರನಹೊಸಹಳ್ಳಿಯಲ್ಲಿ ನಡೆಯಲಿರುವ ಗಜ ಪಯಣದ ಸಂದರ್ಭದಲ್ಲಿ ಹಾಸನ, ಸಕಲೇಶಪುರ, ಕೊಡಗು ಮೊದಲಾದ ಕಡೆಗಳಲ್ಲಿ ಆನೆ ಮತ್ತು ವನ್ಯಜೀವಿ ಸೆರೆ ಕಾರ್ಯಾಚರಣೆಗಳಲ್ಲಿ ಪಾಲ್ಗೊಂಡ, ಭೀಮನ ಮಾವುತ ಗುಂಡಣ್ಣ ಹಾಗೂ ಕಾವಾಡಿ ನಂಜುಂಡಸ್ವಾಮಿ ಅವರಿಗೆ 2025ರ ಸಾಲಿನ 'ಅರ್ಜುನ ಆನೆ' ಪ್ರಶಸ್ತಿ ನೀಡಲು 2025ರ ದಸರಾ ಆನೆಗಳ ಆಯ್ಕೆ ಸಮಿತಿಯ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಮೈಸೂರು ಮಿತ್ರ ಭಾನುವಾರ 3 ಆಗಸ್ಟ್ 2025

ಅಂತೂ ಭೂ ಮಾಲೀಕನಿಗೆ ಸಿಕ್ತು 1.60 ಕೋಟಿ ರೂ. ಪರಿಹಾರ; ಅಕ್ರಮ ಬಡಾವಣೆ ವಿರುದ್ಧ ಕ್ರಿಮಿನಲ್ ಕೇಸ್; ನಿಮ್ಮ ಡ್ರಾಮಾ ನನಗೆ ಗೊತ್ತು...!

ಮೈಸೂರಿನಲ್ಲಿ ನಡೆದ ದೂರು ವಿಚಾರಣಾ ಸಭೆಯಲ್ಲಿ ಅಧಿಕಾರಿಗಳಿಗೆ ಉಪ ಲೋಕಾಯುಕ್ತ ನ್ಯಾ.ಫಣೀಂದ್ರ ತರಾಟೆ; ಎಚ್ಚರಿಕಾ ಸಂದೇಶ

ಮೈಸೂರು, ಆ.2(ಬಿಎಲ್‌ಯು)– ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ ಒತ್ತುವರಿಯಾಗಿದ್ದ ಭೂಮಿ ಮಾಲೀಕರಿಗೆ 1.60 ಕೋಟಿ ಪರಿಹಾರ... ಅಕ್ರಮ ಬಡಾವಣೆ ನಿರ್ಮಾಣ ಮಾಡಿದ್ದ ಗೃಹ ನಿರ್ಮಾಣ ಸಹಕಾರ ಸಂಘದವರ ವಿರುದ್ಧ ಕ್ರಿಮಿನಲ್ ಕೇಸ್‌ಗೆ ಆದೇಶ... ಪೋಡಿ ಹಾಗೂ ಖಾತೆ ಮಾಡದ ಪಂಚಾಯಿತಿ ಅಧಿಕಾರಿಗಳ ವಿರುದ್ಧ ಕರ್ತವ್ಯ ಲೋಪದ ಕ್ರಮ... ಜನರನ್ನು ಅಲೆದಾಡಿಸಿದರೆ ಸಹಿಸುವುದಿಲ್ಲ... ಅಧಿಕಾರಿಗಳ ಡ್ರಾಮಾ ನನಗೆಲ್ಲಾ ಗೊತ್ತು... ನ್ಯೂನತೆ ಸರಿಪಡಿಸುವಂತೆ ಬಾಲಮಂದಿರದ ಅಧಿಕಾರಿಗಳಿಗೆ ಎಚ್ಚರಿಕೆ...

ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಇಂದು ಸಾರ್ವಜನಿಕರಿಂದ ದೂರು ಸ್ವೀಕಾರ, ಪ್ರಕರಣಗಳ ವಿಲೇವಾರಿ ಸಂಬಂಧ ನಡೆದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಬೇಜವಾಬ್ದಾರಿ ಮೆರೆಯುವ ಅಧಿಕಾರಿಗಳಿಗೆ ಬೀಸಿದ ಚಾಟಿ ಇದು.

ಮೈಸೂರು ಜಿಲ್ಲೆ ನಂಜನಗೂಡಿನಲ್ಲಿ ಘನತ್ಯಾಜ್ಯ ವಸ್ತುಗಳ ನಿರ್ವಹಣಾ ಘಟಕ ಸ್ಥಾಪಿಸುವಾಗ ತಮ್ಮ ಭೂಮಿ ಒತ್ತುವರಿ ಮಾಡಿಕೊಳ್ಳಲಾಗಿದ್ದು, ಪರಿಹಾರ ನೀಡಿಲ್ಲವೆಂದು ಭೂಮಿ ಮಾಲೀಕ ಪುಟ್ಟಮಾದಯ್ಯ ಅವರು ನಗರಸಭೆಗೆ ಅಲೆದರೂ ಪರಿಹಾರ ನೀಡಿರಲಿಲ್ಲ.

ಈ ಸಂಬಂಧ ಪುಟ್ಟಮಾದಯ್ಯ ಅವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಇದನ್ನು ಕೂಲಂಕುಷವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಲೋಕಾಯುಕ್ತರು ಮೈಸೂರು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದರು. ತರುವಾಯ ಜಿಲ್ಲಾಧಿಕಾರಿಗಳ ಆದೇಶದಂತೆ ನಂಜನಗೂಡು ನಗರಸಭೆಯ ಕೌನ್ಸಿಲ್ ಪರಿಹಾರ ನೀಡಲು ಅನುಮೋದನೆ ನೀಡಿತು. ನಂತರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಸಮಿತಿಯಲ್ಲಿ ಒತ್ತುವರಿಯಾಗಿದ್ದ ಭೂಮಿಗೆ ಪರಿಹಾರ ನೀಡಲು ತೀರ್ಮಾನ ಮಾಡಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು

ಉಪ ಲೋಕಾಯುಕ್ತ ನ್ಯಾಯಮೂರ್ತಿ ಫಣೀಂದ್ರ ಅವರು 1,60,82,242 ರೂ.ಗಳ ಚೆಕ್ ಅನ್ನು ಪುಟ್ಟಮಾದಯ್ಯ ಅವರಿಗೆ ಹಸ್ತಾಂತರ ಮಾಡಿದರು.

ಗೃಹ ನಿರ್ಮಾಣ ಸಹಕಾರ ಸಂಘದ ವಿರುದ್ಧ ಕ್ರಿಮಿನಲ್ ಕೇಸ್– ಮೈಸೂರಿನ ಬೋಗಾದಿಯಲ್ಲಿ ಕನಕ ಗೃಹ ನಿರ್ಮಾಣ ಸಹಕಾರ ಸಂಘದವರು ಬಡಾವಣೆ ನಿರ್ಮಿಸಿದ್ದು, ಕಾನೂನು ರೀತ್ಯಾ ಪಾರ್ಕ್ ಹಾಗೂ ಸಿಎ ನಿವೇಶನಕ್ಕೆ ಜಾಗ ಬಿಡದೆ ಅಲ್ಲಿ ನಿವೇಶನ ರಚನೆ ಮಾಡಿ ಮಾರಾಟ ಮಾಡಿದ್ದಾರೆ ಎಂದು ಅಲ್ಲಿನ ವಾಸಿ ಡಾ.ಹನುಮನಾಯಕ್ ಆರೋಪ ಮಾಡಿದರು.

ಅಲ್ಲದೆ ಬೋಗಾದಿ ಪಟ್ಟಣ ಪಂಚಾಯಿತಿಗೆ ಅಲೆದರೂ ಈ ತನಕ 11 ಬಿ ಖಾತೆ ನೀಡಿಲ್ಲ ಎಂದು ದೂರಿದರು. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಮೂರ್ತಿ ಫಣೀಂದ್ರ, ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದರು.

ಬಹಳಷ್ಟು ಪ್ರಭಾವಿಗಳು ಅಕ್ರಮ ಬಡಾವಣೆ ನಿರ್ಮಾಣ ಮಾಡಿ ಕೋಟ್ಯಾಂತರ ರೂಪಾಯಿ ಆದಾಯ ಮಾಡಿಕೊಂಡು ತಲೆಮರೆಸಿಕೊಳ್ಳುತ್ತಾರೆ. ಇಂತಹ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಅನ್ಯಾಯ ಮುಂದುವರೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಈ ಪ್ರಕರಣ ಸದ್ಯ ಹೈಕೋರ್ಟ್ ವಿಚಾರಣೆಯಲ್ಲಿದೆ ಎಂದು ಪಟ್ಟಣ ಪಂಚಾಯಿತಿ ಅಧಿಕಾರಿಗಳು ಮಾಹಿತಿ ನೀಡಿದರು.

ಹೈಕೋರ್ಟ್ ವಿಚಾರಣೆ ನಡೆಯಲಿ. ಈಗ ನೀವು ಬಡಾವಣೆಯ ಮೂಲ ನಕ್ಷೆ ಪಡೆದು ಕಾನೂನು ಪ್ರಕಾರವಾಗಿ ಮುಂದುವರೆಯಿರಿ. ಬಡಾವಣೆಯಲ್ಲಿ ಈಗ ರಚನೆಯಾಗಿರುವ ನಿವೇಶನ ಬಿಟ್ಟು ಉಳಿದಿರುವ ಜಾಗದಲ್ಲಿ ಪಾರ್ಕ್ ಹಾಗೂ ಸಿಎ ನಿವೇಶನವಾಗಿ ಮಾರ್ಪಡಿಸಿ. ಜೊತೆಗೆ ಅಕ್ರಮ ಬಡಾವಣೆ ನಿರ್ಮಾಣ ಮಾಡಿರುವ ಕನಕ ಗೃಹ ನಿರ್ಮಾಣ ಸಹಕಾರ ಸಂಘದವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ ಎಂದು ಬೋಗಾದಿ ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ಆದೇಶ ನೀಡಿದರು. ಜೊತೆಗೆ ದೂರುದಾರರಾದ ಡಾ.ಹನುಮನಾಯಕ್ ಅವರಿಗೆ ಕೂಡಲೇ 11 ಬಿ ಖಾತೆ ಮಾಡಿಕೊಡಬೇಕು ಎಂದು ಸೂಚನೆ ಕೂಡ ನೀಡಿದರು.

ಕರ್ತವ್ಯ ಲೋಪದ ಕ್ರಮ– ಮೈಸೂರಿನ ಲಿಂಗಾಂಬುದಿ ಗ್ರಾಮದಲ್ಲಿ ಪೋಡಿ ಹಾಗೂ ಖಾತೆ ಮಾಡಿಕೊಟ್ಟಿಲ್ಲ ಎಂದು ಲಕ್ಷ್ಮಿ ಎಂಬುವರು ಗ್ರಾಮ ಪಂಚಾಯಿತಿ ಅಧಿಕಾರಿಗಳ ಆರೋಪಿಸಿದರು. ದೂರುದಾರರ ನಿವೇಶನವನ್ನು ಅಳತೆ ಮಾಡಿಕೊಡಬೇಕು. ಇಲ್ಲವೆಂದರೆ ಕರ್ತವ್ಯಲೋಪ ಎಸಗಿದ್ದೀರಾ ಎಂದು ಸರ್ಕಾರಕ್ಕೆ ಶಿಫಾರಸು ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ ನ್ಯಾಯಮೂರ್ತಿ ಫಣೀಂದ್ರ ಈ ಸಂಬಂಧ ಒಂದು ವಾರದಲ್ಲಿ ವರದಿ ನೀಡಬೇಕು ಎಂದು ಆ.14ಕ್ಕೆ ವಿಚಾರಣೆ ಮುಂದೂಡಿದರು.


ನಿಮ್ಮ ಡ್ರಾಮಾ ನನಗೆ ಗೊತ್ತು– ಮೇಟಗಳ್ಳಿಯಲ್ಲಿ ನಾವು ಆರಂಭಿಸಿದ ಶ್ರೀಜಿ ಎಲೆಕ್ಟ್ರಾನಿಕ್ಸ್ ಮುಚ್ಚಿದ್ದೇವೆ. ವಿದ್ಯುತ್ ಸಂಪರ್ಕ ಪಡೆಯಲು ಚೆಸ್ಕಾಂನಲ್ಲಿ ಇಟ್ಟಿದ್ದ ಡೆಪಾಸಿಟ್ ಹಣವನ್ನು ಚೆಸ್ಕಾಂನವರು ನೀಡುತ್ತಿಲ್ಲ ಎಂದು ಮೆಹುಲ್ ಪಟೇಲ್ ದೂರಿದರು. ಡೆಪಾಸಿಟ್ ವಾಪಸು ಪಡೆಯುವಂತೆ ಅಂಚೆ ಪತ್ರ ಕಳುಹಿಸಿದ್ದೆವು. ಅಲ್ಲಿದ್ದ ಸೆಕ್ಯೂರಿಟಿಯಿಂದ ಸಹಿ ಕೂಡ ಪಡೆದಿದ್ದೇವೆ ಎಂದು ಚೆಸ್ಕಾಂ ಅಧಿಕಾರಿಗಳು ದಾಖಲೆ ತೋರಿಸಿದರು.

ದಾಖಲಾತಿಯಲ್ಲಿ ಇರುವಂತೆ ಸೆಕ್ಯೂರಿಟಿ ಒಬ್ಬರಿಂದ ಸಹಿ ಪಡೆದಿದ್ದೀರಾ. ನಿಮ್ಮ ಡ್ರಾಮಾ ನನಗೆ ಗೊತ್ತಿದೆ. ನನ್ನ ಬಳಿ ಹೆಚ್ಚು ಬುದ್ಧಿವಂತಿಕೆ ತೋರಿಸಬೇಡಿ. ಕೂಡಲೇ ಅವರಿಗೆ ಡೆಪಾಸಿಟ್ ಹಣ ವಾಪಸ್ ನೀಡಿ ಎಂದು ಸೂಚನೆ ನೀಡಿದರು.

ಮತ್ತೆ ಇಂತಹ ತಪ್ಪು ಆಗಬಾರದು– ಮೈಸೂರಿನ ಬಾಲಮಂದಿರಕ್ಕೆ ಭೇಟಿ ನೀಡಿದ್ದ ವೇಳೆ ಅಲ್ಲಿನ ಅವ್ಯವಸ್ಥೆ ನೋಡಿ ಲೋಕಾಯುಕ್ತರು ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿದ್ದರು. ಈ ಸಂಬಂಧ ಬಾಲಕರ ಹಾಗೂ ಬಾಲಕಿಯರ ಬಾಲಮಂದಿರದ ಅಧಿಕಾರಿಗಳು ಹಾಜರಾಗಿ ಅವ್ಯವಸ್ಥೆ ಸರಿಪಡಿಸಲಾಗಿದೆ ಎಂದು ವಿವರಣೆ ನೀಡಿದರು. ಮುಂದೆ ಈ ರೀತಿ ಆದರೆ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ನ್ಯಾಯಮೂರ್ತಿ ಫಣೀಂದ್ರ ಎಚ್ಚರಿಸಿದರು.

ಜನರನ್ನು ಅಲೆದಾಡಿಸಿದರೆ ಹುಷಾರ್– ಯಾವುದೇ ಕೆಲಸವನ್ನು ವಿಳಂಬ ಮಾಡದೆ ಬೇಗ ಮಾಡಿಕೊಡಬಹುದು. ಆದರೂ ಜನರನ್ನು ಏಕೆ ಅಲೆದಾಡಿಸುತ್ತೀರಾ ಎಂದು ಎಲ್ಲಾ ಅಧಿಕಾರಿಗಳ ತೀವ್ರ ತರಾಟೆಗೆ ತೆಗೆದುಕೊಂಡ ನ್ಯಾಯಮೂರ್ತಿ ಫಣೀಂದ್ರ, ತಪ್ಪು ಮಾಡಿದ್ದರೆ ಒಪ್ಪಿಕೊಳ್ಳಿ, ಅದು ಬಿಟ್ಟು ವಿತಂಡವಾದ ಮಾಡಬೇಡಿ ಎಂದು ಎಚ್ಚರಿಸಿದರು.

ಲೋಕಾಯುಕ್ತ ಜಂಟಿ ನಿಬಂಧಕ (ವಿಚಾರಣೆ) ವಿ.ಎನ್.ವಿಮಲಾ, ಲೋಕಾಯುಕ್ತ ಕಾರ್ಯದರ್ಶಿ ಕಿರಣ್ ಪಾಟೀಲ್, ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅಮರನಾಥ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಜಿಪಂ ಸಿಇಓ ಯುಕೇಶ್‌ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ, ಮೈಸೂರು ಲೋಕಾಯುಕ್ತ ಎಸ್ಪಿ ಟಿ.ಜೆ. ಉದೇಶ್ ಸಭೆಯಲ್ಲಿ ಹಾಜರಿದ್ದರು.



ಮೈಸೂರಿನ ನಂಜನಗೂಡಿನಲ್ಲಿ ಘನ ತ್ಯಾಜ್ಯ ಸಂಸ್ಕರಣ ಘಟಕ ನಿರ್ಮಾಣ ಮಾಡುವಾಗ ಒತ್ತುವರಿ ಮಾಡಿಕೊಂಡಿದ್ದ ಭೂಮಿಗೆ ಪರಿಹಾರವಾಗಿ ನೀಡಿರುವ 1.60 ಕೋಟಿ ರೂಪಾಯಿಗಳ ಚೆಕ್ ಅನ್ನು ಉಪ ಲೋಕಾಯುಕ್ತ ನ್ಯಾ.ಎನ್.ಕೆ.ಫಣೀಂದ್ರ ಅವರು ಭೂಮಿ ಮಾಲೀಕ ಪುಟ್ಟಮಾದಯ್ಯ ಅವರಿಗೆ ಶನಿವಾರ ಹಸ್ತಾಂತರಿಸಿದರು.

ನಿವೃತ್ತಿ ವೇತನ ಮಂಜೂರು

ಅರಣ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದ ವೆಂಕಟೇಶ್ ಎಂಬುವರಿಗೆ ನಿವೃತ್ತಿ ವೇತನ ನೀಡದೆ ಅಲೆದಾಡಿಸುತ್ತಿದ್ದರು. ಈ ಸಂಬಂಧ ವೆಂಕಟೇಶ್ ಅವರು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಇದರ ಗಂಭೀರತೆ ಅರಿತ ಅರಣ್ಯ ಇಲಾಖೆ ಅಧಿಕಾರಿಗಳು ನಿವೃತ್ತಿ ವೇತನ ನೀಡುವ ಆದೇಶ ನೀಡಿದ್ದರು. ಈ ವೇಳೆ ಗೈರಾಗಿದ್ದ ವೆಂಕಟೇಶ್ ಅವರಿಗೆ ಫೋನ್ ಮಾಡಿದ ನ್ಯಾಯಮೂರ್ತಿಗಳು, ನಿಮ್ಮ ಸಮಸ್ಯೆ ಪರಿಹಾರವಾಗಿದೆ ಎಂದು ತಿಳಿಸಿದರು.

ಮೈಸೂರಲ್ಲಿ ಮುಂಬೈ ಪೊಲೀಸರು ಡ್ರಗ್ಸ್ ಜಾಲ ಬಯಲು ಮಾಡಿದರೆ, ಸ್ಥಳೀಯ ಪೊಲೀಸರು ಏನು ಮಾಡುತ್ತಿದ್ದರು...!!

ರಾಜ್ಯ ಬಿಜೆಪಿ ವಕ್ತಾರ ಮಹೇಶ್ ಪ್ರಶ್ನೆ

ಮೈಸೂರು, ಆ.2(ಬಿಎಲ್‌ಯು)– ಮೈಸೂರಲ್ಲಿ ಡ್ರಗ್ಸ್ ತಯಾರು ಮಾಡುವುದನ್ನು ಮುಂಬೈ ಪೊಲೀಸರು ಬಂದು ಪತ್ತೆ ಹಚ್ಚಿದ್ದಾರೆ. ಹಾಗಾದರೆ ಮೈಸೂರು ಪೊಲೀಸರು ಏನು ಮಾಡುತ್ತಿದ್ದರು ಎಂದು ಬಿಜೆಪಿ ರಾಜ್ಯ ವಕ್ತಾರ ಎಂ.ಜಿ. ಮಹೇಶ್ ಪ್ರಶ್ನಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ ನಡೆಯುತ್ತಿದ್ದ ಡ್ರಗ್ಸ್ ಜಾಲ ಭೇದಿಸಲು ಮುಂಬೈ ಪೊಲೀಸರು ಬರಬೇಕಾಯಿತು. ಇದನ್ನು ತಿಳಿಯದ ನಮ್ಮ ಮೈಸೂರು ಪೊಲೀಸರು ಏನು ಮಾಡುತ್ತಿದ್ದರು ಎಂದು ಮರು ಪ್ರಶ್ನಿಸಿದರು.

ಇತ್ತೀಚೆಗೆ ಎನ್.ಆರ್. ಕ್ಷೇತ್ರದಲ್ಲಿ ಡ್ರಗ್ಸ್ ತಯಾರಿಕೆ ಪತ್ತೆಯಾಗಿದೆ. ಈ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಇದರ ನೈತಿಕ ಹೊಣೆ ಹೊರಬೇಕು. ಈ ಬಗ್ಗೆ ಕೇವಲ ಕಳವಳ ವ್ಯಕ್ತಪಡಿಸಿದರೆ ಯಾವ ಪ್ರಯೋಜನವಿಲ್ಲ ಎಂದು ಅಭಿಪ್ರಾಯಪಟ್ಟರು.



ಜೈಲುಗಳಲ್ಲಿ ನಡೆಯುವ ಬಹಳಷ್ಟು ಅಕ್ರಮಗಳನ್ನು ಎನ್‌ಐಎನವರು ಪತ್ತೆ ಮಾಡಿದ್ದಾರೆ. ಈ ಕಾರ್ಯ ರಾಜ್ಯದ ಪೊಲೀಸರಿಗೆ ಆಗದಿರುವುದು ನಾಚಿಕೆಗೇಡಿನ ಸಂಗತಿ ಎಂದರು.

ರಾಜ್ಯದಲ್ಲಿ ನಡೆಯುವ ಗಂಭೀರ ಅಪರಾಧಗಳನ್ನು ಪತ್ತೆ ಮಾಡಲು ರಾಜ್ಯದ ಪೊಲೀಸರಿಗೆ ಸಾಧ್ಯವಾಗುತ್ತಿಲ್ಲ. ಇಷ್ಟೆಲ್ಲಾ ನಡೆದರೂ ಗೃಹ ಇಲಾಖೆ ಏನು ಮಾಡುತ್ತಿದೆ, ಗೃಹ ಸಚಿವರು ಯಾವ ಕ್ರಮ ಕೈಗೊಂಡಿದ್ದಾರೆ ಎಂದು ಪ್ರಶ್ನಿಸಿದರು. ಬಿಜೆಪಿ ಮಾಧ್ಯಮ ಸಂಚಾಲಕ ಮಹೇಶ್‌ರಾಜೇ ಅರಸ್, ಜಿಲ್ಲಾ ವಕ್ತಾರ ದಯಾನಂದ ಪಟೇಲ್, ಮಾಧ್ಯಮ ಸಹ ಸಂಚಾಲಕ ಸಂತೋಷ್‌ಕುಮಾರ್ ಗೋಷ್ಠಿಯಲ್ಲಿದ್ದರು.

ಕಾಂಗ್ರೆಸ್ ಗೆದ್ದಾಗ ಆಗದ ಚುನಾವಣಾ ಅಕ್ರಮ, ಬಿಜೆಪಿ ಗೆದ್ದಾಗ ಆಗುತ್ತದೆಯೇ...!

ದೇಶದಲ್ಲಿ ಮತ ಕಳ್ಳತನ ನಡೆಯುತ್ತಿದೆ ಎಂದು ರಾಹುಲ್ ಗಾಂಧಿ ಆರೋಪ ಮಾಡುತ್ತಿದ್ದಾರೆ. ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಾಗ ಯಾವುದೇ ಅಕ್ರಮ ಇರುವುದಿಲ್ಲ. ಅದೇ ಬಿಜೆಪಿ ಗೆದ್ದರೆ ಅಕ್ರಮ ನಡೆಯುತ್ತದೆಯೇ ಎಂದು ಮಹೇಶ್ ಪ್ರಶ್ನಿಸಿದರು. ಇವಿಎಂ ಪರಿಚಯ ಮಾಡುವ ಮುನ್ನ ಯಾವ ರೀತಿ ಚುನಾವಣೆ ನಡೆಯುತ್ತಿತ್ತು ಎಂದು ಎಲ್ಲರಿಗೂ ಗೊತ್ತಿದೆ. ಇವಿಎಂ ಮೂಲಕ ನಡೆಯುವ ಮತದಾನದಿಂದ ಅಕ್ರಮಕ್ಕೆ ಕಡಿವಾಣ ಬಿದ್ದಿದೆ. ಭಾರತದ ಚುನಾವಣೆ ವ್ಯವಸ್ಥೆ ಬಗ್ಗೆ ವಿಶ್ವದ ಹಲವು ರಾಷ್ಟ್ರಗಳು ಪ್ರಶಂಸೆ ವ್ಯಕ್ತಪಡಿಸಿದರೆ, ಕಾಂಗ್ರೆಸ್ ನಾಯಕರು ಚುನಾವಣಾ ಆಯೋಗದ ಬಗ್ಗೆ ಅಪನಂಬಿಕೆ ವ್ಯಕ್ತಪಡಿಸುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೇಶದಲ್ಲಿ ಮೊದಲು ಚುನಾವಣಾ ಅಕ್ರಮ ನಡೆಸಿದ್ದೇ ಹಿಂದಿನ ಪ್ರಧಾನಿ ಇಂದಿರಾ ಗಾಂಧಿ. ಈ ಸಂಬಂಧ ಅಲಹಾಬಾದ್ ಹೈಕೋರ್ಟ್ ಇಂದಿರಾ ಗಾಂಧಿ ಅವರಿಗೆ ಛೀಮಾರಿ ಹಾಕಿತ್ತು. ಈ ಹಿನ್ನೆಲೆಯಲ್ಲಿ ತಮ್ಮ ಪೂರ್ವಜರ ಚುನಾವಣಾ ಅಕ್ರಮವನ್ನು ರಾಹುಲ್ ಗಾಂಧಿ ಮೊದಲು ತಿಳಿಯಲಿ ಎಂದು ಸಲಹೆ ನೀಡಿದರು. ಮತಗಳ್ಳತನದ ಆರೋಪ ಮಾಡಿ ರಾಹುಲ್ ಗಾಂಧಿ, ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಿಟ್ಟುಕೊಂಡು ಇಂತಹ ಸಂವಿಧಾನ ವಿರೋಧಿ ನಡೆಗೆ ಮುಂದಾಗಿದ್ದಾರೆ ಎಂದು ದೂರಿದರು.

ಲೋಕಾಯುಕ್ತ ಕಚೇರಿಗಳಲ್ಲಿ ದಾಖಲಾಗುವ ದೂರುಗಳ ಆಯಾಯ ಜಿಲ್ಲೆಯ ಡಿಸಿ, ಸಿಇಓ ತಿಂಗಳಿಗೊಮ್ಮೆ ವಿಲೇವಾರಿ ಮಾಡಬೇಕು

ಉಪಲೋಕಾಯುಕ್ತ ನ್ಯಾ.ಫಣೀಂದ್ರ ಸೂಚನೆ



ಮೈಸೂರಿನ ಜಿಪಂನ ಸಭಾಂಗಣದಲ್ಲಿ ಶನಿವಾರ ಉಪ ಲೋಕಾಯುಕ್ತ ನ್ಯಾಯಮೂರ್ತಿ ಫಣೀಂದ್ರ ಮಾತನಾಡಿದರು.

ಮೈಸೂರು,ಆ.2(ಎಸ್‌ಪಿಎನ್)–ಲೋಕಾಯುಕ್ತ ಕಚೇರಿಯಲ್ಲಿ ದಾಖಲಾಗುವ ಪ್ರಕರಣಗಳ ಬಗ್ಗೆ ಆಯಾಯ ಜಿಲ್ಲೆಗಳ ಜಿಲ್ಲಾಧಿಕಾರಿ ಮತ್ತು ಜಿ.ಪಂ ಸಿಇಓ ನೇತೃತ್ವದಲ್ಲಿ ತಿಂಗಳಿಗೊಮ್ಮೆ ಸಭೆ ನಡೆಸಿ ಜಿಲ್ಲಾ ಹಂತದ ದೂರರ್ಜಿಗಳನ್ನು ಬೇಗ ವಿಲೇವಾರಿ ಮಾಡಬೇಕು ಎಂದು ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಸೂಚನೆ ನೀಡಿದರು.

ಮೈಸೂರಿನ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಶನಿವಾರ ನಡೆದ ಲೋಕಾಯುಕ್ತದಲ್ಲಿ ದಾಖಲಾಗಿದ್ದ ಪ್ರಕರಣಗಳ ವಿಚಾರಣೆ ಪೂರ್ಣಗೊಂಡ ನಂತರ ಅಧಿಕಾರಿಗಳಿಗೆ ಸಲಹೆ ನೀಡಿದ ಅವರು, ತಾಲೂಕು ಮತ್ತು ಜಿಲ್ಲಾ ಹಂತದಲ್ಲಿ ಸಾರ್ವಜನಿಕ ಸಮಸ್ಯೆಗಳಿಗೆ ಬೇಗ ಸ್ಪಂದಿಸಿ, ಆ ಅರ್ಜಿಗಳ ಸಮಸ್ಯೆಗಳ ಸಾಧಕ–ಬಾಧಕಗಳ ಬಗ್ಗೆ ದೂರುದಾರನಿಗೆ ತಿಳಿಸಿದರೆ, ಲೋಕಾಯುಕ್ತ ಕಚೇರಿಗೆ ಅಲೆದಾಟ ತಪ್ಪಲಿದೆ ಎಂದು ಸಲಹೆ ನೀಡಿದರು.

ಲೋಕಾಯುಕ್ತ ಕಚೇರಿಯಲ್ಲಿ ದಾಖಲಾಗುವ ಪ್ರಕರಣಗಳ ಬಗ್ಗೆ ಜಿಲ್ಲಾ ಮತ್ತು ತಾಲೂಕು ಹಂತದ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ, ತಿಂಗಳಿಗೊಮ್ಮೆ ಸಭೆ ನಡೆಸಿ, ಸಮಸ್ಯೆ ಬಗೆಹರಿಸಿದರೆ, ಯಾವುದೇ ಸಮಸ್ಯೆ ಇರುವುದಿಲ್ಲ. ಇಲ್ಲವಾದರೆ, ನಿಮಗೆ ಸರ್ಕಾರದಿಂದ ಸಿಗಬೇಕಾದ ವೇತನ ಬಡ್ತಿ, ವಾರ್ಷಿಕ ಇಂಕ್ರಿಮೆಂಟ್‌ಗಳ ಪಡೆಯಲು ಸಾಧ್ಯವಿಲ್ಲ. ಲೋಕಾಯುಕ್ತದಲ್ಲಿ ಒಮ್ಮೆ ಅಧಿಕಾರಿ, ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಾದರೆ, ನಿಮಗೆ ಸಿಗಬೇಕಾದ ಎಲ್ಲಾ ಸವಲತ್ತುಗಳನ್ನು ನಿಲ್ಲಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂದು ಎಚ್ಚರಿಸಿದರು.

ಲೋಕಾಯುಕ್ತದಲ್ಲಿ ದಾಖಲಾಗುವ ಪ್ರಕರಣಗಳ ಬಗ್ಗೆ ತಾಲೂಕುವಾರು ಪಟ್ಟಿಮಾಡಿ, ತಿಂಗಳಿಗೊಮ್ಮೆ ಜಿಲ್ಲಾಧಿಕಾರಿ ಮತ್ತು ಜಿಪಂ ಸಿಇಓ ನೇತೃತ್ವದಲ್ಲಿ ಒಂದೊಂದು ತಾಲೂಕಿನಲ್ಲಿ ಸಭೆ ನಡೆಸಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಹಿರಿಯ ಅಧಿಕಾರಿಗಳ ಮಾರ್ಗದರ್ಶನ ಪಡೆಯುವಂತೆ ತಾಕೀತು ಮಾಡಿದರಲ್ಲದೆ, ಸರ್ಕಾರಿ ಅಧಿಕಾರಿಗಳು ಗ್ರಾಮೀಣ ಜನರ ಕಷ್ಟಗಳನ್ನು ಅರ್ಥಮಾಡಿಕೊಂಡು ಅವರ ಸಮಸ್ಯೆಗಳನ್ನು ಬಗೆಹರಿಸಬೇಕು. ಇಲ್ಲವಾದಲ್ಲಿ ಈ ವ್ಯವಸ್ಥೆ ವಿರುದ್ಧ ಜನರು ಬೇಸರ ಹೊಂದುತ್ತಾರೆ ಎಂದು ಸಲಹೆ ನೀಡಿದರು.

ಮೈಸೂರು ಜಿಲ್ಲೆಯಲ್ಲಿ 335 ಪ್ರಕರಣಗಳು ದಾಖಲಾಗಿ, ವಿಚಾರಣೆ ಹಂತದಲ್ಲಿದ್ದವು. ಕಳೆದ ಮೂರು ದಿನಗಳಿಂದ ಅಧಿಕಾರಿಗಳು, ದೂರುದಾರರು ಸಮಕ್ಷಮದಲ್ಲಿ ವಿಚಾರಣೆ ನಡೆಸಿ, 135 ಪ್ರಕರಣಗಳಿಗೆ ಮುಕ್ತಿ ನೀಡಲಾಗಿದೆ. ಕನಿಷ್ಠ 400ಕ್ಕೂ ಹೆಚ್ಚು ಅಧಿಕಾರಿ, ಸಿಬ್ಬಂದಿಗಳಿಗೆ ಈ ಪ್ರಕರಣಗಳಿಂದ ಮುಕ್ತಿ ದೊರಕಿದೆ. ಇನ್ನು ಕೆಲವು ಪ್ರಕರಣಗಳು ಮುಂದಿನ ದಿನಾಂಕಕ್ಕೆ ಮುಂದೂಡಲಾಗಿದೆ. ಕಳೆದ 3 ದಿನಗಳಿಂದ ಜಿಲ್ಲೆ ಎಲ್ಲಾ ಅಧಿಕಾರಿಗಳು ಉತ್ತಮ ಸಹಕಾರ ನೀಡಿದ್ದಕ್ಕೆ ಧನ್ಯವಾದ ಅರ್ಪಿಸಿದರು.

ಇದಕ್ಕೂ ಮುನ್ನ ಮೈಸೂರು ಜಿಲ್ಲೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರವರ ಕಚೇರಿಯಿಂದ ನೀಡಲಾಗಿರುವ ಜೆಜೆಎಂನ ಟೆಂಡರ್ ಪ್ರಕ್ರಿಯೆ ಕಾಮಗಾರಿ ಅಕ್ರಮದಿಂದ ಕೂಡಿದೆ ಎಂದು ದೂರದಾರ ಮಂಜುನಾಥ ಪ್ರಸನ್ನ ಆರೋಪಿಸಿ, ಲೋಕಾಯುಕ್ತದಲ್ಲಿ ಪ್ರಕರಣ ದಾಖಲಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಉಪ ಲೋಕಾಯುಕ್ತ ನ್ಯಾ.ಕೆ.ಎನ್.ಫಣೀಂದ್ರ, ನೀವು ಅಧಿಕಾರಿಗಳು ಸುಖಾಸುಮ್ಮನೆ ಆರೋಪ ಮಾಡಿದ ಮೇಲೆ ದಾಖಲಾತಿ ಸಮೇತ ಸಾಬೀತುಪಡಿಸಬೇಕು. ಇಲ್ಲವಾದಲ್ಲಿ ನಿಮ್ಮ ವಿರುದ್ಧವೇ ಸುಳ್ಳು ಆರೋಪದಡಿ ಪ್ರಕರಣ ದಾಖಲಿಸಲು ಸೂಚಿಸುತ್ತೇನೆ ಎಂದು ದೂರುದಾರರಿಗೆ ತಾಕೀತು ಮಾಡಿದರು.

ಈ ಪ್ರಕರಣದಲ್ಲಿ ಅಧಿಕಾರಿಗಳು, ದೂರುದಾರರಿಗೆ ಬೇಕಾದ ಮಾಹಿತಿಯನ್ನು ನೀಡಲು ಕಾನೂನಿನಲ್ಲಿ ಅವಕಾಶ ನೀಡಲೇಬೇಕು. ಸಬೂಬು ಹೇಳಿ ತಪ್ಪಿಸಿಕೊಳ್ಳುವಂತಿಲ್ಲ. ಕುಡಿಯುವ ನೀರು, ನೈರ್ಮಲ್ಯ ಕಾಪಾಡುವ ನಿಟ್ಟಿನಲ್ಲಿ ಇಂತಹ ದೂರುಗಳನ್ನು ಗಂಭೀರವಾಗಿ ಪರಿಗಣಿಸಿ, ಇಲ್ಲವೇ ತನಿಖೆ ಎದುರಿಸಲು ಸಿದ್ಧರಾಗಿ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಹಿನಕಲ್, ಕಡಕೊಳ, ಹೂಟಗಳ್ಳಿ ಸೇರಿದಂತೆ ಈ ವ್ಯಾಪ್ತಿಯಲ್ಲಿ 9ಕ್ಕೂ ಹೆಚ್ಚು ಪ್ರಕರಣಗಳು ವಿಚಾರಣೆ ನಡೆಸಿ, ಕೆಲವು ಪ್ರಕರಣಗಳನ್ನು ಮುಕ್ತಾಯಗೊಳಿಸಿದರೆ, ಇನ್ನು ಕೆಲವು ಪ್ರಕರಣಗಳಿಗೆ ಮತ್ತೊಂದು ದಿನಾಂಕ ನೀಡಿ, ವಿಚಾರಣೆ ಮುಂದೂಡಿದರು.

ಆ.17ಕ್ಕೆ ವಿಶ್ವಕರ್ಮ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ


ಮೈಸೂರು,ಆ.2(ಎಂಟಿವೈ)– ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಆ.17ರಂದು ಬೆಳಗ್ಗೆ 10ಕ್ಕೆ ವಿಶ್ವಕರ್ಮ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಣಾ ಸಮಾರಂಭ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಅಧ್ಯಕ್ಷ ಕೆ. ಕೆಂಡಗಣ್ಣ ವಿಶ್ವಕರ್ಮ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವಕರ್ಮ ಸಮುದಾಯದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ 125 ವಿದ್ಯಾರ್ಥಿಗಳನ್ನು ಪ್ರತಿಭಾ ಪುರಸ್ಕಾರ ನೀಡಲು ಆಯ್ಕೆ ಮಾಡಲಾಗಿದ್ದು, ವಿದ್ಯಾರ್ಥಿಗಳಿಗೆ ತಲಾ ಒಂದು ಸಾವಿರ ರೂ. ನಗದು, ಫಲಕ ನೀಡಿ ಪುರಸ್ಕರಿಸಲಾಗುತ್ತಿದೆ. ಅರೆಮಾದನಹಳ್ಳಿ ಮಠದ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಮಾಜಿ ಸದಸ್ಯ ಜಿ.ರಘು ಆಚಾರ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ತನ್ವೀರ್ ಸೇಠ್, ವಿಶ್ವಕರ್ಮ ನಿಗಮ ಮಂಡಳಿ ಅಧ್ಯಕ್ಷ ಎನ್.ನಂದಕುಮಾರ್ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಕಾರ್ಯಕ್ರಮದ ಅಂಗವಾಗಿ ಸಮುದಾಯಕ್ಕೆ ಸೇರಿದ 1ನೇ ತರಗತಿಯಿಂದ ಪಿಯುಸಿವರೆಗಿನ ವಿದ್ಯಾರ್ಥಿಗಳಿಗೆ ಪ್ರತ್ಯೇಕ ವಿಭಾಗದಲ್ಲಿ ಚಿತ್ರಕಲಾ ಸ್ಪರ್ಧೆ ಆಯೋಜಿಸಿದ್ದು, ಆಸಕ್ತರು ಆಗಸ್ಟ್ 10ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮೊ. ಸಂಖ್ಯೆ 91088 14433, 8618213190 ಸಂಪರ್ಕಿಸುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಪದಾಧಿಕಾರಿಗಳಾದ ಸಿದ್ದರಾಜು, ಮಹಾಂತೇಶ್, ಶಂಕರ್, ಕೃಷ್ಣಮೂರ್ತಿ ಇದ್ದರು.

ಅಭಿನಂದನೆ...



ಮೈಸೂರಿನ ವಿಜಯನಗರ 3ನೇ ಹಂತ ವಾಕಿಂಗ್ ಬಳಗದ ವತಿಯಿಂದ ದಿ ಹೆರಿಟೇಜ್ ಕ್ಲಬ್‌ನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಡಾ.ಎಸ್.ಮರೀಗೌಡ ಅವರನ್ನು ಸನ್ಮಾನಿಸಲಾಯಿತು. ಪ್ರೊ. ದೇವರಾಜ್, ಪ್ರೊ.ಚೆನ್ನು, ಪ್ರೊ.ಅಣ್ಣೇಗೌಡ, ಡಾ.ಮಾಕುಟೇಶ್ವರ್, ಪ್ರೊ.ವಿಶ್ವನಾಥ್, ಪ್ರೊ.ಚಂದ್ರಕುಮಾರ್, ಪ್ರೊ.ವಸಂತ, ಪ್ರೊ.ರಂಗಸ್ವಾಮಿ, ಪ್ರೊ.ನಾಗರಾಜ, ಪ್ರೊ.ಜಯರಾಮ ಮತ್ತು ಪ್ರೊ.ರಾಜಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಆ.5ಕ್ಕೆ ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ 3ನೇ ವಾರ್ಷಿಕೋತ್ಸವ

ಮೈಸೂರು,ಆ.2(ಎಂಟಿವೈ)– ಮೈಸೂರಿನ ಕೆ.ಆರ್.ಎಸ್ ರಸ್ತೆಯಲ್ಲಿರುವ ಜಯದೇವ ಹೃದ್ರೋಗ ಆಸ್ಪತ್ರೆ ಮುಂಭಾಗವಿರುವ ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ಜಿಲ್ಲಾ ಘಟಕದ 3ನೇ ವಾರ್ಷಿಕೋತ್ಸವ ಕಾರ್ಯಕ್ರಮ ಆ.5ರಂದು ಬೆಳಗ್ಗೆ 11ಕ್ಕೆ ಆಯೋಜಿಸಲಾಗಿದೆ ಎಂದು ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ರಾಜ್ಯಾಧ್ಯಕ್ಷ ಎನ್.ಜಿ. ಸಂತೋಷ್‌ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಯದೇವ ಆಸ್ಪತ್ರೆ ಮುಂಭಾಗ ಆಯೋಜಿಸಿರುವ ಚಾಲಕರ ಸಮಾವೇಶದ ಅಧ್ಯಕ್ಷತೆಯನ್ನು ಶಾಸಕ ಕೆ. ಹರೀಶ್‌ಗೌಡ ವಹಿಸಲಿದ್ದಾರೆ. ಶಾಸಕ ಜಿ.ಟಿ.ದೇವೇಗೌಡ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ನಟ ಧ್ರುವ ಸರ್ಜಾ ಲಾಂಛನ ಬಿಡುಗಡೆ ಮಾಡಲಿದ್ದಾರೆ. ಕಾಂಗ್ರೆಸ್ ಮುಖಂಡ, ನಿರ್ಮಾಪಕ ಉಮಾಪತಿ ಶ್ರೀನಿವಾಸ್‌ಗೌಡ, ಗೋವು ರಕ್ಷಕ ಮಹೇಂದ್ರ ಮುಣೋತ್, ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ಜಿಲ್ಲಾಧ್ಯಕ್ಷ ಕೆ.ವಿ.ಚೇತನ್ ಇನ್ನಿತರರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ಈ ವೇಳೆ 200ಕ್ಕೂ ಹೆಚ್ಚು ಚಾಲಕರಿಗೆ ಸಮವಸ್ತ್ರ ಹಾಗೂ ಚಾಲಕರ ಮಕ್ಕಳಿಗೆ ಲೇಖನ ಸಾಮಗ್ರಿ ವಿತರಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸ್ನೇಹಜೀವಿ ಚಾಲಕರ ಟ್ರೇಡ್ ಯೂನಿಯನ್ ಪದಾಧಿಕಾರಿಗಳಾದ ರಾಜು ಕನ್ನಡಿಗ, ಆರ್. ಯಶೋಧ, ಸೋಮಶೇಖರ್ ಇದ್ದರು.

ಎಸ್‌ಸಿ, ಎಸ್‌ಟಿ ಯೋಜನೆಯಡಿ ವಿದ್ಯಾರ್ಥಿಗಳಿಗೆ ಕಲಾ ತರಬೇತಿ ಶಿಬಿರಕ್ಕೆ ಚಾಲನೆ

ಮೈಸೂರು,ಆ.2(ಎಂಟಿವೈ)– ರಾಜ್ಯ ಸರ್ಕಾರ ಎಲ್ಲಾ ಸಮುದಾಯಗಳ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯಡಿ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಕಲಾ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸರ್ಕಾರವು ಎಲ್ಲಾ ಸಮುದಾಯಗಳ ಅಭಿವೃದ್ಧಿಗೆ ವಿವಿಧ ಯೋಜನೆಗಳನ್ನು ರೂಪಿಸಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಹೆಚ್ಚಿನ ರೀತಿಯ ಅನುದಾನವನ್ನು ಬಿಡುಗಡೆ ಮಾಡಿದ್ದು, ಸರ್ಕಾರದ ಅಧೀನದಲ್ಲಿರುವ 35ಕ್ಕೂ ಹೆಚ್ಚಿನ ಇಲಾಖೆಗಳ ಮೂಲಕ ವಿವಿಧ ಯೋಜನೆಗಳನ್ನು ಆಯೋಜಿಸಿ ಪ್ರೋತ್ಸಾಹವನ್ನು ನೀಡುತ್ತಿದೆ. ಸಮಾಜ ಕಲ್ಯಾಣ ಇಲಾಖೆ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಜೊತೆಗೂಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯಡಿ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ವಿವಿಧ ಕಲಾ ಪ್ರಕಾರಗಳನ್ನು ಪರಿಚಯವನ್ನು ಮಾಡುವ ಉದ್ದೇಶದಿಂದ ಸುಗಮ ಸಂಗೀತ, ಜಾನಪದ ಸಂಗೀತ, ಶಾಸ್ತ್ರೀಯ ಸಂಗೀತ, ನೃತ್ಯ ಸೇರಿದಂತೆ ಇನ್ನಿತರ ಕಲೆಗಳನ್ನು ಕಲಿಸುವ ನಿಟ್ಟಿನಲ್ಲಿ ಕಲಾ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ವಿದ್ಯಾರ್ಥಿ ನಿಲಯಗಳಲ್ಲಿರುವ ವಿದ್ಯಾರ್ಥಿಗಳು ಈ ವಿಶಿಷ್ಟ ಕಾರ್ಯಕ್ರಮದ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯಡಿ ವಿದ್ಯಾರ್ಥಿನಿಲಯಗಳ ಕಲಾ ತರಬೇತಿ ಶಿಬಿರಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಅವರು ಮಾತನಾಡಿ, ಇಲಾಖೆಯಿಂದ ವಿವಿಧ ರೀತಿಯ ಯೋಜನೆಗಳನ್ನು ಹೊರತರಲಾಗಿದ್ದು, ಸರ್ಕಾರವು ವಿವಿಧ ಯೋಜನೆಗಳಿಗೆ ವಿಶೇಷ ಅನುದಾನವನ್ನು ನೀಡುತ್ತಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಜಾರಿಯಲ್ಲಿದ್ದ ವಿವಿಧ ಕಾರ್ಯಕ್ರಮಗಳ ಜೊತೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆಯಡಿ ಕಲಾ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಈ ಕಾರ್ಯಕ್ರಮಗಳಿಂದ ಮೊಬೈಲ್ ಬಳಕೆಯಲ್ಲಿ ನಿರತರಾಗಿರುವ ವಿದ್ಯಾರ್ಥಿಗಳನ್ನು ಹೊರತಂದು ಜಾನಪದ ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಅವರಲ್ಲಿ ಬೆಳಕು ಮೂಡಿಸುವುದು ಮೂಲ ಉದ್ದೇಶವಾಗಿದ್ದು, ಮುಂದಿನ ಪೀಳಿಗೆಗೆ ಜಾನಪದ ಸಾಹಿತ್ಯ ಕಲೆಗಳ ಕುರಿತು ತರಬೇತಿ ನೀಡುವ ನಿಟ್ಟಿನಲ್ಲಿ ಪ.ಜಾತಿ, ಪ.ವರ್ಗಗಳ ಉಪಯೋಜನೆಯಡಿ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಈ ಕಲಾತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕನ್ನಡ–ಸಂಸ್ಕೃತಿ ಇಲಾಖೆ ಮೈಸೂರು ವಿಭಾಗ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಯೋಜನಾ ಸಮನ್ವಯಾಧಿಕಾರಿ ಕೆ.ಎಂ. ಮಲ್ಲೇಶ್, ಪ.ವರ್ಗಗಳ ವಿದ್ಯಾರ್ಥಿನಿಲಯದ ನಿಲಯಪಾಲಕ ಸಿ.ಆರ್.ಗುರುಪ್ರಸಾದ್, ಪ.ಜಾತಿ ವಿದ್ಯಾರ್ಥಿನಿಲಯದ ನಿಲಯಪಾಲಕಿ ಸರಸ್ವತಿ, ತರಬೇತುದಾರ ದೇವಾನಂದ ವರಪ್ರಸಾದ್, ನಾರಾಯಣಸ್ವಾಮಿ ಇನ್ನಿತರರು ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಭಾನುವಾರ 3 ಆಗಸ್ಟ್ 2025

ಕೇಂದ್ರದ ಅನುದಾನದೊಂದಿಗೆ ಕೊಡಗು ಜಿಲ್ಲೆಯ ಪ್ರಗತಿಗೆ ಬದ್ಧ

ಕೊಡಗು ವಿಷನ್ ಸಂವಾದದಲ್ಲಿ ಸಂಸದ ಯದುವೀರ್ ಭರವಸೆ


ಯದುವೀರ್

ಮಡಿಕೇರಿ,ಆ.2–ಕೊಡಗು ಕೊಡಗಾಗಿಯೇ ಉಳಿಯಬೇಕೆನ್ನುವುದು ತಮ್ಮ ಆಶಯವಾಗಿದ್ದು, ಇದರಂತೆ ಕೇಂದ್ರದ ಅನುದಾನದೊಂದಿಗೆ ಜಿಲ್ಲೆಯ ಪ್ರಗತಿಗೆ ಬದ್ಧನಿರುವುದಾಗಿ ಸಂಸದರಾದ ಯದುವೀರ್ ಹೇಳಿಕೊಂಡಿದ್ದಾರೆ

ಪತ್ರಕರ್ತರ ಸಂಘದ ವತಿಯಿಂದ ನಗರದ ರೆಡ್ ಬ್ರಿಕ್ಸ್‌ನ ಸತ್ಕಾರ್ ಸಭಾಂಗಣದಲ್ಲಿ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳೊಂದಿಗೆ ಆಯೋಜಿತವಾಗಿದ್ದ ಕೊಡಗು ವಿಷನ್ ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೊಡಗಿನ ವಿಶಿಷ್ಟ ಆತಿಥ್ಯ ಸಂಸ್ಕೃತಿಗಳನ್ನು ತಿಳಿಯಲು ಅವಕಾಶ ಒದಗಿಸುವ 'ಹೋಂ ಸ್ಟೇ'ಗಳು ಸ್ಥಳೀಯ ಆರ್ಥಿಕತೆಗೂ ಸಹಕಾರಿಯಾಗಿದೆ. ಜಿಲ್ಲೆಯಲ್ಲಿ ಮಾತ್ರ ಕಂಡು ಬರುವ 'ಐನ್ ಮನೆ' ಸಂಸ್ಕೃತಿಯನ್ನು ಜತನದಿಂದ ಕಾಯ್ದುಕೊಳ್ಳುವ ಪ್ರಯತ್ನಗಳ ಮೂಲಕ ಕೊಡಗನ್ನು ಮೂಲ ಸ್ವರೂಪದಲ್ಲಿಯೇ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಕಾಳಜಿಯನ್ನು ವಹಿಸಬೇಕಾಗುತ್ತದೆ ಎಂದು ಹೇಳಿದರು.

ಸರ್ಫೇಸಿ ಕಾಯ್ದೆ ಸಂಕಷ್ಟ : ಕಾಫಿಯನ್ನು ಕೃಷಿ ಬದಲಾಗಿ ವಾಣಿಜ್ಯ ಬೆಳೆಯಾಗಿ ಪರಿಗಣಿಸಲಾಗಿದೆ. ಇದರಿಂದ ಸರ್ಫೆಜಿ ಕಾಯ್ದೆ ಕಾಫಿ ಬೆಳೆಗಾರರಿಗೂ ಅನ್ವಯವಾಗುವ ಮೂಲಕ ಸಮಸ್ಯೆಗಳು ಸೃಷ್ಟಿಯಾಗಿದೆ. ಬ್ಯಾಂಕ್‌ಗಳಲ್ಲಿರುವ ಸಾಲದ ಹಿನ್ನೆಲೆ ಬೆಳೆಗಾರರು ತೋಟಗಳನ್ನೇ ಕಳೆದುಕೊಳ್ಳುವ ಸಂದಿಗ್ಧ ಸ್ಥಿತಿ ನಿರ್ಮಾಣವಾಗಿದೆ ಎಂದು ಕೊಡಗು ಪ್ಲಾಂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ನಂದಾ ಬೆಳ್ಯಪ್ಪ ಮತ್ತು ನಿರ್ದೇಶಕ ಕೆ.ಕೆ.ವಿಶ್ವನಾಥ್ ಕಳವಳ ವ್ಯಕ್ತಪಡಿಸಿದರು. ಕಾಫಿಗೆ ಇರುವ ವಾಣಿಜ್ಯ ಹಣೆಪಟ್ಟಿಯಿಂದಾಗಿ ಕಾಫಿ ಬೆಳೆಗಾರರಿಗೆ ಕೃಷಿಕರ ವಿಮಾ ಸೌಲಭ್ಯವೂ ಇಲ್ಲವೆಂದು ಬೆಳೆಗಾರರ ಸಮಸ್ಯೆಗಳನ್ನು ತೆರೆದಿಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಸಂಸದರು, ಕಾಫಿಯನ್ನು ವಾಣಿಜ್ಯ ಕೃಷಿಯಿಂದ ಹೊರತರುವುದು. ರಾಜ್ಯ ಸರ್ಕಾರದಿಂದ ನಡೆಯಬೇಕಾಗಿರುವ ಕೆಲಸ. ಹೀಗಿದ್ದೂ ತಾವು ಲೀಡ್ ಬ್ಯಾಂಕ್ ಸಭೆಗಳಲ್ಲಿ ಸರ್ಫೇಸಿ ಕಾಯ್ದೆ ಬೆಳೆಗಾರರಿಗೆ ಸಂಕಷ್ಟ ಉಂಟುಮಾಡುವ ರೀತಿಯಲ್ಲಿ ದುರ್ಬಳಕೆ ಮಾಡಬಾರದೆಂದು ಸೂಚಿಸಿರುವುದಾಗಿ ತಿಳಿಸಿದರು. ಕಾಫಿ ಬೆಳೆಗಾರರಿಗೆ ವಿಮಾ ಸೌಲಭ್ಯದ ಬಗ್ಗೆ ಮುಂದಿನ ಅಧಿವೇಶನದಲ್ಲಿ ಪ್ರಸ್ತಾಪಿಸುವುದಾಗಿ ಭರವಸೆ ನೀಡಿದರು.

ಭೂ ಸ್ವಾಧೀನ ತೊಡಕು: ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಬಿ.ಆರ್. ನಾಗೇಂದ್ರ ಪ್ರಸಾದ್ ಮಾತನಾಡಿ, ಜಿಲ್ಲೆಯ ಬೆಳೆಗಾರರು ಸೇರಿ ದಂತೆ ಎಲ್ಲರಿಗೂ ಅನುಕೂಲ ಕಲ್ಪಿಸುವ ರೈಲ್ವೆ ಯೋಜನೆ ಇನ್ನೂ ಜಾರಿಯಾಗದಿರುವುದು ವಿಷಾದನೀಯ. ಕಾರ್ಮಿಕರು ಹೆಚ್ಚಾಗಿರುವ ಕೊಡಗು ಜಿಲ್ಲೆಯಲ್ಲಿ ಇಎಸ್‌ಐ ಆಸ್ಪತ್ರೆ ಇಲ್ಲದಿರುವ ವಿಚಾರಗಳನ್ನು ಸಂಸದರ ಗಮನಕ್ಕೆ ತಂದಾಗ ಜಿಲ್ಲೆಗೆ ರೈಲ್ವೆ ಸಂಪರ್ಕ ಒದಗಿಸುವ ಮಾರ್ಗಗಳ ಸರ್ವೆ ಕಾರ್ಯ ಅಂತಿಮಗೊಂಡಿದೆ. ಯೋಜನೆ ಅನುಷ್ಠಾನಕ್ಕೆ ಅಗತ್ಯವಾಗಿ ಭೂಸ್ವಾಧೀನ ಪ್ರಕ್ರಿಯೆ ನಡೆಯಬೇಕು. ಇದಕ್ಕೆ ರಾಜ್ಯ ಸರ್ಕಾರದ ವಿಳಂಬ ಧೋರಣೆಯೇ ರೈಲ್ವೆ ಯೋಜನೆ ವಿಳಂಬವಾಗುವುದಕ್ಕೆ ಕಾರಣವಾಗುತ್ತಿದೆ ಎಂದು ಸಂಸದರು ನುಡಿದರು. ಇದೇ ರೀತಿ ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗಾಗಿ ಕೇಂದ್ರದ ಸಿವಿಲ್ ಏವಿಯೇಷನ್ ಸಚಿವರೊಂದಿಗೆ ಅಗತ್ಯ ಮಾತುಕತೆಗಳನ್ನು ನಡೆಸಲಾಗುತ್ತದೆ. ಸಮೀಕ್ಷೆ ಬಳಿಕ ಇಎಸ್‌ಐ ಆಸ್ಪತ್ರೆ ತೆರೆಯುವ ಬಗ್ಗೆ ಗಮನ ಹರಿಸಲಾಗುತ್ತದೆ ಎಂದೂ ಆಶ್ವಾಸನೆ ನೀಡಿದರು.

ಆಂತರಿಕ ಬಳಕೆಗೆ ಒತ್ತು ನೀಡಿ : ಸಂವಾದ ಕಾರ್ಯಕ್ರಮ ನಿರ್ವಹಿಸಿದ ಹಿರಿಯ ಪತ್ರಕರ್ತ ಜಿ.ಚಿದ್ವಿಲಾಸ್ ಸಲಹೆ ನೀಡಿ ಕೊಡಗಿನಲ್ಲಿ ಬೆಳೆಯುವ ಕಾಫಿಯ ಆಂತರಿಕ ಬಳಕೆಗೆ ಹೆಚ್ಚಿನ ಒತ್ತು ನಿಡಬೇಕು. ಇದಕ್ಕೆ ಪೂರಕವಾಗಿ ಭಾರತೀಯ ಸೈನ್ಯದಲ್ಲಿ ಕಾಫಿ ಬಳಕೆಗೆ ಅವಕಾಶ ಒದಗಿಸಲು ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.

ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್.ಹೆಚ್.ಟಿ ಮಾತನಾಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ಜಿ. ಮೇದಪ್ಪ, ಎಂ.ಪಿ.ಸುನೀಲ್ ಸುಬ್ರಮಣಿ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿಕಾಳಪ್ಪ, ಮಾಜಿ ಅಧ್ಯಕ್ಷ ರಾಬಿನ್ ದೇವಯ್ಯ, ಕಾಫಿ ಮಂಡಳಿ ಸದಸ್ಯ ತಳೂರು ಕಿಶೋರ್ ಕುಮಾರ್, ನಗರಸಭಾ ಸದಸ್ಯ ಉಮೇಶ್ ಸುಬ್ರಹ್ಮಣಿ, ಕವನ್, ಸಬಿತಾ, ಲೀಡ್ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕ ನಾಯಕ್, ಬಿಎಸ್‌ಎನ್‌ಎಲ್ ಅಧಿಕಾರಿ ಪ್ರದೀಪ್, ಕಾಫಿ ಮಂಡಳಿ ಅಧಿಕಾರಿ ಚಂದ್ರಶೇಖರ್, ಮಡಿಕೇರಿ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಸಂತೋಷ್ ಅಣ್ವೇಕರ್, ನಿರ್ದೇಶಕ ಎಂ.ಧನಂಜಯ್ ಪಾಲ್ಗೊಂಡಿದ್ದರು.

ರಾಷ್ಟ್ರೀಯ ಮಹಿಳಾ ಜೂನಿಯರ್ ಹಾಕಿಗೆ ಶ್ರಾವ್ಯ ಆಯ್ಕೆ



ನಾಪೋಕ್ಲು: ಕೊಡಗಿನ ಶ್ರಾವ್ಯ ದೇವಯ್ಯ ರಾಷ್ಟ್ರೀಯ ಮಹಿಳಾ ಜೂನಿಯರ್ ಹಾಕಿ ಕರ್ನಾಟಕ ತಂಡದ ಗೋಲ್ ಕೀಪರಾಗಿ ಆಯ್ಕೆಯಾಗಿದ್ದಾರೆ.

ಆಂಧ್ರ ಪ್ರದೇಶದ ಕಾಕಿನಾಡಲ್ಲಿ ಆ.12ರವರೆಗೆ ನಡೆಯಲಿರುವ ರಾಷ್ಟ್ರೀಯ ಮಹಿಳಾ ಜೂನಿಯರ್ ಕರ್ನಾಟಕ ಹಾಕಿ ತಂಡದ ಗೋಲ್ ಕೀಪರ್ ಆಗಿ ನಾಪೋಕ್ಲು ಸಮೀಪದ ಕಕ್ಕಬೆ ಗ್ರಾಮ ಪಂಚಾಯಿತಿಯ ಕುಂಜಿಲ ಗ್ರಾಮದ ಶ್ರಾವ್ಯ ದೇವಯ್ಯ ಆಯ್ಕೆಯಾಗಿರುವುದು ಕೊಡಗಿಗೆ ಹೆಮ್ಮೆಯ ವಿಷಯವಾಗಿದೆ. ಮುಂಬೈಯ ಎನ್‌ಸಿಓಇ ತಂಡದಲ್ಲಿ ತರಬೇತು ಪಡೆಯುತ್ತಿದ್ದು, ಶ್ರಾವ್ಯ ದೇವಯ್ಯ ಕುಂಜಿಲ ಗ್ರಾಮದ ವಾಟೆಕಾಡು ನಿವಾಸಿ ದೇವಯ್ಯ ಹಾಗೂ ಚಿತ್ರ ದಂಪತಿಯ ಪುತ್ರಿ.

ಕಾರು–ಬೈಕ್ ಡಿಕ್ಕಿ: ಸವಾರ ಸಾವು


ಕಾರ್ತಿಕ್

ಕುಶಾಲನಗರ: ಕಾರು ಮತ್ತು ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಸವಾರ ಇನ್ಫೋಸಿಸ್ ಉದ್ಯೋಗಿ ಸ್ಥಳದಲ್ಲೇ ಅಸುನೀಗಿರುವ ಘಟನೆ ಜರುಗಿದೆ.

ಸಮೀಪದ ಗುಡ್ಡೆಹೊಸೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಆನೆಕಾಡು ಮೀಸಲು ಅರಣ್ಯ ಪ್ರದೇಶದ ರಾಷ್ಟ್ರೀಯ ಹೆದ್ದಾರಿ ರಸ್ತೆಯಲ್ಲಿ ಶನಿವಾರ ಸಂಜೆ ನಡೆದ ಈ ಅಪಘಾತದಲ್ಲಿ ಬೈಕ್ ಸವಾರ ಪೆರಾಜೆಯ ನಿವಾಸಿ ಎ.ಕಾರ್ತಿಕ್ ಭಟ್(30) ಸ್ಥಳದಲ್ಲಿಯೇ ಮೃತಪಟ್ಟ ದುರ್ದೈವಿಯಾಗಿದ್ದಾರೆ.

ಮಡಿಕೇರಿಯಿಂದ ಕುಶಾಲನಗರಕ್ಕೆ ವೇಗವಾಗಿ ಬರುತ್ತಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ಎದುರಿನಿಂದ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಕೊನೆಯುಸಿರೆಳೆದಿದ್ದಾನೆ. ಡಿಕ್ಕಿ ಹೊಡೆದ ಬಳಿಕ ಕಾರು ರಸ್ತೆ ಪಕ್ಕದ ಚರಂಡಿಯನ್ನು ದಾಟಿ ಕಾಡಿನೊಳಗೆ ನುಗ್ಗಿದ್ದು, ಕಾರಿನ ಮುಂಭಾಗಕ್ಕೆ ತೀವ್ರ ಹಾನಿಯಾಗಿದೆ. ಕಾರಿನ ಚಾಲಕ ಮಾದಾಪುರ ನಿವಾಸಿ ಬೋಪಣ್ಣ ಗಾಯಗೊಂಡಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಚಿಕಿತ್ಸೆಗಾಗಿ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಗ್ರಾಮಾಂತರ ಸಂಚಾರಿ ಪೊಲೀಸ್ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಜನಗಣತಿಯಲ್ಲಿ ಜಾತಿ ಎಣಿಕೆ ಕೊಡವರ ಸಮಗ್ರ ಸಬಲೀಕರಣಕ್ಕೆ ನಿರ್ಣಾಯಕ



ಮಡಿಕೇರಿ: ಜನಸಂಖ್ಯಾ ಗಣತಿಯಲ್ಲಿ ಜಾತಿ ಎಣಿಕೆಯೂ ಸೇರಿರುತ್ತದೆ. ಕೊಡವರ ಸಮಗ್ರ ಸಬಲೀಕರಣಕ್ಕೆ ಇದು ನಿರ್ಣಾಯಕವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.

ಕೊಡವ ಸಮುದಾಯ ಮುಂಬರುವ 2026–27ರ ರಾಷ್ಟ್ರೀಯ ಜನಸಂಖ್ಯಾ ಗಣತಿಯಲ್ಲಿ ಪ್ರತ್ಯೇಕ ಸಂಹಿತೆ ಮತ್ತು ಕಾಲಂ ಅನ್ನು ಕೋರಬೇಕೆಂದು ನಗರ ಹೊರ ವಲಯದ ಖಾಸಗಿ ಸಭಾಂಗಣದಲ್ಲಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಆಯೋಜಿಸಿದ್ದ ಕಕ್ಕಡ–18 ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸಮುದಾಯದ ವಿಶಿಷ್ಟ ಸಾಂಸ್ಕೃತಿಕ ಗುರುತನ್ನು ಕಾಪಾಡಿಕೊಳ್ಳಲು ಮತ್ತು ನಿಖರವಾದ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಲು ಕೊಡವ ನ್ಯಾಷನಲ್ ಕೌನ್ಸಿಲ್ ಈ ಪ್ರತ್ಯೇಕ ಮಾನ್ಯತೆಗಾಗಿ ನ್ಯಾಯಯುತವಾಗಿ ಒತ್ತಾಯಿಸುತ್ತಿದೆ ಎಂದು ಹೇಳಿದರು. ಸಿಎನ್‌ಸಿ ಸ್ವಾಯತ್ತತೆ ಮತ್ತು ಎಸ್‌ಟಿ ಟ್ಯಾಗ್‌ಗಾಗಿ ನಿರಂತರವಾಗಿ ಶ್ರಮಿಸುತ್ತಿದೆ ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಆಂದೋಲನ ಮತ್ತು ಜಾನಪದ ಉತ್ಸವಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುತ್ತಿದ್ದು ಇದು ಶ್ಲಾಘನೀಯ ಕೆಲಸವಾಗಿದೆ. ಈ ಕಾರ್ಯಕ್ಕಾಗಿ ಕೊಡವರು ಮತ್ತು ವಿಶ್ವದ ವಿವಿಧ ಭಾಗಗಳಲ್ಲಿ ನೆಲೆ ನಿಂತಿರುವ ಕೊಡವರು ಸಿಎನ್‌ಸಿಗೆ ಸಂಪೂರ್ಣವಾಗಿ ತಮ್ಮ ಬೆಂಬಲವನ್ನು ನೀಡಬೇಕು ಎಂದು ಬಿ.ಕೆ. ಹರಿಪ್ರಸಾದ್ ಮನವಿ ಮಾಡಿದರು.

ಕೊಡವ ನ್ಯಾಷನಲ್ ಕೌನ್ಸಿಲ್ ಅಧ್ಯಕ್ಷ ಎನ್.ಯು.ನಾಚಪ್ಪ ಕೊಡವಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆಯ ಸ್ವಯಂ ಆಡಳಿತ ಕೊಡವರಿಗೆ ನೀಡಬೇಕು, ಕೊಡವರಿಗೆ ಎಸ್‌ಟಿ ಟ್ಯಾಗ್ ಘೋಷಿಸಬೇಕು. ಕೊಡವರ ಸಾಂಪ್ರದಾಯಿಕ ಆವಾಸ ಸ್ಥಾನಗಳನ್ನು ಗುರುತಿಸಿ ರಾಜ್ಯಾಂಗ ಖಾತ್ರಿ ನೀಡಬೇಕು. ಜನಾಂಗದ ಹಕ್ಕುಗಳ ಸಂರಕ್ಷಣೆಗಾಗಿ ವಿಶ್ವ ರಾಷ್ಟ್ರ ಸಂಸ್ಥೆ ಒಡಂಬಡಿಕೆಯಂತೆ ಅಂತಾರಾಷ್ಟ್ರೀಯ ಕಾನೂನಿನಡಿಯಲ್ಲಿ ಕೊಡವರ ಹಕ್ಕುಗಳನ್ನು ಘೋಷಿಸಬೇಕು ಮತ್ತು ಪೋಷಿಸಬೇಕು ಎಂದು ಹಕ್ಕೊತ್ತಾಯ ಮಂಡಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಕೊಡವ ಗುರುಕಾರೋಣರನ್ನು ಸ್ಮರಿಸಿ ಪ್ರಾರ್ಥಿಸಿ ಕಕ್ಕಡ–18ರ ವಿಶೇಷ ಖಾದ್ಯಗಳನ್ನು ಅರ್ಪಿಸಲಾಯಿತು. ಬಳಿಕ ಭತ್ತದ ಗದ್ದೆಯಲ್ಲಿ ಸಾಂಪ್ರದಾಯಿಕ ನಾಟಿ ಕಾರ್ಯ ಮಾಡಲಾಯಿತು. 3 ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಕಕ್ಕಡ–18ರ ಸಂಭ್ರಮಕ್ಕೆ ಚಾಲನೆ ನೀಡಲಾಯಿತು. ನೆರೆದಿದ್ದ ಕೊಡವ ಕೊಡವತಿಯರು ಕೊಡವ ಲ್ಯಾಂಡ್ ಪರ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಇದೇ ಸಂದರ್ಭ ಸಿಎನ್‌ಸಿಯ ಬೇಡಿಕೆಗಳ ಪರ ನಿರ್ಣಯ ಕೈಗೊಳ್ಳಲಾಯಿತು.

ಕೆಆರ್‌ಎಸ್ ತುಂಬಿ ಒಂದೂವರೆ ತಿಂಗಳಾದರೂ ಕಡೆ ಭಾಗಕ್ಕೆ ತಲುಪದ ನೀರು

ನೀರಾವರಿ ಇಲಾಖೆ ಅಧಿಕಾರಿಗಳ ವಿರುದ್ಧ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಆಕ್ರೋಶ


ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ನೇತೃತ್ವದಲ್ಲಿ ನಡೆದ ಕೆಡಿಪಿ ಸಭೆ.

ಮಂಡ್ಯ,ಆ.2– ಕೆಆರ್‌ಎಸ್ ಅಣೆಕಟ್ಟೆ ಭರ್ತಿಯಾಗಿ ಒಂದೂವರೆ ತಿಂಗಳು ಕಳೆದರೂ ಜಿಲ್ಲೆಯ ಕಡೇ ಭಾಗದ ಕೆರೆಗಳಿಗೆ ನೀರು ಹರಿಯುತ್ತಿಲ್ಲ. ಕೂಡಲೇ ತುರ್ತಾಗಿ ಜಿಲ್ಲೆಯ ಎಲ್ಲ ಕೆರೆಗಳು ಭರ್ತಿಯಾಗುವಂತೆ ಕ್ರಮ ವಹಿಸಬೇಕು ಎಂದು ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಾಕೀತು ಮಾಡಿದರು.

ಶನಿವಾರ ನಗರದ ಜಿಪಂ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ವಾಡಿಕೆಗಿಂತ ಉತ್ತಮ ಮಳೆಯಾಗಿದೆ. ಜಲಾಶಯ ಭರ್ತಿಯಾಗಿದ್ದು, ನದಿಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಹರಿದು ಹೋಗುತ್ತಿದೆ. ಆದರೂ ಕೆರೆಗಳು ಭರ್ತಿಯಾಗಿಲ್ಲ ಎಂಬುದು ವಿಪರ್ಯಾಸ ಎಂದು ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಮುಂಗಾರು ಹಂಗಾಮಿನಲ್ಲಿ ಮಳೆ ಹಾಗೂ ಬೆಳೆ ನಷ್ಟದ ಬಗ್ಗೆ ಮಾಹಿತಿ ನೀಡಿದ ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲೆಯಲ್ಲಿ ವಾಡಿಕೆಯಂತೆ 270 ಮಿ.ಮೀ ಮಳೆಯಾಗಬೇಕಿತ್ತು. ಆದರೆ ಈ ಬಾರಿ 330 ಮಿ.ಮೀ ಮಳೆಯಾಗಿದ್ದು, ಎಲ್ಲ ತಾಲೂಕುಗಳಲ್ಲೂ ಕೃಷಿ ಚಟುವಟಿಕೆಗಳು ಆರಂಭಗೊಂಡಿವೆ. ಒಂದು ದಿನಕ್ಕೆ 4 ಟಿಎಂಸಿಯಂತೆ ನೀರು ಹರಿಸಲಾಗುತ್ತಿದೆ. ಪಾಂಡವಪುರ, ಶ್ರೀ ರಂಗಪಟ್ಟಣದಲ್ಲಿ ನಾಟಿ ಮಾಡಿದ್ದಾರೆ. ಕಡೆಯ ಭಾಗ ಮದ್ದೂರು, ಮಳವಳ್ಳಿಯಲ್ಲಿ ರೈತರು ಭತ್ತದ ಒಟ್ಲು ಹಾಕಿದ್ದಾರೆ. ಮುಂಗಾರು ಮತ್ತು ಬೇಸಿಗೆ ಬೆಳೆಗೆ 50 ಟಿಎಂಸಿ ನೀರಿನ ಅವಶ್ಯಕತೆ ಇದ್ದು, ಈ ನೀರನ್ನು ಮೀಸಲಿಡಬೇಕಾಗಿದೆ. ಸದ್ಯಕ್ಕೆ ಕೃಷಿ ಚಟುವಟಿಕೆಗಳಿಗೆ ನೀರಿನ ಕೊರತೆ ಇಲ್ಲ ಎಂದು ತಿಳಿಸಿದರು.

ಸಭೆಯಲ್ಲಿ ಮಾತನಾಡಿದ ಶಾಸಕ ರಮೇಶ್‌ಬಂಡಿಸಿದ್ದೇಗೌಡ, ವಿರಿಜಾ ನಾಲೆ ಸೇರಿದಂತೆ ಶ್ರೀರಂಗಪಟ್ಟಣದ ಕೆಲ ಭಾಗದಲ್ಲಿ ನೀರು ಹೋಗುತ್ತಿಲ್ಲ ಎಂದು ನೀರಾವರಿ ಇಲಾಖೆಯ ಅಧಿಕಾರಿಗಳನ್ನು ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಉತ್ತರಿಸಲು ನೀರಾವರಿ ಇಲಾಖೆಯ ಇಂಜಿನಿಯರ್ ಜಯಂತ್ ಮುಂದಾದಾಗ ಅಧೀಕ್ಷಕ ಇಂಜಿನಿಯರ್ ರಘುರಾಂ ಎಲ್ಲಿ ಎಂದು ಸಚಿವ ಚಲುವರಾಯಸ್ವಾಮಿ ಪ್ರಶ್ನಿಸಿದರು. ಆಗ ರಘುರಾಂ ಸಭೆಗೆ ಬಂದಿಲ್ಲ ಎಂದು ಮಾಹಿತಿ ನೀಡಿದ್ದಾರೆ ಎಂದು ಜಯಂತ್ ಉತ್ತರಿಸಿದಾಗ ಜಿಲ್ಲಾಧಿಕಾರಿ ಡಾ.ಕುಮಾರ ಅವರಿಗೆ ನಿಮ್ಮ ಗಮನಕ್ಕೆ ತಂದಿದ್ದಾರೆಯೇ ಎಂದು ಸಚಿವರು ಪ್ರಶ್ನಿಸಿದರು. ಆಗ ಡಿಸಿ ಕುಮಾರ ಅವರು ನನ್ನ ಗಮನಕ್ಕೆ ತಂದಿಲ್ಲ ಎಂದು ಸಭೆಗೆ ತಿಳಿಸಿದರು.

ಇದರಿಂದ ಆಕ್ರೋಶಗೊಂಡ ಸಚಿವ ಚಲುವರಾಯಸ್ವಾಮಿ, ರಘುರಾಂ ಒಳ್ಳೆಯ ಅಧಿಕಾರಿ ಆದರೆ ಅನುಮತಿ ಇಲ್ಲದೆಯೇ ಸಭೆಗೆ ಗೈರು ಹಾಜರಾಗಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಇವರಿಗೆ ನೋಟಿಸ್ ನೀಡುವಂತೆ ಸೂಚಿಸಿದರು. ಮತ್ತೊಬ್ಬ ಇಂಜಿನಿಯರ್ ನಂಜುಂಡೇಗೌಡ ಎಲ್ಲಿ ಎಂದು ಪ್ರಶ್ನಿಸಿದಾಗ ಅವರು ಸಹ ಗೈರು ಹಾಜರಾಗಿದ್ದಕ್ಕೆ ಸಚಿವರು ಮತ್ತಷ್ಟು ಅಸಮಾಧಾನಗೊಂಡರು.

ಅಧಿಕಾರಿಗಳು ಕೆಡಿಪಿ ಸಭೆಗೆ ಕಡ್ಡಾಯವಾಗಿ ಬರಲೇಬೇಕು. ಬರಲು ಆಗಲ್ಲ ಎಂದರೆ ಮುಂಚಿತವಾಗಿಯೇ ಅಧಿಕಾರಿಗಳು ಜಿಲ್ಲಾಧಿಕಾರಿಯ ಅನುಮತಿ ಪಡೆಯಬೇಕು. ಕೆಡಿಪಿ ಸಭೆಗಿಂತ ಬೇರೆ ಯಾವ ಮಹತ್ವದ ಕೆಲಸ ಅಧಿಕಾರಿಗಳಿರುತ್ತದೆ. ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆದರೂ ಅಧಿಕಾರಿಗಳು ಈಗಲೂ ಕೆಡಿಪಿ ಸಭೆಗೆ ಗೈರು ಹಾಜರಾಗುತ್ತಾರೆ ಎಂದರೆ ಏನು ಅರ್ಥ. ಅನುಮತಿ ಇಲ್ಲದೆ ಸಭೆಗೆ ಗೈರು ಹಾಜರಾದರೆ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಚಿವ ಚಲುವರಾಯಸ್ವಾಮಿ ಸೂಚಿಸಿದರು.

ರಘುರಾಂ ಪರವಾಗಿ ಮಾತು ಮುಂದುವರೆಸಿದ ನೀರಾವರಿ ಇಂಜಿನಿಯರ್ ಜಯಂತ್, ವಿರಿಜಾ ನಾಲೆ ಸೇರಿದಂತೆ ಎಲ್ಲ ಭಾಗಕ್ಕೂ ನೀರು ಹರಿಸಲು ಅಗತ್ಯ ಕ್ರಮ ವಹಿಸುತ್ತೇವೆ ಎಂದು ಸಭೆಗೆ ತಿಳಿಸಿದಾಗ ಡ್ಯಾಂ ಭರ್ತಿಯಾಗಿ ಒಂದೂವರೆ ತಿಂಗಳು ಕಳೆದರೂ ಕೆರೆ ಮತ್ತು ನಾಲೆಗಳಿಗೆ ನೀರು ತುಂಬಿಸಿಲ್ಲ ಎಂದರೆ ಇದು ಒಪ್ಪುವ ಮಾತಲ್ಲ, ಇಲ್ಲಿ ನೀರಾವರಿ ಇಲಾಖೆಯ ಅಧಿಕಾರಿಗಳು ಲೋಪವಿದ್ದು, ಲೋಪ ಸರಿಪಡಿಸಿಕೊಂಡು ಕೆರೆ, ಕಟ್ಟೆ ತುಂಬಿ ಸುವಂತೆ ಸೂಚಿಸಿದರು.

ಶಾಸಕ ನರೇಂದ್ರಸ್ವಾಮಿ ಮಾತನಾಡಿ, ಮಳವಳ್ಳಿ ತಾಲ್ಲೂಕು ಕಡೆಯ ಭಾಗವಾಗಿದ್ದು, ಅಲ್ಲಿಗೆ ನೀರು ತಲುಪುತ್ತಿಲ್ಲ, ಈ ಬಗ್ಗೆ ರೈತರು ಅಸಮಧಾನ ವ್ಯಕ್ತಪಡಿಸುತ್ತಾರೆ. ಅಧಿಕಾರಿಗಳು ಏನು ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಮಾತು ಮುಂದುವರೆಸಿದ ಚಲುವರಾಯಸ್ವಾಮಿ, ಮದ್ದೂರಿನ ಕೊಪ್ಪ, ಮಳವಳ್ಳಿಯ ಹಲವು ಭಾಗಕ್ಕೆ ಇನ್ನು ನೀರು ತಲುಪಿಯೇ ಇಲ್ಲ, ಡ್ಯಾಂ ಭರ್ತಿಯಾಗಿ ನದಿಗೆ ಸಾಕಷ್ಟು ಪ್ರಮಾಣದಲ್ಲಿ ನೀರು ಹೋಗುತ್ತಿರುವಾಗ ಕಡೆ ಭಾಗಕ್ಕೆ ನೀರು ಕೊಡಲು ನಿಮಗೇನು ಸಮಸ್ಯೆ ಎಂದು ಪ್ರಶ್ನಿಸಿದರು.

ಸಚಿವ ಚಲುವರಾಯಸ್ವಾಮಿ ಮಾತನಾಡಿ, ಮಳೆ ಹಾನಿಯಿಂದ ಸಮಸ್ಯೆ ಹೇಳಲು ಸಂಬಂಧಿಸಿದ ಕಚೇರಿಗೆ ಸಾರ್ವಜನಿಕರು ಬಂದಾಗ ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂಬ ಆರೋಪವಿದೆ ಎಸಿ, ತಹಸೀಲ್ದಾರ್ ಸಂಬಂಧಿಸಿದ ವಿಎಗಳಿಗೆ ಸೂಚನೆ ಕೊಡಬೇಕು. ಮಳೆಹಾನಿ ಸಂತ್ರಸ್ತರು ಬಂದಾಗ ಅವರಿಗೆ ವಿಎಗಳು ಸ್ಪಂದಿಸಿ, ಅಗತ್ಯ ಸೌಲಭ್ಯ ಮತ್ತು ಪರಿಹಾರ ಒದಗಿಸುವ ಕೆಲಸ ಮಾಡಬೇಕು. ಮೇಲ್ಮಟ್ಟದ ಅಧಿಕಾರಿಗಳು ಮತ್ತು ಶಾಸಕರುಗಳಿಂದ ಪರಿಹಾರ ಕೊಡಿ ಎಂದು ಬೇಡಿಕೆ ಬರುವ ಮುನ್ನವೇ ಸಂತ್ರಸ್ತರಿಗೆ ನೆರವು ನೀಡಲು ಮುಂದಾಗಬೇಕೆಂದು ಕಂದಾಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಶಾಸಕರಾದ ಎ.ಬಿ.ರಮೇಶ ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರಸ್ವಾಮಿ, ಹೆಚ್.ಟಿ.ಮಂಜು, ದರ್ಶನ್ ಪುಟ್ಟಣ್ಣಯ್ಯ, ಎಂಎಲ್ಸಿ ಕೆ.ವಿವೇಕಾನಂದ, ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ.ರೇವಣ್ಣ ಉಪಸ್ಥಿತರಿದ್ದರು.

ಖಾತೆ ಮಾಡಿಕೊಡಲು ಅಧಿಕಾರಿಯಿಂದ ಲಂಚಕ್ಕೆ ಬೇಡಿಕೆ: ಕ್ರಮಕ್ಕೆ ಎಂಎಲ್‌ಸಿ ವಿವೇಕಾನಂದ ಆಗ್ರಹ

ಕೆಡಿಪಿ ಸಭೆಯಲ್ಲಿ ಮಾತನಾಡಿದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಶ್ರೀರಂಗಪಟ್ಟಣದ ಬೆಳಗೋಳದಲ್ಲಿ ಖಾತೆ ಮಾಡಿಕೊಡಲು ವಿಎ ಒಬ್ಬ ಒಂದು ಲಕ್ಷ ಲಂಚ ಕೇಳಿದ್ದಾನೆ. ಈ ಬಗ್ಗೆ ಜಮೀನು ಮಾಲೀಕರು ನನ್ನ ಬಳಿ ದೂರು ಕೊಟ್ಟಾಗ ಲಂಚ ಕೇಳಿದ ಅಧಿಕಾರಿಯನ್ನು ಪ್ರಶ್ನಿಸಿದರೆ ಕೇಳಿದ್ದು ನಿಜ, ನೀವು ಯಾರಿಗಾದರೂ ಹೇಳಿ ಅಂತ ನನ್ನ ಬಳಿಯೇ ಉಡಾಫೆಯಿಂದ ಮಾತನಾಡುತ್ತಾನೆ. ನನಗೆ ಈ ರೀತಿ ಮಾತನಾಡುವವನು ಸಾರ್ವಜನಿಕರ ಬಳಿ ಹೇಗೆ ನಡೆದುಕೊಳ್ಳುತ್ತಾನೆ. ಈತನ ವಿರುದ್ಧ ಕ್ರಮವಾಗಬೇಕೆಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ಕುಮಾರ, ಈ ಬಗ್ಗೆ ದಾಖಲಾತಿ ಇದ್ದರೆ ಸಂಬಂಧಿಸಿದವರು ಕೊಡಲಿ, ಲಂಚ ಕೇಳಿದ ಅಧಿಕಾರಿ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಅಮಾನತು ಮಾಡುತ್ತೇವೆ ಎಂದರು. ಜೊತೆಗೆ ಸಚಿವ ಚಲುವರಾಯಸ್ವಾಮಿ ಸಹ ಅತನಿಗೆ ನೋಟೀಸ್ ಕೊಟ್ಟು ವಿಚಾರಣೆ ಮಾಡಿ ಎಂದು ಸೂಚಿಸಿದರು.

ನಿವೃತ್ತ ದೈಹಿಕ–ಶಿಕ್ಷಕರಿಗೆ ಅಭಿನಂದನೆ



ಮಳವಳ್ಳಿ, ಆ.2– ತಾಲೂಕಿನ ಪೂರಿಗಾಲಿ ಟಿ.ಎಸ್. ಸುಬ್ಬಣ್ಣ ಶಾಲೆಯಲ್ಲಿ 42 ವರ್ಷಗಳ ಕಾಲ ದೈಹಿಕ ಶಿಕ್ಷಕರಾಗಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾದ ಟಿ.ಆರ್.ಮಂಜುನಾಥ್ ಅವರನ್ನು ಶಾಲಾ ಸಿಬ್ಬಂದಿ ಮತ್ತು ಶ್ರೀ ಮಹರ್ಷಿ ವಾಲ್ಮೀಕಿ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಸನ್ಮಾನಿಸಿ ಬೀಳ್ಕೊಡಲಾಯಿತು.

ಶಾಲೆಯಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ವಯೋನಿವೃತ್ತಿ ಹೊಂದಿದ ಮಂಜುನಾಥ್ ಅವರಿಗೆ ಮೈಸೂರು ಪೇಟ ತೊಡಿಸಿ ಗೌರವಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಮಂಜುನಾಥ್, ನನ್ನ ಸುದೀರ್ಘ ಅವಧಿಯ ವೃತ್ತಿಜೀವನದಲ್ಲಿ ಸೇವಾ ಮನೋಭಾವದಿಂದ ತನುಮನ ಅರ್ಪಿಸಿಕೊಂಡು ಸೇವೆ ಸಲ್ಲಿಸಿದ್ದೇನೆ. ಸಂಸ್ಥೆ ಮತ್ತು ಸಹದ್ಯೋಗಿ ಮಿತ್ರರು ನನಗೆ ನೀಡಿದ ಸಹಕಾರ ನಾನು ಉತ್ತಮ ಕೆಲಸ ಮಾಡಲು ಸಹಕಾರಿಯಾಯಿತು. ಸಹೋದ್ಯೋಗಿಗಳ ಸಲಹೆ ಮತ್ತು ಮಾರ್ಗದರ್ಶನಕ್ಕೆ ನಾನು ಸದಾ ಚಿರಋಣಿ ಎಂದರು.

ಜೆಡಿಎಸ್ ರಾಜ್ಯ ಮಾಧ್ಯಮ ವಕ್ತಾರ ಮತ್ತು ರಾಜ್ಯ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ರಾಜಶೇಖರಮೂರ್ತಿ, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರಾದ ಮಂಜು ನಾಥರಾವ್, ವಾಸುದೇವಮೂರ್ತಿ, ಶ್ರೀ ಮಹರ್ಷಿ ವಾಲ್ಮೀಕಿ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಎಡದೊರೆ ಮಹೇಶ್ ನಾಯಕ್, ಟಿ.ಎಸ್.ದಿನೇಶ್, ಸಾವಿತ್ರಮ್ಮ, ಮುಖ್ಯಶಿಕ್ಷಕ ಮರಿನಂಜಯ್ಯ, ಸಹ ಶಿಕ್ಷಕರಾದ ಮಂಜು, ಗಿರಿಪ್ರಸಾದ್, ಮಂಜುಳಾ, ಸುಕನ್ಯ, ಭರತ್ ಮತ್ತು ತೇಜಸ್ವಿನಿ ಉಪಸ್ಥಿತರಿದ್ದರು

ದೊಡ್ಡಗಾಜನೂರಲ್ಲಿ ನಾಗಮ್ಮ ಅಂತ್ಯಕ್ರಿಯೆ


ನಾಗಮ್ಮರ ಅಂತಿಮ ವಿಧಿವಿಧಾನಗಳಲ್ಲಿ ನಟ ಶಿವರಾಜ್‌ಕುಮಾರ್ ದಂಪತಿ ಪಾಲ್ಗೊಂಡಿದ್ದರು.

ಚಾಮರಾಜನಗರ, ಆ.2–ಡಾ.ರಾಜ್‌ಕುಮಾರ್ ಅವರ ಸಹೋದರಿ ನಾಗಮ್ಮ ಅಂತ್ಯಕ್ರಿಯೆ ಗ್ರಾಮದ ತಮಿಳುನಾಡಿನ ದೊಡ್ಡಗಾಜನೂರಿನ ತೋಟದಲ್ಲಿ ಸಕಲ ವಿಧಿ–ವಿಧಾನಗಳಿಂದ ನೆರವೇರಿತು.

ನಾಗಮ್ಮರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ನಾಗಮ್ಮ ಗುಂಬಳ್ಳಿ ಸಮೀಪದ ಮಠದಲ್ಲಿ ಗುರುವಿನ ಮಕ್ಕಳ ದೀಕ್ಷೆ ಪಡೆದಿದ್ದರಿಂದ, ಗುರುಮಠದ ಸಂಪ್ರದಾಯದಂತೆ ಮಠದ ರಾಘವೇಂದ್ರ ಸ್ವಾಮಿ ನೇತೃತ್ವದ ತಂಡ ವಿಧಿ–ವಿಧಾನವನ್ನು ನೆರವೇರಿಸಿದರು. ಪತಿ ವೆಂಕಟೇಗೌಡರ ಸಮಾಧಿ ಪಕ್ಕದಲ್ಲೇ ವಿಧಿ–ವಿಧಾನದಂತೆ ಪಾರ್ಥಿವ ಶರೀರಕ್ಕೆ ಪೂಜೆ ಸಲ್ಲಿಸಿ, ಮಣ್ಣು ಮಾಡಲಾಯಿತು.

ಭಾವುಕರಾದ ಶಿವಣ್ಣ : ನಾಗಮ್ಮ ಅತ್ತೆಗೆ ನನ್ನ ಮೇಲೆ ಹೆಚ್ಚು ಪ್ರೀತಿ ಇಟ್ಟುಕೊಂಡಿದ್ದರು. ಅಪ್ಪಾಜಿ ತರಹ ಕಾಣ್ತೀಯಾ ಕಂದ ಅಂತಾ ಹೇಳ್ತಿದ್ದರು. ನಂದು, ಅಪ್ಪು ಸಿನಿಮಾ ಹೆಚ್ಚು ನೋಡುತ್ತಿದ್ದರು. ಇವತ್ತು ಅವರ ಸಾವಿನಿಂದ ಹೆಚ್ಚು ನೋವಾಗುತ್ತಿದೆ ಎಂದು ನಟ ಶಿವರಾಜ್‌ಕುಮಾರ್ ಭಾವುಕರಾದರು.

ಎಂ.ರಂಗಸ್ವಾಮಿ ನಿಧನ



ಯಳಂದೂರು, ಆ.2–ತಾಲೂಕಿನ ಸಮೀಪದ ಇರಸವಾಡಿ ಗ್ರಾಮದ ಎಂ.ರಂಗಸ್ವಾಮಿ(51) ಅನಾರೋಗ್ಯದ ಹಿನ್ನೆಲೆಯಲ್ಲಿ ಮೃತಪಟ್ಟಿದ್ದಾರೆ ಮೃತರು ಮಡದಿ ಮತ್ತು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ ಮೃತರ ಅಂತ್ಯಕ್ರಿಯೆ ಸ್ವಗ್ರಾಮದ ಉಪ್ಪಾರ ರುದ್ರಭೂಮಿಯಲ್ಲಿ ಶನಿವಾರ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಕಲಾಂ ಸಂಸ್ಥೆ ವಂಚನೆಗೊಳಗಾದವರಿಗೆ ಎಸ್ಪಿ ಅಭಯ


ಡಿವೈಎಸ್ಪಿ ಕಚೇರಿಯಲ್ಲಿ ನ್ಯಾಯಕೇಳಿ ಬಂದ ವಂಚನೆಗೊಳಗಾದವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕವಿತಾ ಭೇಟಿ ಮಾಡಿದರು.

ಕೊಳ್ಳೇಗಾಲ, ಆ.2–ಅಸ್ತಿತ್ವದಲ್ಲೇ ಇಲ್ಲದ ಅಬ್ದುಲ್ ಕಲಾಂ ಎಂಬ ನಕಲಿ ಸಂಸ್ಥೆಯಲ್ಲಿ ಉದ್ಯೋಗ ಲಭಿಸುತ್ತದೆ ಎಂದು ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಆದೇಶ ನೋಡಿ ಲಕ್ಷಾಂತರ ರೂಗಳನ್ನು ಕಳೆದುಕೊಂಡು ವಂಚನೆಗೊಳಗಾದವರಿಗೆ ನ್ಯಾಯ ಒದಗಿಸುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಕವಿತಾ ಅಭಯವನ್ನಿತ್ತಿದ್ದಾರೆ.

ರೈತ ನಾಯಕ ಅಣಗಳ್ಳಿ ಬಸವರಾಜು ನೇತೃತ್ವದಲ್ಲಿ ಡಿವೈಎಸ್ಪಿ ಕಚೇರಿ ಮುಂದೆ ನ್ಯಾಯ ಕೇಳಲು ಸೇರಿದ್ದ ಸ್ಥಳಕ್ಕೆ ಆಗಮಿಸಿದ ಎಸ್ಪಿಯವರು ಸಂತ್ರಸ್ಥರ ಸಂಕಷ್ಟದ ಬಗ್ಗೆ ಅವರೊಂದಿಗೆ ಕೆಲಕಾಲ ಚರ್ಚಿಸಿದ ಬಳಿಕ ನಿಮ್ಮ ಪರ ನಾನಿದ್ದೇನೆ, ಡಿವೈಎಸ್ಪಿ ಧರ್ಮೇಂದ್ರ ಈ ಪ್ರಕರಣವನ್ನು ಪ್ರಾಮಾಣಿಕವಾಗಿ ನಿಭಾಯಿಸಿ ವಂಚಿಸಿದವರನ್ನು ಕರೆಸಿ ನಿಮಗೆ ನ್ಯಾಯ ಸಲ್ಲಿಸುವಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ ಎಂದರು. ನೀವು ದೂರು ನೀಡಿದರೆ ಪ್ರಕರಣ ದಾಖಲಿಸಿ 24ಗಂಟೆಯೊಳಗೆ ಆರೋಪಿಗಳ ಬಂಧನಕ್ಕೆ ನಾವು ಸಿದ್ದರಿದ್ದೇವೆ, ಬೇಡ ಎಂದಾದರೆ ನಾವು ನಿಮಗೆ ವಂಚಿಸಿದವರನ್ನು, ನಿಮ್ಮಗಳ ಸಮ್ಮುಖದಲ್ಲಿಯೇ ಕರೆಸಿ ನ್ಯಾಯ ಕೊಡಿಸುತ್ತೇವೆ, ನನಗೆ ಸ್ವಲ್ಪ ಕಾಲಾವಕಾಶ ನೀಡಿ ಎಂದರು.

ಈ ವೇಳೆ ನೊಂದ ಮಹಿಳೆಯರು ಡಿಡಿಪಿಐ ನೀಡಿದ್ದ ಆದೇಶ, ಕಲಾಂ ಸಂಸ್ಥೆಯವರು ವಿವಿಧ ಶಾಲೆಗಳಿಗೆ ನೀಡಿರುವ ಆದೇಶ ಹಾಗೂ ಸಂಸ್ಥೆಯ ಕೆಲವರಿಗೆ ಹಣ ಸಂದಾಯ ಮಾಡಿದ ದಾಖಲೆಗಳನ್ನು ತೋರಿಸಿ ತಮ್ಮ ಅಳಲು ತೋಡಿಕೊಂಡರಲ್ಲದೆ ತಮ್ಮ ಸಮಸ್ಯೆ ಹೇಳಿಕೊಂಡು ಕಣ್ಣೀರಿಟ್ಟರು

ನಮಗೆ ಶ್ರೀಕಂಠ, ಕೃಷ್ಣ, ಸತೀಶ್ ಪಟಾಗಾರ, ಸುಂದರ್ ಸೇರಿದಂತೆ ಹಲವರು ಲಕ್ಷಾಂತರ ಪಡೆದು ವಂಚಿಸಿದ್ದಾರೆ. ಈ ವೇಳೆ ಕಲಾಂ ಸಂಸ್ಥೆಯೆ ಪಟ್ಟಣದಲ್ಲಿ ಇಲ್ಲ, ಇಲ್ಲದ ಸಂಸ್ಥೆಗೆ ಹೇಗೆ ಅನುಮತಿ ನೀಡಿದರು ಎಂಬುದರ ಕುರಿತು ಆದೇಶ ನೀಡಿದ ಡಿಡಿಪಿಐ ಅವರನ್ನು ಕರೆಸಿ ವಿಚಾರಣೆ ನಡೆಸಿ ಎಂದು ಮನವಿ ಮಾಡಿದರು.

ಡಿವೈಎಸ್ಪಿ ಧರ್ಮೇಂದ್ರ ಮಾತನಾಡಿ, ನಾನು ಎಸ್ಪಿಯವರ ಸೂಚನೆ ಮೇರೆಗೆ ಈ ಪ್ರಕರಣದಲ್ಲಿ ನಿಮಗೆ ವಂಚನೆ ಮಾಡಿದವರನ್ನು ಠಾಣೆಗೆ ಕರೆಸಿ ಖಂಡಿತ ನ್ಯಾಯ ಸಲ್ಲಿಸುವೆ ಎಂದರು.

ನಗರಸಭೆಯಲ್ಲಿ ಮಧ್ಯವರ್ತಿ ಹಾವಳಿ ಸದಸ್ಯರ ಗಂಭೀರ ಆರೋಪ

ಚಾಮರಾಜನಗರ: ನಗರಸಭೆಯಲ್ಲಿ ಎ ಮತ್ತು ಬಿ ಖಾತೆ ಮಾಡಿಕೊಡಲು ಅಧಿಕಾರಿಗಳ ವಿಳಂಬ ಧೋರಣೆಯಿಂದ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ ಎಂದು ಸದಸ್ಯರು ಗಂಭೀರ ಆರೋಪ ಮಾಡಿದ್ದಾರೆ

ನಗರಸಭಾ ಕಚೇರಿ ಸಭಾಂಗಣದಲ್ಲಿ ಅಧ್ಯಕ್ಷ ಸುರೇಶ್ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಸದಸ್ಯರಾದ ಖಲೀಲ್ ಉಲ್ಲಾ, ಅಬ್ರಾರ್ ಅಹಮದ್, ಕುಮುದಾ ಕೇಶವಮೂರ್ತಿ ಮಾತನಾಡಿ, ಕಚೇರಿಯಲ್ಲಿ ಸದಸ್ಯರ ಕೆಲಸ ಕಾರ್ಯಗಳನ್ನು ಅಧಿಕಾರಿಗಳು, ನೌಕರರು ಸಮರ್ಪಕವಾಗಿ ಮಾಡುತ್ತಿಲ್ಲ. ಖಾತೆ ಗುಮಾಸ್ತರು ಮಧ್ಯವರ್ತಿಗಳಿಂದ ಹಣ ಪಡೆದು ಕೆಲಸ ಮಾಡುತ್ತಿದ್ದಾರೆ ಇದರಿಂದ ಸದಸ್ಯರು ಸೇರಿದಂತೆ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ ಎಂದು ದೂರಿ ಇನ್ನು ಮುಂದೆ ಮಧ್ಯವರ್ತಿಗಳಿಗೆ ಕಡಿವಾಣ ಹಾಕಬೇಕು. ಸದಸ್ಯರ ಕೆಲಸಗಳನ್ನು ಸಕಾಲದಲ್ಲಿ ಮಾಡಬೇಕು ಎಂದು ಒತ್ತಾಯಿಸಿದರು ಇದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷ ಸುರೇಶ್ ಈಗಾಗಲೇ ಹಲವು ಬಾರಿ ಸಾರ್ವಜನಿಕ ಕೆಲಸ ಕಾರ್ಯಗಳನ್ನು ಮಾಡಿಕೊಡುವಂತೆ ಅಧಿಕಾರಿಗಳು, ನೌಕರರಿಗೆ ಸೂಚಿಸಲಾಗಿದೆ. ಹೀಗಿದ್ದರೂ ಆರೋಪ ಕೇಳಿ ಬಂದಿದೆ ಮುಂದಿನ ದಿನಗಳಲ್ಲಿ ಇಂತಹ ಸಮಸ್ಯೆಗಳು ಉದ್ಭವಿಸದಂತೆ ಕ್ರಮಕೈಗೊಳ್ಳುವುದಾಗಿ ಉತ್ತರಿಸಿದರು.

ಸದಸ್ಯ ಶಿವರಾಜ್ ಸಂತೇಮರಹಳ್ಳಿ ವೃತ್ತದಲ್ಲಿ ನಿರ್ಮಾಣಗೊಂಡಿರುವ ಕಟ್ಟಡವನ್ನು ಇನ್ನೂ ಪೂರ್ಣಗೊಳಿಸಿಲ್ಲ. ಇದನ್ನು ಟೆಂಡರ್ ಕರೆದು ಬಾಡಿಗೆಗೆ ನೀಡಬೇಕು ಎಂದು ಒತ್ತಾಯಿಸಿದರು. ಮಹಾವೀರ ವೃತ್ತದಲ್ಲಿ ನಗರಸಭೆ ವತಿಯಿಂದ ನಿರ್ಮಿಸಿರುವ ಕಟ್ಟಡದಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳು ನಮ್ಮ ಕ್ಲಿನಿಕ್ ತೆರೆಯಲು ಆರೋಗ್ಯ ಇಲಾಖೆ ಮನವಿ ಸಲ್ಲಿಸಿದೆ ಎಂದು ಪೌರಾಯುಕ್ತ ರಾಮದಾಸ್ ತಿಳಿಸಿದರು.

ಜಲ ಮಂಡಳಿ ವತಿಯಿಂದ ನಗರದಲ್ಲಿ ಪೈಪ್ ಲೈನ್ ಮಾಡಿ ರಸ್ತೆಗಳನ್ನು ಹಾಳು ಮಾಡಿದೆ. ಇವರು ತೆಗೆದಿರುವ ಗುಂಡಿ ಮುಚ್ಚಿಲ್ಲ ಇದರಿಂದ ನಿವಾಸಿಗಳಿಗೆ ತೊಂದರೆಯಾಗಿದೆ. ಕೆಲವರು ಬಿದ್ದು ಗಾಯಗೊಂಡಿದ್ದಾರೆ. ಕೆಲ ವಾರ್ಡ್‌ಗಳಲ್ಲಿ ಕಾಮಗಾರಿ ಮುಗಿದಿಲ್ಲ. ಯಾವಾಗ ಕಾಮಗಾರಿ ಪೂರ್ಣ ಮಾಡುತ್ತೀರಾ ಎಂದು ಜಲಮಂಡಳಿ ಎಇಇ ಮಂಜುನಾಥ್‌ಗೆ ಸದಸ್ಯರಾದ ರಾಘವೇಂದ್ರ, ಅಬ್ರಾರ್ ಅಹಮದ್, ಶಿವರಾಜ್, ಆರ್.ಪಿ.ನಂಜುಂಡಸ್ವಾಮಿ, ಗಾಯಿತ್ರಿ, ಆಶಾ ನಟರಾಜು ತರಾಟೆಗೆ ತೆಗೆದುಕೊಂಡರು. ಸಭೆಯಲ್ಲಿ ಉಪಾಧ್ಯಕ್ಷೆ ಮಮತ, ಪೌರಾಯುಕ್ತ ಎಸ್.ವಿ.ರಾಮದಾಸ್, ಸದಸ್ಯರು, ಇದ್ದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ


ಗುಂಡ್ಲುಪೇಟೆ ಪಟ್ಟಣದ ದೊಡ್ಡಹುಂಡಿ ಭೋಗಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕಗಳಿಸಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಿದರು. ಉಪಕುಲಪತಿ ಗಂಗಾಧರ್, ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ರಮೇಶ್, ಪ್ರಾಂಶುಪಾಲ ಗೋಪಾಲಕೃಷ್ಣ, ಉಪನ್ಯಾಸಕರಾದ ನಾಗೇಂದ್ರ, ಮಂಜುನಾಥ್ ಇತರರು ಇದ್ದರು.



ಆಹಾ... ಜೇನು



ಜೇನುಗೂಡಿನಲ್ಲಿರುವ ಹೆಣ್ಣು ಜೇನ್ನೊಣಗಳು ದುಡಿಮೆಗಾತಿಯರು. ಇವು ರಾಣಿಗಿಂತ ಸಣ್ಣವಿದ್ದು, ಬೆನ್ನ ಮೇಲೆ ಬಿಳಿ ಪಟ್ಟೆಗಳಿರುತ್ತವೆ. ಇವು ಹುಟ್ಟಿದ ಒಂದು ವಾರ ಗೂಡಿನಲ್ಲಿ ಬೆಳೆಯುತ್ತವೆ. ಆಗ ಗೂಡನ್ನು ಸ್ವಚ್ಛವಾಗಿಡುವ, ಮರಿಗಳನ್ನು ಸಾಕುವ ಕೆಲಸ ಮಾಡುತ್ತವೆ. ಎರಡು ಅಥವಾ ಮೂರು ವಾರಗಳ ನಂತರ ಪರಾಗ ಸಂಗ್ರಹಿಸುವ ಕೆಲಸಕ್ಕೆ ಹೊರಗೆ ಹೋಗುತ್ತವೆ. ಕೆಲವು ಯಾವಾಗಲೂ ಗೂಡಿನ ಬಾಗಿಲು ಕಾಯುತ್ತ ನಿಂತು, ವೈರಿಗಳು ಒಳಗೆ ಬರದಂತೆ ನೋಡಿಕೊಳ್ಳುತ್ತವೆ. ಕೆಲವು ಗಾಳಿ ಬೀಸುತ್ತಾ ಗೂಡಿನ ಉಷ್ಣತೆ ಸರಿಯಾಗಿ ಉಳಿಯುವಂತೆ ನೋಡಿಕೊಳ್ಳುತ್ತವೆ. ಹೊರಗಿನಿಂದ ತಂದ ಆಹಾರವನ್ನು ಸರಿಯಾಗಿ ಇಡುವ ವ್ಯವಸ್ಥೆಯನ್ನು ಕೆಲವು ಜೇನ್ನೊಣಗಳು ಮಾಡುತ್ತವೆ. ಜೇನುತುಪ್ಪ ತಯಾರಿಸಿ ಅಂಕಣಗಳಲ್ಲಿ ಮುಚ್ಚಿಡುವ ಕೆಲಸಕ್ಕೆ ಕೆಲವು, ಇನ್ನು ಕೆಲವು ಯಾವಾಗಲೂ ರಾಣಿಯ ಸೇವೆಗೆ ಮೀಸಲು. ಹೀಗೆ ತಮ್ಮ ಕೆಲಸಗಳನ್ನು ವಿಂಗಡಿಸಿಕೊಂಡು ವ್ಯವಸ್ಥಿತವಾಗಿ ದುಡಿಯುತ್ತವೆ. ತಮ್ಮ ವೈರಿಗಳಿಗೆ ವಿಷಪೂರಿತ ಮುಳ್ಳಿನಿಂದ ಚುಚ್ಚಿ ತೊಂದರೆ ಕೊಡುತ್ತವೆ. ರಾಣಿ ಗರ್ಭಿಣಿಯಾದ ಮೇಲೆ ಎಲ್ಲಾ ಗಂಡು ಜೇನ್ನೊಣಗಳನ್ನು ಹೊರಗೆ ಹಾಕುತ್ತವೆ. ಹೊರಗಿನಿಂದ ಹೂವಿನ ಪರಾಗ ತುಂಬಿಕೊಂಡು ತರಲು ಇವುಗಳ ಕಾಲಲ್ಲಿ ಸಣ್ಣ ಕೋಶ ಇದೆ. ದುಡಿಮೆಗಾತಿ ಜೇನ್ನೊಣಗಳ ಆಯಸ್ಸು ಸುಮಾರು ಎರಡು-ಮೂರು ತಿಂಗಳು.

ಜೇನುತುಪ್ಪ ಆರೋಗ್ಯಕ್ಕೆ ಹಿತಕರ. ಅದು ಶುಭದ ಚಿಹ್ನೆಯೂ ಹೌದು. ಹಲವು ಮತಗಳವರು ಧಾರ್ಮಿಕ ವಿಧಿ ವಿಧಾನಗಳಲ್ಲಿ ಜೇನುತುಪ್ಪವನ್ನು ಬಳಸುತ್ತಾರೆ.

ಆಯುರ್ವೇದದಲ್ಲಿ ಜೇನುತುಪ್ಪದ ಬಳಕೆ ಇದೆ. ಮನುಷ್ಯನ ಬೆಳವಣಿಗೆಗೆ ಬೇಕಾದ ಅಂಶಗಳು ಇದರಲ್ಲಿ ಸೇರಿವೆ. ಒಂದು ಕಿಲೋಗ್ರಾಂ ಜೇನುತುಪ್ಪ ಸುಮಾರು ಮೂರು ಲೀಟರ್ ಹಾಲಿನಷ್ಟು ಅಥವಾ 45 ಕೋಳಿ ತತ್ತಿಗಳಷ್ಟು ಆಹಾರಾಂಶವನ್ನು ಹೊಂದಿದೆ. ಜೇನಿನ ಮಹತ್ವವನ್ನು ಕುರಿತ ವರ್ಣನೆ ಎಲ್ಲಾ ಧರ್ಮ ಗ್ರಂಥಗಳಲ್ಲಿ ಕಂಡುಬರುತ್ತದೆ.

ಸುಮಾರು 19ನೇ ಶತಮಾನದ ಮಧ್ಯಕಾಲದಿಂದ ಜೇನ್ನೊಣ ಸಾಕುವುದಕ್ಕಾಗಿ ಪೆಟ್ಟಿಗೆ ಸಿದ್ಧಪಡಿಸುವುದು ಆರಂಭವಾಯಿತು. 1840ರಲ್ಲಿ ಇಂಥ ಪೆಟ್ಟಿಗೆ ರಚಿಸಲಾಯಿತು. ಇದಕ್ಕೂ ಮೊದಲು ಅಮೆರಿಕ ಮತ್ತು ಯುರೋಪುಗಳಲ್ಲಿ ಹುಲ್ಲುಕಡ್ಡಿಗಳಿಂದ ಸಿದ್ಧಪಡಿಸಿದ ಗೂಡುಗಳನ್ನು, ಜೇನ್ನೊಣಗಳನ್ನು ಹಿಡಿಯಲು ಉಪಯೋಗಿಸುತ್ತಿದ್ದರು. 19ನೆಯ ಶತಮಾನದ ಕೊನೆಗೆ, ಪೆಟ್ಟಿಗೆಯಲ್ಲಿ ಜೇನುತುಪ್ಪದ ಕೋಣೆ ಮಾಡಿಡುವ ವಿಧಾನವನ್ನು ಕಂಡುಹಿಡಿದುದರಿಂದ ಜೇನುಸಾಕಣೆಯಲ್ಲಿ ಕ್ರಾಂತಿಯಾಯಿತೆಂದೇ ಹೇಳಬೇಕು, ಜೇನು ತಯಾರಿಗೆ ಬೇಕಾದ ಕಚ್ಚಾ ವಸ್ತು ಹೂವಿನ ಮಕರಂದ. ತಯಾರಕರು ಜೇನ್ನೊಣಗಳು. ಶೇಕಡ 15ಕ್ಕಿಂತಲೂ ಕಡಿಮೆ ಸಕ್ಕರೆಯ ಅಂಶವಿರುವ ಮಕರಂದ ಜೇನ್ನೊಣಗಳಿಗೆ ಇಷ್ಟವಿಲ್ಲ. ಇವುಗಳ ಕೈಯಲ್ಲಿ ಸುಕ್ರೋಸ್‌ನಂತಹ ಸಂಕೀರ್ಣ ಸಕ್ಕರೆ ಎನ್‌ಜೈಮುಗಳ ಮೂಲಕ ಫ್ರಕ್ಟೋಸ್ ಗ್ಲೂಕೋಸ್‌ಗಳಂತ ಸರಳರೂಪಕ್ಕೆ ಪರಿವರ್ತಿತವಾಗುತ್ತದೆ; ಶೇಕಡ 80ರಷ್ಟು ಸಕ್ಕರೆಯ ಅಂಶವಿರುವ ಜೇನು ಸಿದ್ಧವಾಗುತ್ತದೆ.

ಇಂಥ ಶುದ್ಧ ಜೇನು ಪಡೆಯಲು ಜೇನ್ನೊಣಗಳನ್ನು ಸಾಕಬೇಕು. ಕೃಷಿಯ ಜೊತೆಗೆ ಜೇನುಸಾಕಣೆಯನ್ನು ಲಾಭದಾಯಕವಾಗಿ ನಡೆಸಬಹುದು.

ಭಾರತದಲ್ಲಿ ವಿವಿಧ ಜಾತಿಯ ಜೇನ್ನೊಣಗಳಿವೆ ಜೇನು ಪಡೆಯುವ ಹಲವು ವಿಧಾನಗಳು ಬಳಕೆಯಲ್ಲಿವೆ. ಸಾಮಾನ್ಯವಾಗಿ ಜೇನುಗೂಡಿನಲ್ಲಿ ಜೇನುತುಪ್ಪ ತುಂಬಿದ ಬಳಿಕ, ಹೊಗೆ ಹಾಕಿ ಜೇನ್ನೊಣಗಳನ್ನು ಓಡಿಸುವುದುಂಟು. ಅನಂತರ ಮರಿ, ಮೊಟ್ಟೆಗಳ ಸಮೇತವಾಗಿ ಹುಟ್ಟುಗಳನ್ನು ಬಟ್ಟೆಯಲ್ಲಿ ಸುತ್ತಿ ಹಿಂಡಿದಾಗ ಜೇನು ಬರುತ್ತದೆ. ಇದರಲ್ಲಿ ಮರಿ, ಮೊಟ್ಟೆಗಳ ರಸವೂ ಮಿಶ್ರವಾಗಿರುತ್ತದೆ.

ಈ ಪದ್ಧತಿಯಲ್ಲಿ ಕೆಲವು ದೋಷಗಳಿವೆ. ಮಳೆಗಾಲದಲ್ಲಿ ಉಪಯೋಗಿಸಲೆಂದು ಜೇನ್ನೊಣಗಳು ಕಟ್ಟಿದ ಮನೆ ಇದರಿಂದ ಹಾಳಾಗುತ್ತದೆ. ಬಹಳ ನೊಣಗಳು ಸಾಯುತ್ತವೆ. ಜೇನುತುಪ್ಪವೂ ಶುದ್ಧವಾಗಿರುವುದಿಲ್ಲ. ಇದರ ಬದಲು ಜೇನುಗೂಡುಗಳು ಹಾಳಾಗದಂತೆ ನೊಣಗಳು ನಾಶವಾಗದಂತೆ ನೋಡಿಕೊಂಡು ವರ್ಷದಲ್ಲಿ ಹಲವು ಬಾರಿ ಜೇನುತುಪ್ಪ ತೆಗೆಯುವಂತಹ ಆಧುನಿಕ ಪದ್ಧತಿಯಿದೆ.

ಪ್ರಪಂಚದಲ್ಲಿ ಸುಮಾರು 30,000 ಬಗೆಯ ಜೇನ್ನೊಣಗಳಿವೆ. ಇವುಗಳಲ್ಲಿ ಕೆಲವು ಮಾತ್ರ ಜೇನುತುಪ್ಪ ಸಂಗ್ರಹಿಸುತ್ತವೆ. ಜೇನುತುಪ್ಪ ಸಂಗ್ರಹಿಸುವ ಜೇನ್ನೊಣಗಳಲ್ಲಿ ಹೆಜ್ಜೇನು, ಕೋಲುಜೇನು, ತುಡುವಿ ಜೇನು, ಮಿಸ್ರಿಜೇನು ಎಂಬ ನಾಲ್ಕು ಜಾತಿಯ ನೊಣಗಳು ಭಾರತದಲ್ಲಿವೆ. ಇವುಗಳಲ್ಲಿ ತುಡುವಿ ಜೇನ್ನೊಣಗಳನ್ನು ಮಾತ್ರ ಸಾಕಬಹುದು. ಉಳಿದ ಜೇನ್ನೊಣಗಳು ಒಂದೇ ಕಡೆಯಲ್ಲಿ ಸ್ಥಿರವಾಗಿ ಉಳಿಯುವುದಿಲ್ಲ. ಹೆಜ್ಜೇನಿನ ಒಂದು ಹುಟ್ಟಿನಿಂದ 30 ಕಿಲೋಗ್ರಾಮಿನಷ್ಟು ಜೇನು ಸಿಗುತ್ತದೆ. ತುಡುವಿ ಜೇನ್ನೊಣದ ಒಂದು ಹುಟ್ಟಿನಿಂದ 6 ಕಿಲೋ ಗ್ರಾಂ ಜೇನು ದೊರೆಯುತ್ತದೆ.

ಜೇನು ಕುಟುಂಬದಲ್ಲಿ ಒಂದು ರಾಣಿ ಮತ್ತು ಹಲವು ಕೆಲಸಗಾರ ನೊಣಗಳು ಇರುತ್ತವೆ. ಎಲ್ಲಾ ಜೇನ್ನೊಣಗಳಿಗಿಂತ ದೊಡ್ಡದಾದ ರಾಣಿಯ ಬಣ್ಣ ತಾಮ್ರವರ್ಣ ಅಥವಾ ಕಪ್ಪು. ಇದರ ಚಲನವಲನ ಸಾವಕಾಶ. ಇದಕ್ಕೆ ಯಾವಾಗಲೂ ಉಳಿದವರಿಂದ ಸೇವೆ. ರಾಣಿಯು ಇಡುವ ಗರ್ಭಾಂಕುರಿತ ಅಂಡಾಣುಗಳಿಂದ ದುಡಿಮೆಗಾತಿಯರೂ, ಗರ್ಭಾಂಕುರಗೊಳ್ಳದ ಅಂಡಾಣುಗಳಿಂದ ಗಂಡು ಜೇನ್ನೊಣಗಳೂ ಹುಟ್ಟುತ್ತವೆ. ದುಡಿಮೆಗಾತಿಯರು ಹುಟ್ಟುವ ಅಂಡಾಣುವಿನಿಂದಲೇ ರಾಣಿಯು ಹುಟ್ಟಿ, ರಾಣಿಯು ಅಂಕಣದಲ್ಲಿರುವ ಆ ತತ್ತಿ ಮೂರನೆಯ ದಿವಸ ಒಡೆದು ಮರಿಯಾಗುತ್ತದೆ. ಎಳೆ ಜೇನ್ನೊಣಗಳ ಮೆದುಳಿನಲ್ಲಿ ಉತ್ಪನ್ನವಾಗುವ ರಸವೇ ಇದಕ್ಕೆ ಆಹಾರ.

ಪರಿಸರದ ಹವಾಮಾನ, ಉಷ್ಣತೆ ನೋಡಿಕೊಂಡು, ಜೇನು ರಾಣಿಯು ಗೂಡಿನಿಂದ ಹೊರಗೆ ಹಾರುತ್ತದೆ. ಈ ಸಂದರ್ಭದ ದಾರಿ ನೋಡುವ ಕೆಲವು ಗಂಡು ಜೇನ್ನೊಣಗಳು ಅದರ ಬೆನ್ನು ಹತ್ತುತ್ತವೆ. ರಾಣಿಯೊಂದಿಗೆ ಯಾವ ಗಂಡು ಎತ್ತರಕ್ಕೆ ಹಾರಬಲ್ಲುದೋ ಅದರೊಡನೆ ರಾಣಿಯ ಗರ್ಭ ಸಂಸ್ಕಾರ. ರಾಣಿಯು ಗೂಡಿಗೆ ಹಿಂತಿರುಗುತ್ತದೆ; ಗಂಡು ಜೇನ್ನೊಣ ಸಾಯುತ್ತದೆ. ಒಮ್ಮೆ ಗರ್ಭಿಣಿಯಾದ ರಾಣಿ ಸಾಯುವವರೆಗೂ ತತ್ತಿ ಇಡುತ್ತದೆ. ಅದು ದಿನಕ್ಕೆ ಸುಮಾರು 200 ರಿಂದ 800 ತತ್ತಿ ಇಡಬಹುದು. ಇದರ ಜೀವಮಾನ ಎರಡು ಅಥವಾ ಮೂರು ವರ್ಷ.

ಜೇನುಗೂಡಿನಲ್ಲಿರುವ ಹೆಣ್ಣು ಜೇನ್ನೊಣಗಳು ದುಡಿಮೆಗಾತಿಯರು. ಇವು ರಾಣಿಗಿಂತ ಸಣ್ಣವಿದ್ದು, ಬೆನ್ನ ಮೇಲೆ ಬಿಳಿ ಪಟ್ಟೆಗಳಿರುತ್ತವೆ. ಇವು ಹುಟ್ಟಿದ ಒಂದು ವಾರ ಗೂಡಿನಲ್ಲಿ ಬೆಳೆಯುತ್ತವೆ. ಆಗ ಗೂಡನ್ನು ಸ್ವಚ್ಛವಾಗಿಡುವ, ಮರಿಗಳನ್ನು ಸಾಕುವ ಕೆಲಸ ಮಾಡುತ್ತವೆ. ಎರಡು ಅಥವಾ ಮೂರು ವಾರಗಳ ನಂತರ ಪರಾಗ ಸಂಗ್ರಹಿಸುವ ಕೆಲಸಕ್ಕೆ ಹೊರಗೆ ಹೋಗುತ್ತವೆ. ಕೆಲವು ಯಾವಾಗಲೂ ಗೂಡಿನ ಬಾಗಿಲು ಕಾಯುತ್ತ ನಿಂತು, ವೈರಿಗಳು ಒಳಗೆ ಬರದಂತೆ ನೋಡಿಕೊಳ್ಳುತ್ತವೆ. ಕೆಲವು ಗಾಳಿ ಬೀಸುತ್ತಾ ಗೂಡಿನ ಉಷ್ಣತೆ ಸರಿಯಾಗಿ ಉಳಿಯುವಂತೆ ನೋಡಿಕೊಳ್ಳುತ್ತವೆ. ಹೊರಗಿನಿಂದ ತಂದ ಆಹಾರವನ್ನು ಸರಿಯಾಗಿ ಇಡುವ ವ್ಯವಸ್ಥೆಯನ್ನು ಕೆಲವು ಜೇನ್ನೊಣಗಳು ಮಾಡುತ್ತವೆ.



ಜೇನುತುಪ್ಪ ತಯಾರಿಸಿ ಅಂಕಣಗಳಲ್ಲಿ ಮುಚ್ಚಿಡುವ ಕೆಲಸಕ್ಕೆ ಕೆಲವು, ಇನ್ನು ಕೆಲವು ಯಾವಾಗಲೂ ರಾಣಿಯ ಸೇವೆಗೆ ಮೀಸಲು. ಹೀಗೆ ತಮ್ಮ ಕೆಲಸಗಳನ್ನು ವಿಂಗಡಿಸಿಕೊಂಡು ವ್ಯವಸ್ಥಿತವಾಗಿ ದುಡಿಯುತ್ತವೆ. ತಮ್ಮ ವೈರಿಗಳಿಗೆ ವಿಷಪೂರಿತ ಮುಳ್ಳಿನಿಂದ ಚುಚ್ಚಿ ತೊಂದರೆ ಕೊಡುತ್ತವೆ. ರಾಣಿ ಗರ್ಭಿಣಿಯಾದ ಮೇಲೆ ಎಲ್ಲಾ ಗಂಡು ಜೇನ್ನೊಣಗಳನ್ನು ಹೊರಗೆ ಹಾಕುತ್ತವೆ. ಹೊರಗಿನಿಂದ ಹೂವಿನ ಪರಾಗ ತುಂಬಿಕೊಂಡು ತರಲು ಇವುಗಳ ಕಾಲಲ್ಲಿ ಸಣ್ಣ ಕೋಶ ಇದೆ. ದುಡಿಮೆಗಾತಿ ಜೇನ್ನೊಣಗಳ ಆಯಸ್ಸು ಸುಮಾರು ಎರಡು-ಮೂರು ತಿಂಗಳು.

ಗಂಡು ಜೇನ್ನೊಣಗಳು, ದುಡಿಮೆಗಾತಿಯರಿಗಿಂತ ದೊಡ್ಡವು; ಆದರೆ ರಾಣಿ ನೊಣಕ್ಕಿಂತ ಚಿಕ್ಕವು. ಇವಕ್ಕೆ ಕಪ್ಪು ಬಣ್ಣವಿದ್ದು, ತಲೆ ದೊಡ್ಡದು. ಇವು ಗೂಡಿನಲ್ಲಿ ಯಾವ ಕೆಲಸವನ್ನು ಮಾಡದೆ, ಕೆಲಸಗಾರ ನೊಣಗಳು ಸಂಗ್ರಹಿಸಿದ ಆಹಾರವನ್ನು ತಿಂದು ಸುಖವಾಗಿರುತ್ತವೆ.

ಜೇನು ಸಾಕಲು ಆಧುನಿಕ ರೀತಿಯ ಪೆಟ್ಟಿಗೆಗಳಿವೆ. ಹೆಚ್ಚಾಗಿ ಇವುಗಳನ್ನು ಮರದಿಂದ ಮಾಡುತ್ತಾರೆ. ಇತ್ತೀಚೆಗೆ ಗಾಜಿನ ಪೆಟ್ಟಿಗೆಗಳನ್ನು ರಚಿಸಿ ಜೇನ್ನೊಣಗಳ ಚಟುವಟಿಕೆಗಳನ್ನು ನೋಡುವ ಪ್ರಯೋಗವು ನಡೆದಿದೆ. ಇವುಗಳಲ್ಲಿ ಅಡಿಹಲಗೆ, ಸಂಸಾರದ ಕೋಣೆ, ಜೇನುತುಪ್ಪದ ಕೋಣೆ ಮತ್ತು ಮುಚ್ಚಳ ಹೀಗೆ ಮರದಿಂದ ಸಿದ್ಧಪಡಿಸಿದ ನಾಲ್ಕು ಭಾಗಗಳಿರುತ್ತವೆ. ಜೇನುಗೂಡಿನಲ್ಲಿ ಜೇನು ಹುಟ್ಟುಗಳನ್ನಿಡಬೇಕು. ತರುಣ ಜೇನ್ನೊಣಗಳ ಗುಂಪನ್ನೂ, ಚಟುವಟಿಕೆಯ ರಾಣಿಯನ್ನೂ ಚೌಕಟ್ಟಿನಲ್ಲಿ ಸೇರಿಸಿ ಸಂರಕ್ಷಿಸಬೇಕು.

ಜೇನು ಸಾಕುವ ಪೆಟ್ಟಿಗೆಯನ್ನು ಆದಷ್ಟು ನೈಸರ್ಗಿಕ ಅನುಕೂಲವುಳ್ಳ ಸ್ಥಳದಲ್ಲಿಡಬೇಕು. ಸಮಶೀತೋಷ್ಣ ಹವೆ ಇದ್ದರೆ ಒಳ್ಳೆಯದು. ಸುತ್ತಮುತ್ತ ವರ್ಷದ ಬೇರೆ ಬೇರೆ ಋತುಗಳಲ್ಲಿ ಹೂ ಬಿಡುವ ಮರಗಳಿರಬೇಕು. ನುಗ್ಗೆ, ಮಾವು, ಹೊನ್ನೆ, ನೇರಲ ಇಂಥ ಗಿಡಗಳು. ಯುರೋಪಿನ ಅನೇಕ ದೇಶಗಳಲ್ಲಿ ಹೆಚ್ಚು ಜೇನುತುಪ್ಪ ಪಡೆಯಲು ಜೇನುಗೂಡುಗಳನ್ನು ಆಗಸ್ಟ್ ತಿಂಗಳಲ್ಲಿ ದೂರ ಹೂ ಬಿಡುವ ಸಸ್ಯಗಳು ಇರುವ ಪ್ರದೇಶಕ್ಕೆ ತೆಗೆದುಕೊಂಡು ಹೋಗುತ್ತಾರೆ. ಆಸ್ಟ್ರೇಲಿಯದಲ್ಲಿ ಜೇನು ಸಾಕಾಣಿಯಲ್ಲಿ ವಲಸೆ ಹೋಗುವ ಪದ್ಧತಿ ಅನುಸರಿಸುವುದುಂಟು. ಜೇನು ಸಿಗುವ ಪ್ರದೇಶಗಳನ್ನು ಹುಡುಕುತ್ತಾ ಮೇಲಿಂದ ಮೇಲೆ ತಮ್ಮ ಜೇನ್ನೊಣಗಳ ಸ್ಥಳಗಳನ್ನು ಬದಲಿಸುತ್ತಾರೆ; ತಮ್ಮ ಜೊತೆಗೆ ಎಲ್ಲಾ ಸಾಧನಗಳನ್ನು ಒಯ್ಯುತ್ತಾರೆ.

ಬ್ಯಾಕ್ಟೀರಿಯಗಳಿಂದಲೂ, ಪರೋಪಜೀವಿಗಳಿಂದಲೂ ಜೇನ್ನೊಣಕ್ಕೆ ರೋಗ ಬರುವುದುಂಟು. ಇಲಿ, ಮರಕುಟಿಗಗಳಂತ ಜೀವಿಗಳು ಜೇನು ತೊಟ್ಟಿಯನ್ನು ಹಾಳು ಮಾಡಬಹುದು. ಜೇನು ಸಾಕಾಣೆಯಲ್ಲಿ ಈ ಅಪಾಯಗಳ ಬಗೆಗೆ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು.

ಜೇನುತುಪ್ಪ ಸಿದ್ಧವಾಗುತ್ತಿರುವ ಕಾಲದಲ್ಲಿ ರೈತನಿಗೆ ಹೊಲದಲ್ಲಿ ಕೆಲಸ ಬಹಳವಿರುವುದಿಲ್ಲ. ಆದ್ದರಿಂದ ಅವನು 25 ರಿಂದ 30 ಜೇನು ವಸಾಹತುಗಳನ್ನು ತನ್ನ ಮನೆಯ ಸುತ್ತಮುತ್ತ ಇಟ್ಟುಕೊಳ್ಳಬಹುದು. ಜೇನುತುಪ್ಪ ದೊರೆಯುವ ಸಮಯದಲ್ಲಿ ಅವನು ಹೆಚ್ಚು ಕಾಲ ದುಡಿಯಬೇಕಾಗುತ್ತದೆ.

ಹುಟ್ಟುಗಳು ಅಸ್ತವ್ಯಸ್ತವಾಗದ ರೀತಿಯಲ್ಲಿ ಜೇನುತುಪ್ಪ ಹೀರಿಕೊಳ್ಳುವ ಯಂತ್ರಗಳನ್ನು ಪಾಶ್ಚಾತ್ಯರು ತಯಾರಿಸಿದ್ದಾರೆ. ತುಪ್ಪ ತೆಗೆದ ನಂತರ ಆ ಹುಟ್ಟುಗಳನ್ನು ತಿರುಗಿ ಹುಳುಗಳಿಗೆ ಕೊಡಬಹುದು. ನಮ್ಮ ರಾಜ್ಯದ ಮಲೆನಾಡಿನಲ್ಲಿ ಜೇನುಸಾಕಣೆ ಹೆಚ್ಚು ಪ್ರಚಾರದಲ್ಲಿದೆ. ಈ ಜೇನುಸಾಕಣೆಯಿಂದ ಕಾಫಿ ತೋಟಗಳಲ್ಲಿ ಪರಾಗಣಕ್ಕೂ ಸಹಾಯವಾಗುತ್ತದೆ.


ಉದಂತ ಶಿವಕುಮಾರ
ಲೇಖಕರು
ಮೊ: 9739758558

ವಾರಭವಿಷ್ಯ

3.08.2025 ರಿಂದ 9.08.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕಟಕ, ಚಂದ್ರ-ವೃಶ್ಚಿಕ, ಧನುಸ್ಸು, ಮಕರ, ಕುಜ-ಕನ್ಯಾ, ತುಲಾ, ಬುಧ-ಕಟಕ, ಗುರು-ಮಿಥುನ, ಶುಕ್ರ-ಮಿಥುನ, ಶನಿ-ಕುಂಭ, ರಾಹು-ಕುಂಭ ಮತ್ತು ಕೇತು-ಸಿಂಹ.


ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ಈ ವಾರದಲ್ಲಿ ಜೀವನ ವೃತ್ತಿಯ ದೃಷ್ಟಿಯಿಂದ ಉತ್ತಮ ಫಲಿತಾಂಶ ಪಡೆಯುವ ಸಾಧ್ಯತೆ ಹೆಚ್ಚಾಗಿರುತ್ತದೆ. ಪ್ರತಿಯೊಂದು ರೀತಿಯ ವಹಿವಾಟು ಮಾಡುವ ಸಮಯದಲ್ಲಿ ಕಾಗದ ಪತ್ರಗಳನ್ನು ಚೆನ್ನಾಗಿ ಪರಿಶೀಲಿಸಿಕೊಳ್ಳಿ. ನಿಮ್ಮ ಪಾಲುದಾರರು ನಿಮ್ಮನ್ನು ಮೋಸಗೊಳಿಸಬಹುದು. ವಾರಾಂತ್ಯಕ್ಕೆ ಜೀವನಕ್ಕೆ ಸ್ಥಿರ ನೆಲೆಯೊಂದು ಕೂಡಿ ಬರುವುದು. ಮಾನಸಿಕ ಕ್ಲೇಶಗಳಿಂದ ಮುಕ್ತಿಯನ್ನು ಪಡೆಯುವಿರಿ.
ಶ್ರೀ ಸುಬ್ರಮಣ್ಯ ದರ್ಶನ. ಶುಭ ಸಂಖ್ಯೆ-1

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ಗ್ರಹಗತಿ ಚೆನ್ನಾಗಿದೆ. ಬಯಸಿದ್ದನ್ನು ಪಡೆದುಕೊಳ್ಳುವಿರಿ. ಸಂಬಂಧಿಗಳ ಒಡನಾಟದಿಂದ ಮಾನಸಿಕ ಹರುಷ. ನೂತನ ವಸ್ತ್ರ, ವಾಹನ, ಆಭರಣ ಖರೀದಿಸುವ ಯೋಗವಿದೆ. ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದ್ದರೆ ನಿಮ್ಮ ಪರವಾಗಿ ನಿರ್ಧಾರವನ್ನು ಪಡೆಯುವ ಸಾಧ್ಯತೆ ಇದೆ. ವಿದ್ಯಾರ್ಥಿಗಳು ಸಮಯದ ಸದುಪಯೋಗ ಮಾಡಿಕೊಂಡಲ್ಲಿ ಉನ್ನತಿಯನ್ನು ಸಾಧಿಸುವರು.
ಶ್ರೀ ಲಕ್ಷ್ಮಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-4

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ವಾರದಾರಂಭಕ್ಕೆ ನಿಮ್ಮ ಶತ್ರುಗಳ ಹಾಗೂ ಆಗದವರನ್ನು ಹಿಮ್ಮೆಟ್ಟಿಸಲು ಸಕಾಲವಾಗಿದೆ. ಹೊಸ ಉದ್ಯೋಗ ಆರಂಭಿಸುವ ನಿಮ್ಮ ಪ್ರಯತ್ನ ಮುಂದುವರೆಯಲಿ. ಕಳೆದುಕೊಂಡ ಆರೋಗ್ಯವನ್ನು ಮರಳಿ ಪಡೆಯುವಿರಿ. ಕೆಲವೊಮ್ಮೆ ಬುದ್ಧಿ ಹೀನತೆಯಿಂದ ಧನ ನಷ್ಟವಾದೀತು. ರಾಜಕೋಪ ಅಂದರೆ ಸರ್ಕಾರದ ಅವಗಣನೆ ಹಾಗೂ ದಂಡ ಪಾವತಿಯ ಸನ್ನಿವೇಶ ಎದುರಾಗುವುದು.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-6

ಕಟಕ (ಹೊ,ಹು,ಹೆ,ಡ,ಡಿ,ಡು)
ಧನಲಾಭ, ಕೀರ್ತಿ ಲಾಭಗಳಿಂದ ವಾರಕ್ಕೆ ಸ್ವಾಗತ. ಮಂಗಳಪ್ರದ ಕಾರ್ಯಗಳು ನಡೆದು ಮನಸ್ಸಿಗೆ ಸಂತೋಷ. ಕೆಲವೊಂದು ವಿಚಾರಗಳು ನಿರಾಯಾಸವಾಗಿ ಬಗೆಹರಿಯುವುದು. ತಾಮ್ರ, ಹವಳ ವಸ್ತು ಪ್ರಾಪ್ತಿ. ಅಷ್ಟಮ ಶನಿಯ ಕಾರಣ ನೆರೆಹೊರೆಯವರ ವಿರೋಧ ಎದುರಿಸಬೇಕಾದೀತು. ಕೊಡಿಟ್ಟ ಹಣ ಅನಾವ್ರಯವಾಗುವುದು. ಆರೋಗ್ಯವೂ ಅಷ್ಟಕ್ಕಷ್ಟೆ, ಶ್ವಾಸಕೋಶಕ್ಕೆ ತೊಂದರೆ.
ಶ್ರೀ ದುರ್ಗಾಷ್ಟಕ ಪಠಿಸಿ. ಶುಭ ಸಂಖ್ಯೆ-3

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ಸಪ್ತಾಹದ ಮೊದಲರ್ಧ ಯೋಚಿತ ಕೆಲಸ ಕಾರ್ಯಗಳು ಸುಲಲಿತವಾಗಿ ಸಾಗುತ್ತವೆ. ಬರಬೇಕಾದ ಹಣ ಕೈ ಸೇರುವುದು. ಆಸೆ ಪಟ್ಟ ವಸ್ತು ನಿಮ್ಮದಾಗುವುದು. ಪ್ರೇಮ ಪ್ರಸಂಗದಲ್ಲಿ ಶುಭ ಸುದ್ದಿ ಬರುವುದು. ದ್ವಿತೀಯಾರ್ಧದಲ್ಲಿ ಉದ್ಯೋಗ ನಿಮಿತ್ತ ದೂರದ ಊರುಗಳಿಗೆ ಪ್ರಯಾಣ, ಅಲ್ಲಿ ಹೊಸ ವ್ಯಕ್ತಿಗಳ ಪರಿಚಯ. ಆರೋಗ್ಯ ಕೆಡಬಹುದು. ಸ್ತ್ರೀಯರು ಮಾಂಗಲ್ಯಸರ ತೆಗೆದಿಟ್ಟು ವಾಯುವಿಹಾರ ಮಾಡಲಿ.
ಶ್ರೀ ಆದಿತ್ಯ ಹೃದಯ ಪಠಿಸಿ. ಶುಭ ಸಂಖ್ಯೆ-7

ಕನ್ಯಾ (ಟೊ,ಪ,ಪಿ,ಪು,ಫ,ಣ,ಠ,ಪೆ,ಪೊ)
ಪ್ರಯತ್ನಶೀಲತೆಯೇ ಯಶಸ್ಸಿನ ಗುಟ್ಟು. ಚಿತ್ರದಲ್ಲಿರುವ ಕುಂಬಳಕಾಯಿ ಪಲ್ಯಕ್ಕೆ ಬಾರದು. ಸಮತೋಲನವಾದ ಮನಸ್ಸು ನಿಮ್ಮ ಪ್ರಗತಿಗೆ ಹೇತುವಾಗುವುದು. ಅನವಶ್ಯಕ ಓಡಾಟಗಳಿಂದ ದೇಹ ದಣಿಯುವುದು. ವಾರದ ಉತ್ತರಾರ್ಧಕ್ಕೆ ಯತ್ನ ಕಾರ್ಯಗಳು ಸಿದ್ಧಿಸುವುದು. ಪರಿಮಳ ದ್ರವ್ಯ ಹಾಸಿಗೆ ದುಖ ದೊರೆಯುವುದು. ಇಷ್ಟ ಬಂಧು-ಮಿತ್ರರ ಭೇಟಿ ಮನಸ್ಸಿಗೆ ಮುದ ನೀಡುವುದು.
ಶ್ರೀ ವೆಂಕಟೇಶ್ವರ ಅರ್ಚನೆ. ಶುಭ ಸಂಖ್ಯೆ-9

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
'ಧೈರ್ಯವಿದ್ದವರಿಗೆ ದೈವ ಸಹಾಯ' ಎಂಬಂತೆ ಕೈ ಹಾಕಿದ ಕೆಲಸ ಕಾರ್ಯಗಳಲ್ಲಿ ಯಶಸ್ಸನ್ನು ಕಾಣುವಿರಿ. ರಾಜದರ್ಶನದಿಂದ ಕುಟುಂಬಕ್ಕೆ ಅನುಕೂಲತೆಗಳು ಒದಗಿ ಬರುವುದು. ಧನ, ವಾಹನ, ಸನ್ಮಾನಗಳಿಗೆ ಭಾಜನರಾಗುವಿರಿ. ವಿದ್ಯಾರ್ಥಿಗಳಿಗೆ ಯಶಸ್ಸು ಹಾಗೂ ಕ್ಯಾಂಪಸ್ ಸೆಲೆಕ್ಷನ್ ಆಗುವ ಸಂಭವ ಜಾಸ್ತಿ ಇದೆ. ಯಾವುದಾದರೂ ಬಹುಮಾನ ದೊರೆಯಬಹುದು. ಮಕ್ಕಳ ಚಲನವಲನದ ಬಗ್ಗೆ ಗಮನವಿಡಿ.
ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-5

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ಹೊಸ ವ್ಯವಹಾರ, ವ್ಯಾಪಾರಗಳನ್ನು ಆರಂಭಿಸಲು ಸಮಯ ಸೂಕ್ತವಾಗಿದೆ. ಮಹಿಳಾ ಮಣಿಯರು ಶೃಂಗಾರ ಸಾಧನಗಳಿಗೆ ತುಂಬಾ ಹಣ ವ್ಯಯಿಸುವರು. ವಿಹಾರ ಯಾತ್ರೆಗಳು ಸಂಭವಿಸಿ, ಅಧಿಕ ಖರ್ಚುಗಳು, ಮಾತೃಶ್ರೀಯರ ಆರೋಗ್ಯದಲ್ಲಿ ವ್ಯತ್ಯಯ. ಅನ್ಯ ಸ್ತ್ರೀಯರೊಂದಿಗೆ ಗೌರವಯುತವಾಗಿ ವರ್ತಿಸಿ, ಅನ್ಯಥಾ ಮುಜುಗರ ಅನುಭವಿಸಬೇಕಾದೀತು. ಪಿತ್ತ ಸಂಬಂಧಿ ಕಾಯಿಲೆ ಕಾಡಿಸಬಹುದು.
ಶ್ರೀ ಗುರುಸ್ತುತಿ. ಶುಭ ಸಂಖ್ಯೆ-7

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ವಾರದಾರಂಭಕ್ಕೆ ಜರೂರು ಕೆಲಸಗಳನ್ನು ಪೂರೈಸಿಕೊಳ್ಳಿ. ಗುರುದೃಷ್ಟಿಯ ಫಲವಾಗಿ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು. ಹಲವು ಮೂಲಗಳಿಂದ ಧನ ಸಂಗ್ರಹವಾಗುವುದು. ಅದರಂತೆ ಖರ್ಚು-ವೆಚ್ಚಗಳು ವೃದ್ಧಿಸುವುದು. ಸರ್ಕಾರಿ ನೌಕರರು ದುರಾಸೆಗೆ ಒಳಪಟ್ಟು ಕಾನೂನು ಕ್ರಮಕ್ಕೆ ಒಳಗಾಗುವರು. ವಾರದ ಕಡೆಗೆ ಬೇಡದ ಬಾಬ್ತುಗಳ ಮೇಲೆ ಹಣ ವ್ಯಯವಾಗುತ್ತದೆ.
ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-8


ಮಕರ (ಬೊ,ಜ,ಜಿ,ಖಿ,ಖು,ಖೆ,ಖೊ,ಗ,ಗಿ)
ಸಾಡೇಸಾತಿಯಿಂದ ಮುಕ್ತಿ ದೊರಕಿದೆ. ಶ್ರೀ ಗುರುವಿನ ಕೃಪೆಯೂ ಇದೆ. ಸಾಧಿಸಬೇಕಾದ್ದು ಅಗಾಧವಿದೆ. ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡಿ. ಸುಫಲವನ್ನು ಅನುಭವಿಸುವಿರಿ. ಧಾರ್ಮಿಕ ವಿಧಿ ಆಚರಣೆಯಿಂದ ಅಂತಃಕರಣ ಶುದ್ಧಿ, ಕೃಷಿಕರಿಗೆ ಅಧಿಕ ಬೆಳೆಯೂ, ಉತ್ತಮ ಬೆಲೆಯೂ ದೊರೆಯುವುದು. ವಾರದ ಕಡೆಗೆ ಪರೋಪಕಾರಿಗಳೆನಿಸಿ ಸಮಾಜದಲ್ಲಿ ಗೌರವ ಪ್ರಾಪ್ತಿ.
ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-3

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ಶುಭ ಸಮಾಚಾರದ ಓಲೆಯೊಂದು ಕೈ ಸೇರುವುದರೊಂದಿಗೆ ವಾರಕ್ಕೆ ಸ್ವಾಗತ. ಹಲವು ಸಮಯದಿಂದ ನನೆಗುದಿಗೆ ಬಿದ್ದಿದ್ದ ವಿಷಯಕ್ಕೆ ಮರುಚಾಲನೆ ದೊರೆಯಲಿದೆ. ಶುಭ ಗುರುವಿನ ಪರಿಣಾಮ ಮನೆಗೆ ವಾಹನ ತರುವ ಯೋಗವಿದೆ. ರಾಹು-ಕೇತುಗಳ ಪ್ರಭಾವದಿಂದ ಗುಪ್ತ ಶತ್ರುಗಳಿಂದ ತೊಂದರೆಗೆ ಒಳಗಾಗುವಿರಿ. ವಾಹನ ನಿಧಾನವಾಗಿ ಚಲಿಸಿ, ತೊಂದರೆಯನ್ನು ಆಹ್ವಾನಿಸಬೇಡಿ.
ಶ್ರೀ ಆಂಜನೇಯ ಪೂಜೆ. ಶುಭ ಸಂಖ್ಯೆ-2


ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಈ ಸಪ್ತಾಹದಲ್ಲಿ ಹೆಚ್ಚಿನ ಗ್ರಹಗಳು ದುಃಸ್ಥಾನದಲ್ಲಿರುವುದರಿಂದ ನಿಮ್ಮ ವ್ಯಾವಹಾರಿಕ ಜೀವನದಲ್ಲಿ ರೀತಿಗೆಟ್ಟರೂ ನೀತಿಗೆಡಬೇಡಿ. ಸತಿ ಪತಿಯರ ವಿವಾದಗಳು ಉಂಡು ಮಲಗುವವರೆಗೆ ಅಷ್ಟೆ. ವಾರದ ಉತ್ತರಾರ್ಧದಲ್ಲಿ ಚಂದ್ರ ಸಂಚಾರದಿಂದ ಶುಭ ವಾರ್ತೆ ಹಾಗೂ ಉತ್ತಮರ ಸಂಗ ದೊರಕುವುದು. ಸ್ತ್ರೀಯರೊಬ್ಬರ ಸಹಾಯದಿಂದ ಮನೆಗೆ ಒಳ್ಳೆಯದಾಗಲಿದೆ.
ಶ್ರೀ ನಂಜುಂಡೇಶ್ವರ ದರ್ಶನ. ಶುಭ ಸಂಖ್ಯೆ-1

ಮಕ್ಕಳ ಚಿತ್ರಕಥೆ
'ನಿನ್ನ ಹಾಗೇ ನಾನೂ ಕೂಡ ಹಸಿದಿದ್ದೇನೆ...!'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಶ್ರೀ ಕೃಷ್ಣ-ಸುಧಾಮ ಒಂದು ದಿನ ವನ ಸಂಚಾರಕ್ಕೆ ಹೋಗಿ ದಾರಿತಪ್ಪಿದರು. ಹಸಿವು ಬಾಯಾರಿಕೆಯಿಂದ ಒಂದು ಹಣ್ಣಿನ ಮರದ ಕೆಳಗೆ ಬಂದು ನಿಂತರು. ಕೃಷ್ಣ ಮರವನ್ನು ಹತ್ತಿ ಒಂದು ಹಣ್ಣನ್ನು ಕಿತ್ತುಕೊಂಡ.




ಕೃಷ್ಣ ಆ ಹಣ್ಣನ್ನು 6 ತುಂಡುಗಳಾಗಿ ಮಾಡಿ, ಅಭ್ಯಾಸದಂತೆ ಮೊದಲ ತುಂಡನ್ನು ಸುಧಾಮನಿಗೆ ಕೊಟ್ಟನು. "ತುಂಬಾ ಸ್ವಾದಿಷ್ಟಕರವಾಗಿದೆ, ಇಂತಹ ಹಣ್ಣನ್ನು ಎಂದಿಗೂ ಸೇವಿಸಿಲ್ಲ... ಇನ್ನೂ ಒಂದು ತುಣುಕನ್ನು ಕೊಡು ಎಂದನು.



ಎರಡನೇ ತುಣುಕು ಕೂಡ ಸುಧಾಮನಿಗೆ ಸಿಕ್ಕಿತು. ಹೀಗೆ ಸುಧಾಮ ಹಣ್ಣು ಸವಿಯುತ್ತಾ ಕೃಷ್ಣನನ್ನು ಮತ್ತೆ ಮತ್ತೆ ಕೇಳುತ್ತಾ ಹೋದ. ಕೃಷ್ಣ ಕೊಡುತ್ತಲೇ ಇದ್ದ. ಹೀಗೆ ಸುಧಾಮ 5 ತುಣುಕನ್ನು ತಿಂದು ಮುಗಿಸಿದ.



ಅಂತೂ ಸುಧಾಮ, ಕೊನೆಯ ತುಣುಕನ್ನೂ ಕೇಳಿದ. ಆಗ ಕೃಷ್ಣ "ಇದು ಮಿತಿ ಮೀರಿತು... ನಿನ್ನ ಹಾಗೇ ನಾನೂ ಹಸಿದಿದ್ದೇನೆ.. ಎಂದು ಹೇಳಿ ಹಣ್ಣಿನ ಕಡೆಯ ತುಂಡನ್ನು ತನ್ನ ಬಾಯಿಯೊಳಗೆ ಹಾಕಿಕೊಂಡ."



ಹಣ್ಣು ತೀವ್ರ ಕಹಿ ಇದ್ದುದರಿಂದ ತನ್ನ ಬಾಯಿಗೆ ಹಾಕಿಕೊಂಡಿದ್ದ ಹಣ್ಣಿನ ತುಂಡನ್ನು ಕೃಷ್ಣ ತಕ್ಷಣ ಉಗುಳಿಬಿಟ್ಟ ನಂತರ ಸುಧಾಮನಿಗೆ "ನಿನಗೆ ಹುಚ್ಚು ಹಿಡಿದಿಲ್ಲಾ ತಾನೆ...? ಇಂತಹ ಕಹಿ ಹಣ್ಣನ್ನು ಹೇಗೆ ತಿಂದೆ...?" ಎಂದ.



ಆಗ ಸುಧಾಮ, "ಕೃಷ್ಣಾ.... ನಿನ್ನ ಅಮೃತ ಹಸ್ತದಿಂದ ಎಷ್ಟು ಸಲ ಹಣ್ಣುಗಳನ್ನು ನಾನು ತಿಂದಿದ್ದೇನೆ.... ಈಗ ಒಂದು ಸಲ ಕಹಿ ಹಣ್ಣನ್ನು ನೀಡಿದಾಕ್ಷಣ ನಾನು ನಿನ್ನನ್ನು ದೂರುವುದು ನ್ಯಾಯವಾ....?" ಎಂದ.

ನೀತಿ :- ಸ್ನೇಹಿತರೇ, ಎಲ್ಲಿ ಸ್ನೇಹವಿದೆ. ಅಲ್ಲಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲ. ಅಂತಹ ಸಂಬಂಧ ಗಟ್ಟಿಗೊಳಿಸಿ, ಜೀವನದ ಯಾವುದೇ ಹಂತದಲ್ಲಿ ಮಿತ್ರನಿಂದ ಕಹಿ ಅನುಭವವಾದಲ್ಲಿ ಆ ಕ್ಷಣ ಮರೆತು ಮುಂದೆ ಸಾಗಿ.

ಗುರುಪುರದಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗೆ ಶಾಸಕ ಹರೀಶ್ ಗೌಡ ಗುದ್ದಲಿ ಪೂಜೆ



ಗುರುಪುರದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಪಶುವೈದ್ಯ ಆಸ್ಪತ್ರೆಗೆ ಗುದ್ದಲಿ ಪೂಜೆ ನೆರವೇರಿಸಿ ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹುಣಸೂರು, ಅ.2– ತಾಲೂಕಿನ ಗುರುಪುರದಲ್ಲಿ ಪಶು ವೈದ್ಯಕೀಯ ಆಸ್ಪತ್ರೆಗೆ ಶಾಸಕ ಜಿ.ಡಿ.ಹರೀಶ್ ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು 50 ಲಕ್ಷ ರೂ ವೆಚ್ಚದಲ್ಲಿ ಸುಸಜ್ಜಿತ ಪಶುವೈದ್ಯಕೀಯ ಆಸ್ಪತ್ರೆ ನಿರ್ಮಾಣಕ್ಕೆ ಮಂಜೂರಾತಿ ದೊರೆತಿದ್ದು, ಕಾಮಗಾರಿ ಆರಂಭಿಸಲಾಗಿದೆ. ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಿ, ಮುಕ್ತಗೊಳಿಸಲಾಗುವುದು ಎಂದು ತಿಳಿಸಿದರು.

ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು. ಜನಪ್ರತಿನಿಧಿಗಳು ಕಾಮಗಾರಿಯನ್ನು ಆಗಿಂದ್ದಾಗ್ಗೆ ಪರಿಶೀಲಿಸಿ ಅನುಪಾಲನೆ ಮಾಡಬೇಕು. ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಎಲ್ಲಾ ಸದಸ್ಯರು ಒಟ್ಟಾಗಿ ಕೆಲಸ ಮಾಡುವ ಮೂಲಕ ಪಶುವೈದ್ಯಕೀಯ ಆಸ್ಪತ್ರೆಯ ನಿರ್ಮಾಣಕ್ಕೆ ಸಹಕರಿಸಿ ಎಂದು ಶಾಸಕರು ಸೂಚಿಸಿದರು.

ಹುಣಸೂರು ತಾಲೂಕು ಗ್ರಾಮೀಣ ಭಾಗವಾಗಿದ್ದು, ಹೈನುಗಾರಿಕೆಯೇ ಪ್ರಮುಖ ವೃತ್ತಿಯಾಗಿದೆ. ಹಲವಾರು ಕುಟುಂಬಗಳು ಹೈನುಗಾರಿಕೆಯ ಮೂಲಕ ಬದುಕು ಕಟ್ಟಿಕೊಂಡಿವೆ. ರಾಸುಗಳಿಗೆ ತೊಂದರೆಯಾದಲ್ಲಿ ಕುಟುಂಬದ ಆಧಾರವೇ ಕಳಚಿಬಿದ್ದಂತಾಗುತ್ತದೆ. ಹಾಗಾಗಿ ಗ್ರಾಮಸ್ಥರು ಸತತ ಪ್ರಯತ್ನ ಮಾಡಿದ್ದರ ಫಲವಾಗಿ ಗ್ರಾಮಕ್ಕೆ ನೂತನ ಪಶುವೈದ್ಯಕೀಯ ಆಸ್ಪತ್ರೆ ಮತ್ತು ಕಟ್ಟಡ ಮಂಜೂರಾತಿ ದೊರೆತಿದೆ. ಇದರಿಂದ ಸುತ್ತಮುತ್ತಲ ಗ್ರಾಮಗಳ ರೈತರಿಗೆ ಅನುಕೂಲವಾಗುತ್ತದೆ. ವೈದ್ಯಕೀಯ ಸೇವೆ ರಾಸುಗಳಿಗೆ ತ್ವರಿತವಾಗಿ ದೊರೆಯುವಂತಾಗಲು ಉಪಯುಕ್ತವಾಗಿದೆ ಎಂದರು.

ಈ ಅವಧಿಯಲ್ಲಿ ಗ್ರಾಮಕ್ಕೆ ಕುಡಿಯುವ ನೀರು, ರಸ್ತೆ ಸೇರಿದಂತೆ ಹಲವಾರು ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ. ಗ್ರಾಮದ ಜನರ ಬಹುದಿನಗಳ ಬೇಡಿಕೆ ಯಾಗಿದ್ದ ಪಶು ವೈದ್ಯಕೀಯ ಆಸ್ಪತ್ರೆಯ ಮಂಜೂರಾಗಿದ್ದ ಗುದ್ದಲಿ ಪೂಜೆ ಮಾಡಲು ಸಾಧ್ಯವಾಗಿದೆ. ವೇಗವಾಗಿ ಮತ್ತು ಗುಣಮಟ್ಟದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪ್ರೇಮ ಬೀರೇಗೌಡ, ಪಶು ಪಾಲನೆ ಇಲಾಖೆ ಉಪ ನಿರ್ದೇಶಕ ನಾಗರಾಜ್, ಸಹಾಯಕ ನಿರ್ದೇಶಕ ಚೆನ್ನಬಸಪ್ಪ, ಡಾ.ದರ್ಶನ್ ಮುಖಂಡರಾದ ಸತೀಶ್ ಪಾಪಣ್ಣ, ಹೊಸೂರು ಅಣ್ಣಯ್ಯ, ಎಪಿಎಂಸಿ ಮಾಜಿ ಅಧ್ಯಕ್ಷ ಸುಭಾಷ್ ಸ್ವಾಮೀಗೌಡ, ಕೃಷ್ಣೇಗೌಡ ಮತ್ತಿತರರು ಮುಖಂಡರು ಹಾಜರಿದ್ದರು.

ಚೌಹಳ್ಳಿ ಗ್ರಾಮದಲ್ಲಿ ವೈಭವದ ಶನೇಶ್ವರ ಉತ್ಸವ



ಶ್ರಾವಣ ಶನಿವಾರ ಮತ್ತು ಶನೇಶ್ವರ ಸ್ವಾಮಿ ದೇವಸ್ಥಾನದ 8ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ತಿ.ನರಸೀಪುರ ತಾಲೂಕಿನ ಚೌಹಳ್ಳಿ ಗ್ರಾಮದಲ್ಲಿ ಶನೇಶ್ವರ ಸ್ವಾಮಿಯ ಉತ್ಸವ ವೈಭವದಿಂದ ನಡೆಯಿತು.

ತಿ.ನರಸೀಪುರ, ಆ.2– ತಾಲೂಕಿನ ಚೌಹಳ್ಳಿ ಗ್ರಾಮದ ಜಮೀನಿನಲ್ಲಿರುವ ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನದ 8ನೇ ವರ್ಷದ ವಾರ್ಷಿಕೋತ್ಸವ ಮತ್ತು ಎರಡನೇ ಶ್ರಾವಣ ಶನಿವಾರ ಪ್ರಯುಕ್ತ ಶನೇಶ್ವರನ ಉತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜರುಗಿತು.

ಪ್ರತಿ ಅಮಾವಾಸ್ಯೆಗಳಂದು ಈ ದೇವಾಲಯದಲ್ಲಿ ಅನ್ನಸಂತರ್ಪಣೆ ನಡೆಯಲಿದ್ದು, ಶನೇಶ್ವರನ ದೇವಾಲಯಕ್ಕೆ ವಿವಿಧ ಗ್ರಾಮಗಳಿಂದ ಭಕ್ತರು ಆಗಮಿಸಿ ಪೂಜೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಶನೇಶ್ವರ ದೇವಾಲಯದ ಮಹೇಶ್ ಗುಡ್ಡಪ್ಪ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಮೂಲಕ ಭಕ್ತರಿಗೆ ದರ್ಶನದ ಅವಕಾಶ ಕಲ್ಪಿಸಿ ಅವರ ಬೇಡಿಕೆಗಳಿಗೆ ಸ್ಪಂದಿಸುತ್ತಿದ್ದಾರೆ ಎಂಬುದು ಭಕ್ತರ ನಂಬಿಕೆಯಾಗಿದೆ.

ಜೀವನದಲ್ಲಿ ಶನಿ ದೇವರ ದಯೆ ಮತ್ತು ಶಕ್ತಿಗೆ ಹೆಚ್ಚಿನ ಪ್ರಾಮುಖ್ಯತೆ ಇದೆ, ಗ್ರಹಗಳಲ್ಲಿ ಶನಿ 7ನೇ ಸ್ಥಾನವನ್ನು ಪಡೆದಿದೆ. ನಾವು ಒಳ್ಳೆಯ ಅಥವಾ ಕೆಟ್ಟ ಆಲೋಚನೆಗಳನ್ನು ಯೋಚಿಸಿದಾಗ ಮತ್ತು ಯೋಜನೆಗಳನ್ನು ಮಾಡಿದಾಗ ಅವು ಶನಿಯ ಶಕ್ತಿಯ ಬಲದಿಂದ ಅವನನ್ನು ತಲುಪುತ್ತವೆ. ಜ್ಯೋತಿಷ್ಯ ಶಾಸ್ತ್ರದ ದೃಷ್ಟಿಯಿಂದ ಕೆಟ್ಟ ಪ್ರಭಾವವನ್ನು ದುರದೃಷ್ಟಕರವೆಂದು ಪರಿಗಣಿಸಲಾಗುತ್ತದೆ, ಆದ್ದರಿಂದ ನಾವು ಶನಿ ದೇವರನ್ನು ಶತ್ರು ಎಂದು ಭಾವಿಸದೆ ಸ್ನೇಹಿತ ಎಂದು ಅರ್ಥ ಮಾಡಿಕೊಳ್ಳಬೇಕು ಎಂದು ದೇವಸ್ಥಾನದ ಅರ್ಚಕರು ತಿಳಿಸಿದರು. ಈವೇಳೆ ಗ್ರಾಮಸ್ಥರು ಅಪಾರ ಸಂಖ್ಯೆಯಲ್ಲಿ ಸೇರಿದ್ದರು.

ಕೆಟ್ಟು ನಿಂತಿದ್ದ ಟ್ಯಾಂಕರ್‌ಗೆ ಬಸ್ ಡಿಕ್ಕಿ: ಐವರಿಗೆ ಗಂಭೀರ ಗಾಯ, ಬಸ್ ಜಖಂ



ಪೆಟ್ರೋಲ್ ಟ್ಯಾಂಕರ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ವಾಹನದ ಮುಂಭಾಗ ನುಜ್ಜುಗುಜ್ಜಾಗಿರುವುದು.

ನಂಜನಗೂಡು, ಆ.2–ಕೆಎಸ್‌ಆರ್‌ಟಿಸಿ ಬಸ್ಸೊಂದು ರಸ್ತೆ ಬದಿಯಲ್ಲಿ ಕೆಟ್ಟು ನಿಂತಿದ್ದ ಪೆಟ್ರೋಲ್ ಟ್ಯಾಂಕರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಐದು ಮಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ದೊಡ್ಡ ಕವಲಂದೆ ಸಮೀಪದ ಕೆ.ಆರ್.ಪುರ ಗೇಟ್ ಬಳಿ ಸಂಭವಿಸಿದೆ.

ಅಪಘಾತದಲ್ಲಿ ವಾಹನ ಚಾಲಕ ಗುಣಶೇಖರ್(40), ಪ್ರಯಾಣಿಕರಾದ ಕಾಗಲವಾಡಿಯ ವೀರಭದ್ರಪ್ಪ(50), ಚಾಮರಾಜನಗರದ ಜಯಸ್ವಾಮಿ(35), ಜ್ಯೋತಿ(27) ಗಾಯಗೊಂಡಿದ್ದಾರೆ. ಇವರ ಜೊತೆಗೆ 40 ವರ್ಷದ ಅಪರಿಚಿತ ಪ್ರಯಾಣಿಕ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೈಸೂರಿನಿಂದ ಚಾಮರಾಜನಗರಕ್ಕೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಶುಕ್ರವಾರ ರಾತ್ರಿ 11.30ರ ಸಮಯದಲ್ಲಿ ಕೃಷ್ಣರಾಜಪುರ ಗ್ರಾಮದ ಬಳಿ ಪೆಟ್ರೋಲ್ ಬಂಕ್ ಸಮೀಪ ಕೆಟ್ಟು ನಿಂತಿದ್ದ ಪೆಟ್ರೋಲ್ ಟ್ಯಾಂಕರ್ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಸಾರಿಗೆ ಬಸ್ಸಿನ ಮುಂಭಾಗ ಸಂಪೂರ್ಣ ಜಖಂಗೊಂಡಿದ್ದು ಬಸ್ಸಿನಲ್ಲಿದ್ದ ಚಾಲಕ ಸೇರಿದಂತೆ ಐದು ಮಂದಿಗೆ ಗಂಭೀರ ಗಾಯಗಳಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಕವಲಂದೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಗಾಯಾಳುಗಳನ್ನು ಆಂಬುಲೆನ್ಸ್ ಮೂಲಕ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರ್ಹ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ಕಲ್ಪಿಸಲು ಅದಾಲತ್



ಪಿಂಚಣಿ ಅದಾಲತ್ ಕಾರ್ಯಕ್ರಮದಲ್ಲಿ ಶಿರಸ್ತೆದಾರ್ ಶ್ರೀನಿವಾಸ್ ಅರ್ಹ ಫಲಾನುಭವಿಗಳಿಗೆ ಪಿಂಚಣಿ ಮಂಜೂರಾತಿ ಪತ್ರವನ್ನು ವಿತರಿಸಿದರು.

ನಂಜನಗೂಡು, ಆ.2– ಸಾಮಾಜಿಕ ಭದ್ರತೆ ಯೋಜನೆ ಅಡಿ ಅರ್ಹ ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ಕಲ್ಪಿಸಿ ನೆರವು ನೀಡುವ ಉದ್ದೇಶದಿಂದ ಪಿಂಚಣಿ ಅದಾಲತ್ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಿರಸ್ತೆದಾರ್ ಶ್ರೀನಿವಾಸ್ ಹೇಳಿದರು.

ನಗರದ ತಾಲೂಕು ಕಚೇರಿಯಲ್ಲಿ ನಡೆದ ಪಿಂಚಣಿ ಅದಾಲತ್ ಕಾರ್ಯಕ್ರಮದಲ್ಲಿ ಪಿಂಚಣಿ ಮಂಜೂರಾತಿ ಪತ್ರವನ್ನು ವಿತರಿಸಿ ಮಾತನಾಡಿದರು.

ವಯೋವೃದ್ಧರು ಗೌರವಯುತವಾಗಿ ಜೀವನ ಸಾಗಿಸಲು ಆರ್ಥಿಕ ನೆರವು ನೀಡುವ ಉದ್ದೇಶದಿಂದಾಗಿ ಸರ್ಕಾರ ಸಾಮಾಜಿಕ ಭದ್ರತೆ ಯೋಜನೆಯಡಿ 65 ವರ್ಷ ಮೇಲ್ಪಟ್ಟ ವಯೋವೃದ್ದರಿಗೆ ಸಂಧ್ಯಾ ಸುರಕ್ಷಾ ಯೋಜನೆಯಡಿ, 60 ವರ್ಷ ಮೇಲ್ಪಟ್ಟವರಿಗೆ ಇಂದಿರಾಗಾಂಧಿ ವೃದ್ಧಾಪ್ಯ ವೇತನ ಅಡಿಯಲ್ಲಿ ಪಿಂಚಣಿ ಸೌಲಭ್ಯವನ್ನು ನೀಡುತ್ತಿದೆ, ಅಲ್ಲದೆ ಅಂಗವಿಕಲರಿಗೆ ವಿಧವೆಯರಿಗೆ ವಿಧವಾ ವೇತನ ಸೌಲಭ್ಯ ಕಲ್ಪಿಸಲಾಗುತ್ತಿದೆ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಿ, ಪಿಂಚಣಿ ಸೌಲಭ್ಯವನ್ನು ಪಡೆಯಲು ಮುಂದಾಗಬೇಕು, ಈಗಾಗಲೇ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯುತ್ತಿದ್ದ ಫಲಾನುಭವಿಗಳು ತಾಂತ್ರಿಕ ದೋಷದಿಂದಾಗಿ ಏನಾದರೂ ಪಿಂಚಣಿ ಸೌಲಭ್ಯ ನಿಂತು ಹೋಗಿದ್ದಲ್ಲಿ ಮತ್ತೆ ಅರ್ಜಿ ಸಲ್ಲಿಸಿ ಪಿಂಚಣಿ ಸೌಲಭ್ಯವನ್ನು ಪಡೆಯಬಹುದಾಗಿದೆ, ಫಲಾನುಭವಿಗಳು ಕಚೇರಿಗೆ ಅಲೆದಾಡುವುದನ್ನು ತಪ್ಪಿಸಲು ಪಿಂಚಣಿ ಅದಾಲತ್ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದರು.

ರಾಜಸ್ವ ನಿರೀಕ್ಷಕ ಹರೀಶ್ ಮಾತನಾಡಿ ಸಂಧ್ಯಾ ಸುರಕ್ಷತ ಯೋಜನೆಯಡಿ ಇಂದು 10 ಫಲಾನುಭವಿಗಳಿಗೆ, ಇಂದಿರಾಗಾಂಧಿ ವೃದ್ಧಾಪ್ಯ ವೇತನ ಅಡಿ 13, ವಿಧವಾ ವೇತನ 7, ಅಂಗವಿಕಲ 3 ಸೇರಿದಂತೆ ಸುಮಾರು 33 ಜನರಿಗೆ ಸ್ಥಳದಲ್ಲೇ ಪಿಂಚಣಿ ಸೌಲಭ್ಯ ಮಂಜೂರಾತಿ ಪತ್ರವನ್ನು ವಿತರಿಸಲಾಗಿದೆ, ಹೊಸದಾಗಿ ಪಿಂಚಣಿ ಸೌಲಭ್ಯ ಕಲ್ಪಿಸುವಂತೆ 10 ಅರ್ಜಿಗಳು ಬಂದಿದ್ದು ಅವರಿಗೆ ಪಿಂಚಣಿ ಸೌಲಭ್ಯ ಒದಗಿಸಲಾಗುವುದು ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳಾದ ಪ್ರೀತಮ್, ಲೋಕೇಶ್, ವಿದ್ಯಾ, ವಿನಯ್, ಶಶಿ ಅರ್ಜುನ್ ರೈ, ವರುಣ್, ರಘು, ರಂಜನ ಸೇರಿದಂತೆ ಕಂದಾಯ ಇಲಾಖೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಹುಣಸೂರಿನ 14ನೇ ವಾರ್ಡಿಗೆ ನಗರಸಭಾ ಅಧ್ಯಕ್ಷರ ಭೇಟಿ



ಹುಣಸೂರು, ಅ.2– ಹುಣಸೂರು ನಗರಸಭಾ ಅಧ್ಯಕ್ಷ ಗಣೇಶ್ ಕುಮಾರ್ ಸ್ವಾಮಿ 14ನೇ ವಾರ್ಡಿನಲ್ಲಿ ನಿವಾಸಿಗಳ ಸಮಸ್ಯೆ ಆಲಿಸಿದರು. ಶಾಸಕ ಜಿ.ಡಿ.ಹರೀಶ್‌ಗೌಡರ ಸಲಹೆ ಮೇರೆಗೆ ಗಣೇಶ್ ಕುಮಾರಸ್ವಾಮಿ ಅವರು ಪೌರಾಯುಕ್ತರಾದ ಮಾನಸ ಅವರ ನೇತೃತ್ವದಲ್ಲಿ ವಾರ್ಡಿಗೆ ಭೇಟಿ ನೀಡಿದ್ದರು.

ಜನರು ಸಮರ್ಪಕ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಸರಿಯಿಲ್ಲದೆ ಇರುವುದು, ಬೀದಿ ದೀಪಗಳು ಇಲ್ಲದೆ ಇರುವುದು ಹಾಗೂ ಎಲ್ಲೆಂದರಲ್ಲಿ ಕಸದ ರಾಶಿ ಬಿದ್ದಿರುವುದನ್ನು ಗಮನಿಸಿದ ಗಣೇಶ್ ಕುಮಾರಸ್ವಾಮಿರವರು ನಗರಸಭಾ ಸಿಬ್ಬಂದಿ ವರ್ಗದವರಿಗೆ ಈ ಕೂಡಲೇ ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚಿಸಿದರು ಹಾಗೂ ಎಚ್.ಡಿ ಕೋಟೆ ಸರ್ಕಲ್‌ನಿಂದ ಒಳಚರಂಡಿ ವ್ಯವಸ್ಥೆ ವೀಕ್ಷಿಸಿ ಅದನ್ನು ಸರಿಪಡಿಸುವಂತೆ ಸೂಚಿಸಿದರು. ಇದೇ ಸಂದರ್ಭದಲ್ಲಿ ವಾರ್ಡಿನ ಸದಸ್ಯರಾದ ಶಾಹಿನ್ ತಾಜ್ ಸಿರಾಜ್, ಇಂಜಿನಿಯರ್ ವಿಭಾಗದ ಶರ್ಮಿಳಾ ಲೋಕೇಶ್ ಶಶಿಕುಮಾರ್ ಪರಿಸರ ಇಂಜಿನಿಯರ್ ಸೌಮ್ಯ ಹಾಗೂ ಶಶಿಕುಮಾರ್ ಚಂದ್ರಣ್ಣ ಸುರೇಂದ್ರ ಕೃಷ್ಣೇಗೌಡರು ರಾಚಯ್ಯ ಹಾಗೂ ವಾಟರ್ ಮ್ಯಾನ್, ಪೌರಕಾರ್ಮಿಕರು ಹಾಜರಿದ್ದರು.

ಮತ್ತೀತಾಳೇಶ್ವರ ದೇವಾಲಯಕ್ಕೆ ಕುಡಿಯುವ ನೀರಿನ ಘಟಕ ಕೊಡುಗೆ



ಶ್ರೀ ಮತ್ತೀತಾಳೇಶ್ವರ ದೇವಾಲಯಕ್ಕೆ ನೀರಿನ ಘಟಕ ನೀಡಿದ ಸೇನಾಪತಿಹಳ್ಳಿ ಪುಟ್ಟಸ್ವಾಮಿಯವರನ್ನು ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು.

ಬನ್ನೂರು: ಸೇವೆ ಮಾಡುವ ಮನಸ್ಸು ಪ್ರತಿಯೊಬ್ಬರಲ್ಲೂ ಇದ್ದಾಗ ಮಾತ್ರ ಅಭಿವೃದ್ಧಿ ಕಾಣಲು ಸಾಧ್ಯ ಅದಕ್ಕಾಗಿ ಸೇವೆಯೇ ದೇವರ ಪೂಜೆ ಎನ್ನುತ್ತಾರೆ ಎಂದು ರಾಜ್ಯ ಜೆಡಿಎಸ್ ಉಪಾಧ್ಯಕ್ಷ ವೈ.ಎಸ್.ರಾಮಸ್ವಾಮಿ ತಿಳಿಸಿದರು.

ಪಟ್ಟಣದ ಸಮೀಪದ ಹೆಗ್ಗೂರು ಗ್ರಾಮದಲ್ಲಿರುವ ಶ್ರೀ ಮತ್ತೀತಾಳೇಶ್ವರ ದೇವಾಲಯಕ್ಕೆ ಕುಡಿಯುವ ನೀರಿನ ಘಟಕ ನೀಡಿದ ಸೇನಾಪತಿಹಳ್ಳಿ ಪುಟ್ಟಸ್ವಾಮಿ ಅವರನ್ನು ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಿದ ನಂತರ ಅವರು ಮಾತನಾಡಿದರು. ಮತ್ತೀತಾಳೇಶ್ವರ ದೇವಾಲಯಕ್ಕೆ ಸ್ವ ಇಚ್ಛೆಯಿಂದ ಬಂದು, ಭಕ್ತಾದಿಗಳಿಗೆ ತುಂಬಾ ಅವಶ್ಯಕತೆ ಇರುವಂತ ಶುದ್ಧ ಕುಡಿಯುವ ನೀರಿನ ಘಟಕವನ್ನು ತಮ್ಮ ಸ್ವಂತ ಖರ್ಚಿನಲ್ಲಿ ದೇವಾಲಯಕ್ಕೆ ನಿರ್ಮಾಣ ಮಾಡಿ ಕೊಡುತ್ತಿರುವುದು ಸಂತಸದ ವಿಚಾರವಾಗಿದ್ದು, ಇದರಿಂದ ಲಕ್ಷಾಂತರ ಮಂದಿ ಭಕ್ತರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಮಾನವ ಸಂಘಜೀವಿಯಾಗಿದ್ದು, ತನ್ನ ಜೀವಿತಾವಧಿಯಲ್ಲಿ ಇಂತಹ ಪುಣ್ಯ ಕೆಲಸವನ್ನು ಮಾಡುವ ಮೂಲಕ ಮತ್ತೊಬ್ಬರಿಗೆ ಮಾದರಿಯಾಗಬೇಕು ಎಂದು ಹೇಳಿದರು. ಇಂತಹ ಪುಣ್ಯ ಕೆಲಸ ಮಾಡಿದಂತ ಭಕ್ತರ ಮನೋಭಿಲಾಷೆ ಇಡೆರಲಿ ಎಂದು ಆಶಿಸಿದರು.

ಆಡಳಿತ ಮಂಡಳಿ ಸದಸ್ಯರಾದ ಶಿವಕುಮಾರ್, ರಾಜ್ಯ ಜೆಡಿಎಸ್ ಉಪಾಧ್ಯಕ್ಷ ವೈ.ಎಸ್.ರಾಮಸ್ವಾಮಿ, ಆಡಳಿತ ಮಂಡಳಿ ಅಧ್ಯಕ್ಷ ಪ್ರದೀಪ್‌ಕುಮಾರ್, ಸದಸ್ಯರಾದ ಶಿವಕುಮಾರ್, ಹೆಚ್.ವಿ.ಶಿವಪ್ರಕಾಶ್, ಹೆಚ್.ವಿ.ರಾಜು, ಸುಜಾತ, ನಟರಾಜು, ವೆಂಕಟೇಶ್, ರೇವಣ್ಣ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸರಗೂರಲ್ಲಿ ಭೂಮಿಪುತ್ರ ಹುಟ್ಟುಹಬ್ಬ ಆಚರಣೆ



ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷರಾದ ಭೂಮಿ ಪುತ್ರ ಸಿ.ಚಂದನ್ ಗೌಡರನ್ನು ಅಭಿನಂದಿಸಿ ಹುಟ್ಟು ಹಬ್ಬದ ಶುಭಾಶಯ ಕೋರಲಾಯಿತು.

ಸರಗೂರು, ಆ.2– ರೈತನಾಯಕ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್ ಗೌಡ ಮಣ್ಣಿನ ಫಲವತ್ತತೆಗೆ ಸದಾ ಮಿಡಿಯುವ ರೈತರ ಒಡನಾಡಿ ಎಂದು ರೈತ ಮುಖಂಡ ಎಸ್.ಬಿ.ಸಮಂತ್ ತಿಳಿಸಿದರು.

ಪಟ್ಟಣದಲ್ಲಿ ತಾಲೂಕು ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘ ಸದಸ್ಯರು ಹಾಗೂ ಅಭಿಮಾನಿ ಬಳಗದ ವತಿಯಿಂದ ಭೂಮಿ ಪುತ್ರ ಸಿ.ಚಂದನ್ ಗೌಡರ ಹುಟ್ಟು ಹಬ್ಬ ಆಚರಣೆ ವೇಳೆ ಮಾತನಾಡಿ ಕಾಡಂಚಿನಲ್ಲಿ ವಾಸಿಸುತ್ತಿರುವ ರೈತರಿಗೆ ಸಮಸ್ಯೆಯಾದಗ ಅವರ ನೆರವಿಗೆ ತಕ್ಷಣ ಚಂದನ್ ಗೌಡ ಮುಂದಾಗುತ್ತಾರೆ ಎಂದರು.

ಪಟ್ಟಣದಲ್ಲಿ ಅಭಿಮಾನಿಗಳು ವಿವಿದ ಸೇವಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು, ಪಟ್ಟಣಕ್ಕೆ ಭೂಮಿ ಪುತ್ರ ಸಿ. ಚಂದನ್ ಗೌಡರು ಪಟ್ಟಣ ಪಂಚಾಯಿತಿ ಹತ್ತಿರ ಆಗಮಿಸುತ್ತಿದ್ದಂತೆ ಪಟಾಕಿ ಸಿಡಿಸಿ ಬರಮಾಡಿಕೊಂಡರು, ನಂತರ ಸನ್ಮತಿ ಪೆಟ್ರೋಲ್ ಬಂಕ್ ಮುಂಬಾಗ ಶಾಲು ಹೊದಿಸಿ ಹಾರಹಾಕಿ ಸಿಹಿ ಹಂಚಿ ಕೇಕ್ ಕಟ್ ಮಾಡಿಸಿದರು, ಸಮುದಾಯ ಆರೋಗ್ಯ ಕೇಂದ್ರಕ್ಕೆ ತೆರಳಿ ರೋಗಿಗಳಿಹೆ ಹಣ್ಣು ಹಂಪಲು ಬ್ರೆಡ್ ನೀಡಲಾಯಿತು, ತಾಯಿ ಚಿಕ್ಕದೇವಮ್ಮನ ಬೆಟ್ಟಕ್ಕೆ ತೆರಳಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಸನ್ಮತಿ ಪೆಟ್ರೋಲ್ ಬಂಕ್ ಮಾಲಕ ಬ್ರಹ್ಮದೇವಯ್ಯ, ಜಿಲ್ಲಾ ಗೌರವಾಧ್ಯಕ್ಷ ಜಿ.ಮಹದೇವಗೌಡ, ಸರಗೂರು ತಾಲೂಕು ಅಧ್ಯಕ್ಷ ಜಿ.ಸಿ.ಲೋಕೇಶ್, ಕೋಟೆ ಅಧ್ಯಕ್ಷ ಉಮೇಶ್, ಪ್ರಧಾನ ಕಾರ್ಯದರ್ಶಿ ಮಣಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸತೀಶ್ ಗೌಡ, ರೈತ ಮುಖಂಡರಾದ ಮಂಜಣ್ಣ, ಎಂ.ಡಿ.ಮಂಚಯ್ಯ, ರವಿ, ಬಸವರಾಜು, ಮಹೇಶ್, ಶಂಕರ್, ಅನಿಲ್, ಹೆಚ್.ಎಸ್.ರಮೇಶ್, ಮನು, ವಿಜಿ, ಅಶೋಕ್, ಭೈರೆಗೌಡ, ನಾಗರಾಜು, ಸತೀಶ್, ನವೀನ್, ಹರೀಶ್, ಲೋಕೇಶ್, ಸುರೇಶ್, ಪುಟ್ಟರಾಜು, ಶಿವಣ್ಣ, ನಾಗೇಶ್, ರಾಜನಾಯಕ, ಪಳನಿ ಹಾಗೂ ರೈತ ಬಾಂಧವರು, ಅಭಿಮಾನಿಗಳು ಹಾಜರಿದ್ದರು.

ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ ವಿತರಣೆ



ನಂಜನಗೂಡು: ತಾಲೂಕಿನ ವರುಣಾ ಕ್ಷೇತ್ರ ವ್ಯಾಪ್ತಿಯ ಸರಗೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಶುಕ್ರವಾರ ಆಶ್ರಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಶಾಲಾ ಸಮವಸ್ತ್ರ, ಬ್ಯಾಗ್, ಬ್ಯಾಂಡ್ಸೆಟ್, ಲೇಖನ ಸಾಮಗ್ರಿಗಳನ್ನು ವಿತರಿಸಲಾಯಿತು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ ಆಶ್ರಯ ಚಾರಿಟಬಲ್ ಟ್ರಸ್ಟ್ ಕಳೆದ ಎರಡು ವರ್ಷಗಳಿಂದ ಶಾಲೆಯ ವಿದ್ಯಾರ್ಥಿಗಳಿಗೆ ಅಗತ್ಯವಾದ ಸಮವಸ್ತ್ರ, ಲೇಖನ ಸಾಮಗ್ರಿಗಳನ್ನು ನೀಡುವ ಮೂಲಕ ಸಮಾಜಮುಖಿ ಸೇವೆ ಮಾಡುತ್ತಿದ್ದಾರೆ, ಟ್ರಸ್ಟ್ ತಗಡೂರಿನಲ್ಲಿ ಅಂಗವಿಕಲರಿಗೆ ಸಲಕರಣೆಗಳನ್ನು ವಿತರಿಸುವ ಮೂಲಕ ಸಹಾಯ ಹಸ್ತ ಚಾಚಿತ್ತು, ಇದೇ ರೀತಿ ಮುಂದೆಯೂ ಸಹ ಸಮಾಜ ಸೇವೆಯನ್ನು ಮಾಡುವ ಶಕ್ತಿಯನ್ನು ಟ್ರಸ್ಟ್‌ನ ಸಂಜಯ್ ಪಾಲ್ ಅವರಿಗೆ ಭಗವಂತ ನೀಡಲಿ ಎಂದು ಹೇಳಿದರು.

ಆಶ್ರಯ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸಂಜಯ್ ಪಾಲ್ ಮಾತನಾಡಿ ನಮ್ಮ ನಾಯಕರಾದ ರಾಜ್ಯ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷರಾದ ಎಸ್.ಸಿ.ಬಸವರಾಜ್ ಅವರ ಹುಟ್ಟೂರಿನಲ್ಲಿ ಅವರ ಆಶಯದಂತೆ ವಿದ್ಯಾರ್ಥಿಗಳಿಗೆ ನೆರವು ನೀಡಲಾಗಿದೆ, ಪ್ರತಿವರ್ಷ ಕ್ಷೇತ್ರದ 50 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವಾಗಿ ನಗದು ಪುರಸ್ಕಾರ ನೀಡಲು ಟ್ರಸ್ಟ್ ಬದ್ಧವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಹಾಸ್ಯ ರಂಗಸ್ವಾಮಿ, ಎಸ್.ಸಿ.ಬಸವರಾಜು, ಮರಿಸ್ವಾಮಿ, ಪದ್ಮನಾಭ, ಮಹದೇವಮ್ಮ, ಸುಧಾ, ಸರ್ವೇಶ, ನಾರಾಯಣ ನಾಯಕ, ಭದ್ರನಾಯಕ, ಮುಖಂಡರಾದ ಹಳ್ಳದಕೇರಿ ನಾಗರಾಜು, ಗಿರಿಧರ್, ಗುರುಪಾದು, ಮಹದೇವಸ್ವಾಮಿ ಮತ್ತೀತರರಿದ್ದರು.

ನರಸೀಪುರದಲ್ಲಿ ಮಹಿಳೆ ನಾಪತ್ತೆ

ಬಂಗಾರದ ಆಭರಣ ಬಿಚ್ಚಿಟ್ಟು ಹೋಗಿರುವ ಮಹಿಳೆ



ತಿ.ನರಸೀಪುರ, ಆ.2– ಪಟ್ಟಣದ ವಿದ್ಯಾನಗರದಲ್ಲಿ ಶನಿವಾರ ಮಹಿಳೆಯೊಬ್ಬರು ನಾಪತ್ತೆಯಾಗಿದ್ದಾರೆ.

ಎಸ್.ಕುಮಾರಸ್ವಾಮಿ ಅವರ ಪತ್ನಿ ಅನುಸೂಯ(62) ಕಾಣೆಯಾದ ಮಹಿಳೆಯಾಗಿದ್ದು, ಬೆಳಗಿನ ಜಾವ 2 ಗಂಟೆಯಲ್ಲಿ, ವಿದ್ಯಾನಗರದ ಮನೆಯಿಂದ ಹೊರ ಹೋಗಿದ್ದಾರೆ.

ಹೋಗುವಾಗ ಚಿನ್ನದ ಮಾಂಗಲ್ಯ ಸರ ಮತ್ತು ಬಳೆಗಳನ್ನು ಬಿಚ್ಚಿಟ್ಟಿದ್ದಾರೆ. ನಾವು ಎಲ್ಲಾ ಕಡೆ ಹುಡುಕಿ ವಿಚಾರಿಸಿದರೂ ಅವರು ಪತ್ತೆಯಾಗಿಲ್ಲ. ಹೋಗುವಾಗ ಹಸಿರು ಬಣ್ಣದ ಸೀರೆ, ಹಸಿರು ಬಣ್ಣದ ರವಿಕೆ ಧರಿಸಿರುತ್ತಾರೆ, ದುಂಡುಮುಖ ಗೋಧಿ ಮೈ ಬಣ್ಣ ಹೊಂದಿರುತ್ತಾರೆ. ಈ ಸಂಬಂಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈಕೆಯ ಸುಳಿವು ಸಿಕ್ಕಲ್ಲಿ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 08227–261227 ಗೆ ಮಾಹಿತಿ ನೀಡುವಂತೆ ಪೊಲೀಸ್ ಪ್ರಕಟಣೆಯಲ್ಲಿ ಕೋರಲಾಗಿದೆ.

ಕರ್ನಾಟಕ ಭೂಷಣ ಪ್ರಶಸ್ತಿ ಪುರಸ್ಕೃತರಿಗೆ ಸನ್ಮಾನ



ತಿ. ನರಸೀಪುರ ಪಟ್ಟಣದ ಖಾಸಗಿ ಬಸ್ ನಿಲ್ದಾಣ ಪಕ್ಕದಲ್ಲಿರುವ ಕಾರು ಮಾಲೀಕರು ಮತ್ತು ವಾಹನ ಚಾಲಕರ ಸಂಘದ ವತಿಯಿಂದ ಕರ್ನಾಟಕ ಭೂಷಣ ಪ್ರಶಸ್ತಿ ಪಡೆದ. ಆಲಗೋಡು ಡಾ.ಚಂದ್ರಶೇಖರ್ ಅವರನ್ನು ಬೆನಕನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾದ ಮಲ್ಲಪ್ಪ ನೇತೃತ್ವದಲ್ಲಿ ಸನ್ಮಾನಿಸಲಾಯಿತು. ರಾಜಣ್ಣ, ಶ್ರೀನಿವಾಸ್ ಗೌಡ, ಸೋಮಣ್ಣ ಮಾವಿನಹಳ್ಳಿ, ಚಂದ್ರು ಶಂಕರ್, ಮಂಜು, ಪೀಟರ್, ಸ್ವಾಮಿ, ರವಿ, ರಾಜೇಶ, ಆನಂದ, ಹಾಗೂ ಕುಮಾರ ಹಾಜರಿದ್ದರು.

ಆ.8ರಿಂದ ಆದಿವಾಸಿಗಳಿಗೆ ಆಧಾರ್ ಕಾರ್ಡ್, ಜಾತಿ, ಆದಾಯ ಪ್ರಮಾಣಪತ್ರ ಸೇರಿ ಇತರ ಸೌಲಭ್ಯ ಕಲ್ಪಿಸಲು ಐಇಸಿ ಸಭೆ

ಹೆಚ್.ಡಿ.ಕೋಟೆ: ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ವ್ಯಾಪ್ತಿಯ ಹಾಡಿಗಳಲ್ಲಿ ವಾಸಿಸುವ ಆದಿವಾಸಿ ಸಮುದಾಯದ ಜನರಿಗೆ ಹೊಸದಾಗಿ ಆಧಾರ್ ಕಾರ್ಡ್, ಜಾತಿ ಮತ್ತು ಆಧಾಯ ಪ್ರಮಾಣ ಪತ್ರ ಆಯುಷ್ಮಾನ್ ಭಾರತ್ ಕಾರ್ಡ್, ಜನ್‌ಧನ್ ಖಾತೆ, ಪಡಿತರ ಚೀಟಿ, ಸುಕನ್ಯಾ ಸಮೃದ್ಧಿ ಯೋಜನೆ ಮತ್ತು ಜಾಬ್ ಕಾರ್ಡ್‌ಗಳನ್ನು ಮಾಡಿಸಿಕೊಡಲು ಆಗಸ್ಟ್ 8 ರಿಂದ ಸೆಪ್ಟೆಂಬರ್ 10 ವರೆಗೆ ಐಇಸಿ ಕ್ಯಾಂಪ್‌ಗಳನ್ನು ಆಯೋಜಿಸಲಾಗಿದೆ. ಈ ವೇಳೆ ಫಲಾನುಭವಿಗಳು ಸಂಬಂಧಿಸಿದ ದಿನಾಂಕಗಳಂದು ಸೂಚಿಸಿದ ಕೇಂದ್ರಗಳಿಗೆ ಭೇಟಿ ನೀಡಿ ಸೌಲಭ್ಯ ಪಡೆದುಕೊಳ್ಳುವಂತೆ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕರಿ ಮಹೇಶ್ ತಿಳಿಸಿದ್ದಾರೆ.

ಚಕ್ಕೋಡನಹಳ್ಳಿ ಆ.4 ರಿಂದ 5 ರವರೆಗೆ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಬಸವನಗಿರಿ. ನಂಜಯ್ಯ– 9900996069. ಚಕ್ಕೋಡನಹಳ್ಳಿ– ಆ.6 ರಿಂದ 7 ರವರೆಗೆ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಮೇಟಿಕುಪ್ಪೆ, ನಂಜಯ್ಯ ಮೊ.ನಂ–9900996069. ಭೀಮನಹಳ್ಳಿ, ಅಣ್ಣೂರು ಮತ್ತು ಪಡುಕೋಟೆ: ಆ.11 ರಿಂದ 12 ರವರೆಗೆ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಭೀಮನಹಳ್ಳಿ. ನಾಗರಾಜ ಮೊ.ನಂ.9535689881 9535689881, ಹೀರೆಹಳ್ಳಿ ಮತ್ತು ನಾಗನಹಳ್ಳಿ ಆ.13 ರಿಂದ 14 ರವರಗೆ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಪೆಂಜಳ್ಳಿ. ಷಣ್ಮುಖ ಆರಾಧ್ಯ ಮೊ.ನಂ.7760288900, ಡಿ.ಬಿ.ಕುಪ್ಪೆ ಆ.18 ರಿಂದ 19 ರವರೆಗೆ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಡಿ.ಬಿ ಕುಪ್ಪೆ ಅಶೋಕ ಮೊ.ನಂ.9663189815, ಎನ್.ಬೆಳತ್ತೂರು ಮತ್ತು ಅಂತರಸಂತೆ: ಆ.20 ರಿಂದ 21ರವರೆಗೆ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಉದ್ದೂರು. ಅಶೋಕ ಮೊ.ನಂ.9663189815, ಎನ್.ಬೇಗೂರು 28ರಿಂದ 30 ರವರಗೆ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಜಕ್ಕಳ್ಳಿ ಶಿವಲಿಂಗನಾಯಕ ಮೋ.ನಂ.9535878355, ಎಂಸಿತಳಲು ಮತ್ತು ಹಾದನೂರು: ಸೆಪ್ಟಂಬರ್ 1ರಿಂದ 2 ರವರಗೆ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಚನ್ನಗುಂಡಿ. ಅಶೋಕ ಮೊ.ನಂ.9663189815, ಬಿ.ಮಟಕೆರೆ: ಸೆ.3 ರಿಂದ 10 ರವರಗೆ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ, ಬಿ. ಮಟಕೆರೆ. ನಂಜಯ್ಯ ಮೊ.ನಂ–9900996069 ಸಂಪರ್ಕಿಸಬಹುದು. ಈ ವೇಳೆ ವಸತಿಶಾಲೆ ಮುಖ್ಯ ಶಿಕ್ಷಕರುಗಳು ಮೇಲ್ಕಂಡ ವೇಳಾ ಪಟ್ಟಿಯಂತೆ ಸದರಿ ದಿನಾಂಕಗಳಂದು ತಮ್ಮ ಶಾಲೆಗಳಲ್ಲಿ ಕಡ್ಡಾಯವಾಗಿ ಖುದ್ದು ಹಾಜರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಸೂಚಿಸಿದ್ದಾರೆ.

ಸಿಡ್ಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟದ ಅಭಿವೃದ್ಧಿಗೆ ಕ್ರಮ



ಗುದ್ದಲಿ ಪೂಜೆ ನೆರವೇರಿಸಿ ಸಭಾ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವ ಸಚಿವ ವೆಂಕಟೇಶ್

ಬೆಟ್ಟದಪುರ, ಆ.2– ಬೆಟ್ಟದಪುರ ಐತಿಹಾಸಿಕ ಪ್ರವಾಸಿ ಕ್ಷೇತ್ರವಾಗಿದ್ದು ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಬೆಟ್ಟವು ಆಕರ್ಷಕ ಪ್ರವಾಸಿ ಕೇಂದ್ರವಾಗಿದ್ದು, ಇಲ್ಲಿಗೆ ಸಾವಿರಾರು ಪ್ರವಾಸಿಗರು ಆಗಮಿಸುವ ಹಿನ್ನೆಲೆಯಲ್ಲಿ ಬೆಟ್ಟಕ್ಕೆ ರಸ್ತೆ, ಸಾರ್ವಜನಿಕರಿಗೆ ವಸತಿಗೃಹ, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಇನ್ನಿತರ ಮೂಲಸೌಕರ್ಯ ಕಲ್ಪಿಸುವುದಾಗಿ ಸಚಿವ ಕೆ.ವೆಂಕಟೇಶ್ ತಿಳಿಸಿದ್ದಾರೆ.

ಬೆಟ್ಟದಪುರದ ಪ್ರಮುಖ ಸರ್ಕಲ್ ಅಭಿವೃದ್ಧಿ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಬೆಟ್ಟದಪುರದ ಗ್ರಾಮ ಪಂಚಾಯತಿ ವ್ಯಾಪ್ತಿಯ ಖಾಲಿ ಜಾಗದಲ್ಲಿ ಸಣ್ಣಪುಟ್ಟ ವ್ಯಾಪಾರ ಮಾಡುವವರಿಗೆ ಮಳಿಗೆಯನ್ನು ನಿರ್ಮಿಸಲು ಸರ್ಕಾರಿದಿಂದ ಅನುದಾನ ಮಂಜೂರು ಮಾಡಿಸಿಕೊಡಲಾಗುವುದು. ಪಂಚಾಯತಿಯವರು ಜಾಗವನ್ನು ಗುರುತಿಸಿ ಕೊಡುವ ಕಾರ್ಯ ಆರಂಭಿಸಬೇಕೆಂದು ಪಂಚಾಯಿತಿ ಪಿಡಿಒ ಮಂಜುನಾಥ್ ಅವರಿಗೆ ತಿಳಿಸಿದರು.

ಗ್ಯಾರಂಟಿ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಬೆಟ್ಟದಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮಾನ್ ಜಾನ್ ಬಾಬು, ಗ್ರಾಮ ಪಂಚಾಯತಿ ಅಧ್ಯಕ್ಷ ರಾಜಶೇಖರ, ಮುಖಂಡರಾದ ಕುಂಜಪ್ಪ ಕಾರ್ನಾಡ್ ಉಪಸ್ಥಿತರಿದ್ದರು.

ಸುಹಾಸ್ ಶೆಟ್ಟಿ ಹತ್ಯೆ ಕೇಸ್: 14 ಕಡೆ ಎನ್‌ಐಎ ದಾಳಿ

ಮಂಗಳೂರು, ಆ.2– ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳೂರಿನ ಬಜಪೆ ಹಾಗೂ ಸುರತ್ಕಲ್‌ನ 14 ಕಡೆ ಎನ್‌ಐಎ ದಾಳಿ ನಡೆಸಿದೆ. ಬಜಪೆ ಪೊಲೀಸ್ ಠಾಣಾ ವ್ಯಾಪ್ತಿಯ 10 ಕಡೆ, ಸುರತ್ಕಲ್ ಪೊಲೀಸ್ ಠಾಣಾ ವ್ಯಾಪ್ತಿಯ 4 ಕಡೆ ಎನ್‌ಐಎ ದಾಳಿ ಮಾಡಿದೆ. ಕೊಲೆ ಆರೋಪಿಗಳು ಹಾಗೂ ಎಸ್‌ಡಿಪಿಐ ಮುಖಂಡರ ಮನೆಗೆ ಎನ್‌ಐಎ ಅಧಿಕಾರಿ ಗಳು ದಾಳಿ ನಡೆಸಿದ್ದು, ಹಲವು ದಾಖಲೆ ಗಳನ್ನು ಪರಿಶೀಲಿಸುತ್ತಿದ್ದಾರೆ.

ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ನಿಷೇಧಿತ ಸಂಘಟನೆ ಪಿಎಫ್‌ಐ ಕಾರ್ಯಕರ್ತರು ಶಾಮೀಲಾಗಿರುವ ಆರೋಪ ಕೇಳಿಬಂದಿದೆ. ಇದರಿಂದಾಗಿ ಈ ಪ್ರಕರಣದ ತನಿಖೆಯನ್ನು ಕೇಂದ್ರಗೃಹ ಇಲಾಖೆ ಎನ್‌ಐಎ ತನಿಖೆಗೆ ಒಪ್ಪಿಸಿತ್ತು

ಮಂಜುನಾಥ್ ನಿಧನ



ಹೆಚ್.ಡಿ.ಕೋಟೆ: ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಡ್ರೈವರ್ ಮಂಜುನಾಥ್ (48) ಹೃದಯಾಘಾತದಿಂದ ಶನಿವಾರ ನಿಧನ ಹೊಂದಿದ್ದಾರೆ. ಮೃತರು ಪತ್ನಿ ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ (ಆ.3) ಬೆಳಗ್ಗೆ 11 ಗಂಟೆಗೆ ಬೀಚನಹಳ್ಳಿ ಗ್ರಾಮದ ಸಾರ್ವಜನಿಕರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಚಿಕಿತ್ಸೆಗಾಗಿ ರೋಗಿಗಳ ಬಳಿ ಹಣದ ಬೇಡಿಕೆ ಇಟ್ಟರೆ ಕಠಿಣ ಕ್ರಮ

ಮೈಸೂರಿನ ಕೆ.ಆರ್.ಆಸ್ಪತ್ರೆ ಸಿಬ್ಬಂದಿಗೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಫಣೀಂದ್ರ ಎಚ್ಚರಿಕೆ

- ವಾರ್ಡ್‌ಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ
- ರೋಗಿಗಳಿಂದ ದೂರುಗಳ ಸುರಿಮಳೆ
- ವಾರ್ಡ್‌ನಲ್ಲಿ ನಾಯಿ ಮಲಗಿರುವುದ ನೋಡಿ ಆಕ್ರೋಶ
- ಸೌಜನ್ಯದಿಂದ ವರ್ತಿಸದಿದ್ದರೆ ಸಹಿಸುವುದಿಲ್ಲವೆಂದು ಎಚ್ಚರಿಕೆ



ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಶನಿವಾರ ಭೇಟಿ ನೀಡಿದ್ದ ಉಪ ಲೋಕಾಯುಕ್ತ ಕೆ.ಎನ್.ಫಣೀಂದ್ರ ಅವರು ರೋಗಿಗಳಿಂದ ಅಹವಾಲು ಸ್ವೀಕರಿಸಿದರು.

ಮೈಸೂರು, ಆ.2(ಬಿಎಲ್‌ಯು)– ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ರೋಗಿಗಳಿಂದ ಹಣಕ್ಕೆ ಬೇಡಿಕೆ ಇಟ್ಟರೆ ಕಾನೂನು ರೀತ್ಯಾ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ಮೈಸೂರಿನ ಕೆ.ಆರ್.ಆಸ್ಪತ್ರೆಯ ಸಿಬ್ಬಂದಿಗೆ ಎಚ್ಚರಿಕೆ ನೀಡಿದರು.

ಮೈಸೂರಿನಲ್ಲಿ ಕಳೆದ ಮೂರು ದಿನಗಳ ಪ್ರವಾಸದಲ್ಲಿರುವ ಅವರು ಮೊನ್ನೆ ಹಾಗೂ ನಿನ್ನೆ ನಗರದ ಘನ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಭೇಟಿ ನಂತರ ಇಂದು ಕೆ.ಆರ್.ಆಸ್ಪತ್ರೆಗೆ ಭೇಟಿ ನೀಡಿ, ಅಲ್ಲಿನ ಅವ್ಯವಸ್ಥೆಗೆ ಸಿಬ್ಬಂದಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಆಸ್ಪತ್ರೆಯ ಕೆಲ ವಾರ್ಡ್‌ಗಳಿಗೆ ಭೇಟಿ ನೀಡಿದ ನ್ಯಾಯಮೂರ್ತಿ ಫಣೀಂದ್ರ ಅವರು, ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆಯೇ ಎಂದು ಖುದ್ದು ಪರಿಶೀಲನೆ ನಡೆಸಿದರು. ತರುವಾಯ ಸ್ಕ್ಯಾನಿಂಗ್ ಸೆಂಟರ್, ರಕ್ತ ಪರೀಕ್ಷೆ ಕೊಠಡಿಗೂ ಭೇಟಿ ನೀಡಿ ರೋಗಿಗಳ ಅಹವಾಲು ಸ್ವೀಕರಿಸಿದರು.

ಶೌಚಾಲಯದಲ್ಲಿ ಸ್ವಚ್ಛತೆ ಕಾಪಾಡಲಾಗುತ್ತಿದೆಯೇ, ಊಟದ ವ್ಯವಸ್ಥೆ ಸರಿಯಾಗಿದೆಯೇ, ವೈದ್ಯರು ಸೇರಿದಂತೆ ಸಿಬ್ಬಂದಿ ನಿಮ್ಮೊಡನೆ ಸೌಜನ್ಯಯುತವಾಗಿ ವರ್ತಿಸುತ್ತಿದ್ದಾರೆಯೇ ಎಂದು ರೋಗಿಗಳನ್ನು ಪ್ರಶ್ನಿಸಿದರು.

ಹಣ ಕೇಳ್ತಾರೆ: ಆಸ್ಪತ್ರೆ ಸಿಬ್ಬಂದಿ ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ, ಶೌಚಾಲಯ, ವಾರ್ಡ್‌ಗಳಲ್ಲಿ ಸ್ವಚ್ಛತೆ ಕಾಪಾಡುತ್ತಿಲ್ಲ ಎಂಬುದು ಸೇರಿದಂತೆ ರೋಗಿಗಳು ಉಪ ಲೋಕಾಯುಕ್ತರ ಬಳಿ ದೂರುಗಳ ಸುರಿಮಳೆಗೈದರು.

ರೋಗಿಗಳ ಈ ಆರೋಪ ಕೇಳಿ ಆಕ್ರೋಶಗೊಂಡ ನ್ಯಾಯಮೂರ್ತಿ ಫಣೀಂದ್ರ ಅವರು, ಆರ್ಥಿಕ ಸಂಕಷ್ಟದ ಕಾರಣ ಬಹಳಷ್ಟು ರೋಗಿಗಳು ಖಾಸಗಿ ಆಸ್ಪತ್ರೆಗೆ ಹೋಗದೆ ಸರ್ಕಾರಿ ಆಸ್ಪತ್ರೆಗೆ ಬರುತ್ತಾರೆ. ಆದರೆ ಈಗಾಗಲೇ ಕಷ್ಟದಲ್ಲಿರುವ ರೋಗಿಗಳಿಂದ ಮತ್ತೆ ಹಣ ವಸೂಲಿ ಮಾಡುತ್ತಿದ್ದೀರಾ. ಇನ್ನು ಮುಂದೆ ರೋಗಿಗಳ ಬಳಿ ಹಣಕ್ಕೆ ಬೇಡಿಕೆ ಇಟ್ಟರೆ ಕಾನೂನು ರೀತ್ಯಾ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ವಾರ್ಡ್‌ನಲ್ಲಿ ಮಲಗಿತ್ತು ನಾಯಿ : ವಾರ್ಡ್‌ಗಳಿಗೆ ಭೇಟಿ ನೀಡಿ ಸಾಗುವಾಗ ನಾಯಿಯೊಂದು ಅಲ್ಲಿ ಮಲಗಿರುವುದನ್ನು ನೋಡಿದ ನ್ಯಾಯಮೂರ್ತಿ ಫಣೀಂದ್ರ ಅವರು, ಸಿಬ್ಬಂದಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಇಂತಹ ಅವ್ಯವಸ್ಥೆ ಕಂಡುಬಂದರೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಮತ್ತೊಮ್ಮೆ ಎಚ್ಚರಿಸಿದರು.

ವೈದ್ಯರು ಸೇರಿದಂತೆ ಸಿಬ್ಬಂದಿ, ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವುದರ ಜೊತೆಗೆ ಸೌಜನ್ಯದಿಂದ ವರ್ತಿಸಬೇಕು. ಶೌಚಾಲಯ ಸೇರಿದಂತೆ ವಾರ್ಡ್‌ಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ರೋಗಿಗಳಿಗೆ ಯಾವುದೇ ರೀತಿಯಲ್ಲೂ ತೊಂದರೆ ಆಗದಂತೆ ಮುತುವರ್ಜಿ ವಹಿಸಬೇಕು ಎಂದು ಸೂಚನೆ ನೀಡಿದರು.

ಉಪ ಲೋಕಾಯುಕ್ತರು ಭೇಟಿ ನೀಡುವ ವಿಚಾರ ತಿಳಿದಿದ್ದರೂ ಆಸ್ಪತ್ರೆ ಸಿಬ್ಬಂದಿ ಸ್ವಚ್ಛತೆ ಕಾಪಾಡದೆ ಇರುವುದು ಅವರ ಬೇಜವಾಬ್ದಾರಿ ಸಾರಿ ಸಾರಿ ಹೇಳುವಂತಿತ್ತು.

ಈ ವೇಳೆ ಮೈಸೂರು ಮೆಡಿಕಲ್ ಕಾಲೇಜಿನ ಡೀನ್ ಹಾಗೂ ಆಸ್ಪತ್ರೆ ನಿರ್ದೇಶಕರಾದ ಡಾ.ದಾಕ್ಷಾಯಿಣಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಆರ್.ಯುಕೇಶ್‌ಕುಮಾರ್, ಆರ್‌ಎಂಓ ಡಾ.ನಯಾಜ್ ಪಾಷ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

ಕಾಮಧೇನು ಜ್ಯುಯಲರಿಯಲ್ಲಿ ವರಮಹಾಲಕ್ಷ್ಮಿ ಹಬ್ಬದ ವಿಶೇಷ ಕೊಡುಗೆ



ಮೈಸೂರು, ಆ.2– ಮೈಸೂರಿನ ಡಿ.ದೇವರಾಜ ಅರಸ್ ರಸ್ತೆಯಲ್ಲಿರುವ ಕಾಮಧೇನು ಜ್ಯುವೆಲರಿರವರು ವರಮಹಾಲಕ್ಷ್ಮಿ ಹಬ್ಬದ ಸಂಭ್ರಮಕ್ಕೆ ಮತ್ತಷ್ಟು ಮೆರುಗು ನೀಡುತ್ತಿದ್ದಾರೆ. ಜುಲೈ 31 ರಿಂದ ಆಗಸ್ಟ್ 7 ರವರೆಗೆ ಚಿನ್ನ, ಬೆಳ್ಳಿ ಮತ್ತು ವಜ್ರದ ಆಭರಣಗಳ ಮೇಲೆ ಭರ್ಜರಿ ರಿಯಾಯಿತಿ ನೀಡುತ್ತಿದ್ದಾರೆ.

ಪ್ರತಿ ಗ್ರಾಂ ಚಿನ್ನದ ಮೇಲೆ–500 ರಿಯಾಯಿತಿ, ಪ್ರತಿ ಗ್ರಾಂ ವಜ್ರದ ಮೇಲೆ ಪ್ರತಿ ಕ್ಯಾರೆಟ್‌ಗೆ –7000 ರಿಯಾಯಿತಿ ಹಾಗೂ ಪ್ರತಿ ಕೆಜಿ ಬೆಳ್ಳಿಯ ಮೇಲೆ–11500 ರಿಯಾಯಿತಿ ಜೊತೆಗೆ ಮುಂದಿನ ಖರೀದಿಗೆ ಗಿಫ್ಟ್ ಕೂಪನ್ ಕಾರ್ಡ್, ಪ್ರತಿ ಖರೀದಿಯ ಮೇಲೆ ಚಿನ್ನ ಮತ್ತು ಬೆಳ್ಳಿಯನ್ನು ಗೆಲ್ಲುವ ಅವಕಾಶ ಹಾಗೂ ನವ ವಿನ್ಯಾಸದ ಆಭರಣಗಳನ್ನು ಅತೀ ಕಡಿಮೆ ಮಜೂರಿಗೆ ಮಾಡಿಕೊಡುತ್ತಿದ್ದಾರೆ. ವರಮಹಾಲಕ್ಷ್ಮಿ ಹಬ್ಬವನ್ನು ಮತ್ತಷ್ಟು ಸಂಭ್ರಮದಿಂದ ಆಚರಿಸಲು ಒಮ್ಮೆ ಕಾಮಧೇನು ಜ್ಯುವೆಲರಿಗೆ ಭೇಟಿ ನೀಡಿ, ಮಾಹಿತಿಗೆ ಕರೆ ಮಾಡಿ – 0821–2422484, 8747036699.

ಮೈಸೂರು ಅಥ್ಲೆಟಿಕ್ಸ್ ಕ್ಲಬ್‌ಗೆ ಆಯ್ಕೆ

ಮೈಸೂರು, ಆ.2–ಮೈಸೂರು ಅಥ್ಲೆಟಿಕ್ಸ್ ಕ್ಲಬ್‌ನ 2025–26ನೇ ಸಾಲಿನ ಪದಾಧಿಕಾರಿಗಳು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಡಾ.ಸಿ.ಕೃಷ್ಣ– ಪೋಷಕರು, ಜೈನ್‌ಸಿಂಗ್ ರಾಜ್ ಪುರೋಹಿತ್–ಅಧ್ಯಕ್ಷ, ಸಿ.ಕೆ.ಮುರಳೀಧರನ್ ಮತ್ತು ಮಹದೇವಯ್ಯ–ಉಪಾಧ್ಯಕ್ಷರು, ಎಂ.ಯೋಗೇಂದ್ರ–ಕಾರ್ಯದರ್ಶಿ, ಕೆ.ಗುರುರಾಜ್–ಖಜಾಂಚಿ, ಜಿ.ಆರ್.ಪ್ರಭಾಕರ್–ಜಂಟಿ ಕಾರ್ಯದರ್ಶಿ ಮತ್ತು ತರಬೇತುದಾರ, ಹೆಚ್.ಆರ್.ರಾಮಸ್ವಾಮಿ, ಕೆ.ಗೋಪಿನಾಥ್–ಜಂಟಿ ಕಾರ್ಯದರ್ಶಿಗಳು, ಬಿ.ಕೆ.ರಾಜೇ ಅರಸ್–ಜಂಟಿ ಸಂಘಟನಾ ಕಾರ್ಯದರ್ಶಿ, ಬಿ.ಶ್ರೀಕಾಂತ್–ಸಾರ್ವಜನಿಕ ಸಂಪರ್ಕಾಧಿಕಾರಿ, ಕೆ.ಬಿ.ಗಂಗಾಧರ್–ಆರ್ಥಿಕ ಸಲಹೆಗಾರ ಮತ್ತು ಲೆಕ್ಕ ಪರಿಶೋಧಕ.

ಮೈಸೂರು ನಗರ ಸಂಚಾರ ಪೊಲೀಸರ ವಿಶೇಷ ಕಾರ್ಯಾಚರಣೆ

ದೋಷಪೂರಿತ ನಂಬರ್ ಪ್ಲೇಟ್ ಹೊಂದಿದ್ದ 166 ದ್ವಿಚಕ್ರ ವಾಹನ ವಶಕ್ಕೆ



ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ದ್ವಿಚಕ್ರ ವಾಹನಗಳಲ್ಲಿ ನಂಬರ್ ಪ್ಲೇಟ್ ಮರೆ ಮಾಡಲು ಬಳಸಿರುವ ತಂತ್ರಗಾರಿಕೆಗಳನ್ನು ನಗರ ಸಂಚಾರ ವಿಭಾಗದ ಎಸಿಪಿ ಎಂ.ಶಿವಶಂಕರ್ ನೇತೃತ್ವದಲ್ಲಿ ಪರಿಶೀಲಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು,ಆ.2(ಪಿಎಂ)– ಮೈಸೂರು ನಗರ ಸಂಚಾರ ಪೊಲೀಸರು ನಡೆಸಿದ ಎರಡು ದಿನಗಳ ವಿಶೇಷ ಕಾರ್ಯಾಚರಣೆಯಲ್ಲಿ ದೋಷಪೂರಿತ ನೋಂದಣಿ ಸಂಖ್ಯೆ ಫಲಕ (ನಂಬರ್ ಪ್ಲೇಟ್) ಅಳವಡಿಸಿಕೊಂಡು ಸಂಚರಿಸುತ್ತಿದ್ದ 166 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸಂಚಾರ ನಿಯಮ ಉಲ್ಲೇಘನೆ ವೇಳೆ ಎಐ ಕ್ಯಾಮರಾಗಳ ಕಣ್ಗಾವಲಿನಿಂದ ತಪ್ಪಿಸಿಕೊಳ್ಳಲು ನಂಬರ್ ಪ್ಲೇಟ್ ಮರೆಯಾಗುವಂತೆ ನಿಂಬೆಹಣ್ಣು ಕಟ್ಟುವುದು, ಸ್ಟಿಕ್ಕರ್ ಅಂಟಿಸುವುದು, ನಂಬರ್ ಪ್ಲೇಟ್ ತಗ್ಗಿರುವಂತೆ ಮಾಡುವುದು ಮಾತ್ರವಲ್ಲದೆ, ಮ್ಯಾಗ್ನೆಟ್ ಬಳಸಿ ನಂಬರ್ ಪ್ಲೇಟ್ ಕಾಣಿಸದಂತೆ ಮಾಡಿರುವುದು ಸೇರಿದಂತೆ ವಿವಿಧ ತಂತ್ರಗಾರಿಕೆ ಮಾಡಿರುವುದು ಕಾರ್ಯಾಚರಣೆ ವೇಳೆ ಬೆಳಕಿಗೆ ಬಂದಿದೆ. ಜೊತೆಗೆ ವಶಪಡಿಸಿಕೊಂಡಿರುವ ದ್ವಿಚಕ್ರ ವಾಹನಗಳ ಪೈಕಿ ಈ ರೀತಿ ತಂತ್ರಗಾರಿಕೆ ಮೂಲಕ ಅಪರಾಧ ಕೃತ್ಯಕ್ಕೂ ವಾಹನ ಬಳಕೆಯಾಗಿರಬಹುದೇ ಎಂಬ ನಿಟ್ಟಿನಲ್ಲೂ ಪರಿಶೀಲನೆಗೆ ಪೊಲೀಸರು ಮುಂದಾಗಿದ್ದಾರೆ.

ಅಲ್ಲದೆ, ಇದೇ ರೀತಿಯ ವಿಶೇಷ ಕಾರ್ಯಾಚರಣೆಯನ್ನು ಕಟ್ಟುನಿಟ್ಟಾಗಿ ಮುಂದುವರೆಸಲು ಮೈಸೂರು ನಗರ ಸಂಚಾರ ಪೊಲೀಸ್ ವಿಭಾಗ ಸಿದ್ಧತೆ ನಡೆಸಿದೆ. ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ಮೈಸೂರು ನಗರ ಸಂಚಾರ ಪೊಲೀಸ್ ವಿಭಾಗದ ಎಲ್ಲಾ ಐದು ಠಾಣಾ ವ್ಯಾಪ್ತಿಯಲ್ಲಿ ವಶಪಡಿಸಿಕೊಂಡಿರುವ ದ್ವಿಚಕ್ರ ವಾಹನಗಳೊಂದಿಗೆ ನಂಬರ್ ಪ್ಲೇಟ್ ಮರೆಯಾಗುವಂತೆ ಮಾಡಲು ಬಳಸಿರುವ ತಂತ್ರಗಳ ಬಗ್ಗೆ ಮೈಸೂರು ನಗರ ಸಂಚಾರ ವಿಭಾಗ ಎಸಿಪಿ ಎಂ.ಶಿವಶಂಕರ್ ಮಾಹಿತಿ ನೀಡಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಗುರುವಾರ ಮತ್ತು ಶುಕ್ರವಾರ ನಗರದ ಎಲ್ಲಾ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ದೋಷಪೂರಿತ ನಂಬರ್ ಪ್ಲೇಟ್ ಹೊಂದಿರುವ 166 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ನಂಬರ್ ಪ್ಲೇಟ್ ಮರೆ ಮಾಡುವಲ್ಲಿ ಬಹುತೇಕರ ಉದ್ದೇಶ ಸಂಚಾರ ನಿಯಮ ಉಲ್ಲಂಘನೆ ವೇಳೆ ಎಐ ಕ್ಯಾಮರಾ ಕಣ್ತಪ್ಪಿಸಿ ದಂಡದಿಂದ ಪಾರಾಗುವುದಾಗಿದೆ. ಜೊತೆಗೆ ಇಂತಹ ಪ್ರಕರಣಗಳಲ್ಲಿ ಅಪರಾಧ ಕೃತ್ಯ ನಡೆಸಿ ತಪ್ಪಿಸಿಕೊಳ್ಳುವ ಉದ್ದೇಶವೂ ಇರಬಹುದು. ಆ ನಿಟ್ಟಿನಲ್ಲಿ ಸಹ ನಾವು ಪರಿಶೀಲನೆ ಮಾಡುತ್ತಿದ್ದೇವೆ ಎಂದು ವಿವರಿಸಿದರು.

ದೇವರಾಜ ಸಂಚಾರ ಠಾಣಾ ವ್ಯಾಪ್ತಿಯಲ್ಲಿ 24 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ. ಅದೇ ರೀತಿ ಕೆಆರ್ ಠಾಣೆ ವ್ಯಾಪ್ತಿಯಲ್ಲಿ 30, ಎನ್‌ಆರ್ ಠಾಣೆ ವ್ಯಾಪ್ತಿಯಲ್ಲಿ 28, ಸಿದ್ಧಾರ್ಥನಗರ ಠಾಣಾ ವ್ಯಾಪ್ತಿಯಲ್ಲಿ 27, ವಿವಿ ಪುರಂ ಠಾಣಾ ವ್ಯಾಪ್ತಿಯಲ್ಲಿ 50ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ವಿವರಿಸಿದರು.

ದಂಡ ಪಾವತಿ ಮಾಡಿ ವಾಹನ ವಾಪಸ್ ಪಡೆಯಲು ಅವಕಾಶವಿದೆ. ಆದರೆ ಸ್ಟಿಕ್ಕರಿಂಗ್ ಮಾಡಿದ್ದರೆ ಅಂತಹ ವಾಹನ ಮಾಲೀಕರ ವಿರುದ್ಧ ಎಫ್‌ಐಆರ್ ಸಹ ಮಾಡಲಾಗುತ್ತದೆ. 500 ರೂ. ದಂಡ ಇದ್ದು, ವಶಪಡಿಸಿಕೊಂಡಿರುವ ದ್ವಿಚಕ್ರ ವಾಹನಗಳ ಪೈಕಿ ಎನ್‌ಆರ್ ಠಾಣೆ ವ್ಯಾಪ್ತಿಯ ಒಂದು ದ್ವಿಚಕ್ರ ವಾಹನ ಸಂಬಂಧ ಹಳೇ ದಂಡದ ಬಾಕಿ ಸೇರಿದಂತೆ ಒಟ್ಟಾರೆ 30 ಸಾವಿರ ರೂ. ದಂಡವಿದೆ. ಜೊತೆಗೆ ಕರ್ಕಶ ಧ್ವನಿ ಸೈಲೆಂಸರ್ ಕಂಡುಬಂದಲ್ಲಿ ಅವುಗಳನ್ನು ಕಿತ್ತು ನಾಶಪಡಿಸಲಾಗುತ್ತದೆ. ಎಫ್‌ಐಆರ್ ದಾಖಲಾಗುವ ದ್ವಿಚಕ್ರ ವಾಹನಗಳನ್ನು ಹೊರತುಪಡಿಸಿ ಉಳಿದವನ್ನು ದಂಡ ಕಟ್ಟಿಸಿಕೊಂಡು ಎಚ್ಚರಿಕೆ ನೀಡಿ ವಾಪಸ್ ನೀಡಲಾಗುತ್ತದೆ ಎಂದು ತಿಳಿಸಿದರು.

ಎನ್‌ಆರ್ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ರೇಖಾಬಾಯಿ, ದೇವರಾಜ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಮಮತಾ, ವಿವಿ ಪುರಂ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಲವ, ಸಿದ್ಧಾರ್ಥನಗರ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಶ್ರೀಧರ್, ಕೆಆರ್ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಮಹದೇವಸ್ವಾಮಿ ಸೇರಿದಂತೆ ವಿವಿಧ ಸಂಚಾರ ಠಾಣೆ ಪೊಲೀಸರು ಹಾಜರಿದ್ದರು.

ಮಲಬಾರ್ ಗೋಲ್ಡ್ ಆಂಡ್ ಡೈಮಂಡ್ಸ್‌ನ 16ನೇ ವಾರ್ಷಿಕೋತ್ಸವ ಆಚರಣೆ



ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಮಲಬಾರ್ ಗೋಲ್ಡ್ ಆಂಡ್ ಡೈಮಂಡ್ಸ್‌ನ 16ನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಈ ವೇಳೆ ಗ್ರಾಹಕರಾದ ಶ್ರೀಮತಿ ಅಮೃತವರ್ಷಿಣಿ, ಶ್ರೀಮತಿ ಶೀಲಾ ಗೋಪಾಲ್, ಶಿವಣ್ಣ, ಬಸವರಾಧ್ಯ, ಶ್ರೀಮತಿ ಬದ್ರುನ್ನಿಸಾ, ಶ್ರೀಮತಿ ಸುಜಾತ, ಮೈಸೂರು ಶೋರೂಂನ ಸ್ಟೋರ್ ಹೆಡ್ ಶರಫುದ್ದೀನ್, ಮುಹಮ್ಮದ್ ಅನ್ವಾಜ್ ಮತ್ತು ಮಲಬಾರ್ ಸಿಬ್ಬಂದಿ ಉಪಸ್ಥಿತರಿದ್ದರು.

ಯಾವುದೇ ವಿಡಿಯೋದಲ್ಲಿ ಮುಖ ತೋರಿಸದೇ ಇದ್ದರೂ ಪ್ರಜ್ವಲ್ ರೇವಣ್ಣ ಸಿಕ್ಕಿಬಿದ್ದಿದ್ದು ಹೇಗೆ?



ಬೆಂಗಳೂರು, ಆ.2– ಅತ್ಯಾಚಾರ ಕೇಸ್‌ನಲ್ಲಿ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ದೋಷಿ ಎಂದು ತೀರ್ಪು ನೀಡಿದ್ದ ಕೋರ್ಟ್, ಆತನಿಗೆ ಜೀವಾವಧಿ ಜೈಲು ಶಿಕ್ಷೆ ವಿಧಿಸಿದೆ. ಇದರ ನಡುವೆ ಈ ಪ್ರಕರಣದಲ್ಲಿ ಸುಮಾರು 2900 ವಿಡಿಯೋಗಳು 2 ಸಾವಿರಕ್ಕಿಂತ ಅಧಿಕ ಫೋಟೋಗಳು ಅವರ ಮೊಬೈಲ್‌ನಲ್ಲಿ ಸಿಕ್ಕಿದ್ದವು. ಆದರೆ, ಯಾವ ವಿಡಿಯೋದಲ್ಲೂ ಅವರ ಮುಖ ಕಂಡಿರಲಿಲ್ಲ. ಹಾಗಿದ್ದರೂ ತನಿಖೆಯ ವೇಳೆ ಇದು ಪ್ರಜ್ವಲ್ ರೇವಣ್ಣನೇ ಎಂದು ಗುರುತಿಸಲು ಸಾಧ್ಯವಾಗಿದ್ದು ಮಚ್ಚೆ ಹಾಗೂ ಎಡಗೈ ಮೇಲಿನ ಗಾಯದ ಮಾರ್ಕ್. ಅದರೊಂದಿಗೆ ತನಿಖಾ ತಂಡ ಖಚಿತವಾಗಿ ಪ್ರಜ್ವಲ್ ರೇವಣ್ಣ ಎಲ್ಲಾ ವಿಡಿಯೋಗಳನ್ನು ಬಲಗೈಯಲ್ಲಿಯೇ ಮಾಡಿದ್ದ ಎಂದು ಹೇಳಿತ್ತು.

ಹಲವಾರು ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗುವ ಸಮಯದಲ್ಲಿ ನೂರಾರು ವಿಡಿಯೋಗಳನ್ನು ಸ್ವತಃ ಚಿತ್ರೀಕರಿಸಿದ್ದರು. ಈ ಎಲ್ಲಾ ವಿಡಿಯೋಗಳು ವೈರಲ್ ಆಗಿದ್ದವು. ಇದರಲ್ಲಿ ತಮ್ಮ ಮುಖ ಎಲ್ಲಿಯೂ ಕಾಣಿಸದಂತೆ ಅವರು ಎಚ್ಚರಿಕೆ ವಹಿಸಿದ್ದರು ಎಂದು ತನಿಖಾ ತಂಡದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆದರೆ, ಪ್ರಜ್ವಲ್ ರೇವಣ್ಣ ಅದೆಷ್ಟೇ ಬುದ್ಧಿವಂತನಾಗಿದ್ದರೂ ವಿಡಿಯೋದಲ್ಲಿ ಮಾಜಿ ಸಂಸದನ ಎಡಗೈ ಮಧ್ಯದ ಬೆರಳಿನಲ್ಲಿರುವ ಮಚ್ಚೆ ಮತ್ತು ಎಡಗೈಯಲ್ಲಿ ಗಾಯದ ಗುರುತು ಸೇರಿದಂತೆ ದೇಹದ ಕೆಲವು ಭಾಗಗಳಿಂದ ಇದು ಪ್ರಜ್ವಲ್ ರೇವಣ್ಣನೇ ಎಂದು ಗುರುತಿಸಲಾಗಿತ್ತು. ಇದೆಲ್ಲವೂ ವಿಡಿಯೋಗಳಲ್ಲಿ ಗೋಚರವಾಗಿತ್ತು ಎಂದು ಲೈಂಗಿಕ ಪ್ರಕರಣಗಳ ತನಿಖೆ ನಡೆಸಿದ ಎಸ್‌ಐಟಿಯ ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣದ ತನಿಖೆ ನಡೆಸಿದ ಅಧಿಕಾರಿಗಳು, ಪ್ರಕರಣಗಳಲ್ಲಿ ಸಾಕ್ಷ್ಯಗಳನ್ನು ಸಂಗ್ರಹಿಸಲು ಜಾಗತಿಕವಾಗಿ ಅತ್ಯುತ್ತಮ ತನಿಖಾ ವಿಧಾನಗಳನ್ನು ಬಳಸಿದ್ದಾರೆ ಮತ್ತು ಡಿಎನ್‌ಎ ಪರೀಕ್ಷೆಗಳು ಅವರಿಗೆ ಶಿಕ್ಷೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡಿದೆ ಎಂದು ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ತನಿಖಾ ತಂಡವು ಜಪಾನ್ ಮತ್ತು ಟರ್ಕಿಯಂತಹ ದೇಶಗಳಲ್ಲಿ ಯಶಸ್ವಿಯಾಗಿ ಬಳಸಲಾಗುವ ತನಿಖಾ ತಂತ್ರಗಳನ್ನು ಎರವಲು ಪಡೆದುಕೊಂಡಿದೆ ಎಂದು ಮೂಲಗಳು ತಿಳಿಸಿವೆ. ಅಧಿಕಾರಿಗಳ ಪ್ರಕಾರ, ಟರ್ಕಿಯಲ್ಲಿ ನಡೆದ ಮಕ್ಕಳ ಅಶ್ಲೀಲ ಪ್ರಕರಣದಲ್ಲಿ ಈ ತಂತ್ರವನ್ನು ಬಳಸಲಾಗಿದ್ದು, ಅಲ್ಲಿ ಪುರುಷ ಜನನಾಂಗದ ಅಂಗದ ಚಿತ್ರಗಳನ್ನು ಅಪ್ರಾಪ್ತ ಬಾಲಕಿಗೆ ಕಳುಹಿಸಲಾಗಿತ್ತು.

ಈ ರೀತಿಯ ತನಿಖೆಯಲ್ಲಿ, ಶಂಕಿತನ ದೇಹದ ಭಾಗಗಳ ಫೋಟೋಗಳು, ಜನನಾಂಗಗಳಿಂದ ಹಿಡಿದು ಗಾಯದ ಗುರುತುಗಳವರೆಗೆ ಇರಬಹುದು, ಅವುಗಳನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಲಾಗುತ್ತದೆ ಮತ್ತು ಚಿತ್ರಗಳಲ್ಲಿ ಲಭ್ಯವಿರುವವುಗಳೊಂದಿಗೆ ಹೋಲಿಸಲಾಗುತ್ತದೆ ಎಂದು ಅಧಿಕಾರಿಯೊಬ್ಬರು ವಿವರಿಸಿದ್ದಾರೆ. ಭಾರತದಲ್ಲಿ ಇದೇ ಮೊದಲ ಬಾರಿಗೆ ಈ ಕೇಸ್‌ನಲ್ಲಿ ಟರ್ಕಿ ಮೂಲದ ತಂತ್ರವನ್ನು ಬಳಸಿದ್ದೇವೆ ಎಂದು ಅಧಿಕಾರಿ ತಿಳಿಸಿದ್ದಾರೆ.

ನಾವು ಪ್ರಜ್ವಲ್ ರೇವಣ್ಣ ದೇಹದ ಭಾಗಗಳು ಗೋಚರಿಸುತ್ತಿದ್ದ ಸ್ಕ್ರೀನ್ ಶಾಟ್‌ಗಳನ್ನು ತೆಗೆದುಕೊಂಡೆವು. ನಂತರ ಪ್ರಜ್ವಲ್‌ನ ಜನನಾಂಗಗಳು, ಅಂಗೈಗಳು, ಬೆರಳುಗಳು, ಕಣಕಾಲುಗಳು ಮತ್ತು ಪಾದಗಳು ಸೇರಿದಂತೆ ದೇಹದ ಭಾಗಗಳ ಫೋಟೋಗಳನ್ನು ತೆಗೆದುಕೊಂಡೆವು. ಇವು ನಿರ್ದಿಷ್ಟ ಮೂಳೆ ರಚನೆ ಮತ್ತು ಆಕಾರವನ್ನು ತೋರಿಸಿದವು ಮತ್ತು ಕಾಲ್ಬೆರಳುಗಳಲ್ಲಿ ಒಂದು ಬಾಗಿದ್ದನ್ನೂ ಕಂಡುಕೊಂಡಿದ್ದೆವು. ನಂತರ ಅವುಗಳನ್ನು ಪ್ರಕರಣಕ್ಕಾಗಿ ವಿಶೇಷವಾಗಿ ರಚಿಸಲಾದ ವಿಧಿವಿಜ್ಞಾನ, ಚರ್ಮ ರೋಗ, ಮೂತ್ರ ಶಾಸ್ತ್ರ ಮತ್ತು ಮೂಳೆಚಿಕಿತ್ಸಾ ವಿಭಾಗಗಳ ತಜ್ಞರ ತಂಡಕ್ಕೆ ಕಳುಹಿಸಲಾಯಿತು ಎಂದು ಅಧಿಕಾರಿ ವಿವರಿಸಿದರು.

ವಿಡಿಯೋದಲ್ಲಿರುವ ದೇಹದ ಭಾಗಗಳೇ ನಿಜವಾಗಿಯೂ ಇವೆ ಎಂದು ಖಚಿತಪಡಿಸಿಕೊಳ್ಳಲು ತಂಡದ ವೈದ್ಯರು ಆರೋಪಿಯನ್ನು ದೈಹಿಕವಾಗಿ ಪರೀಕ್ಷೆ ಮಾಡಿದ್ದರು. 2022ರ ಕ್ರಿಮಿನಲ್ ಪ್ರೊಸೀಜರ್ (ಗುರುತಿಸುವಿಕೆ) ಕಾಯ್ದೆಗೆ ಧನ್ಯವಾದ ಹೇಳಲೇಬೇಕು. ಇದು ಕ್ರಿಮಿನಲ್ ಗುರುತಿಸುವಿಕೆ ಮತ್ತು ತನಿಖೆಯ ಉದ್ದೇಶಕ್ಕಾಗಿ ಆರೋಪಿಗಳು, ಅಪರಾಧಿಗಳು ಮತ್ತು ಇತರ ವ್ಯಕ್ತಿಗಳ ವಿವಿಧ ರೀತಿಯ ದೇಹದ ಭಾಗಗಳ ಅಳತೆಗಳನ್ನು ಸಂಗ್ರಹಿಸಲು ನಮಗೆ ಅಧಿಕಾರವನ್ನು ಒದಗಿಸುತ್ತದೆ ಎಂದು ಅಧಿಕಾರಿ ಹೇಳಿದರು.

ಆರೋಪಿಯು ಸಣ್ಣ ಸ್ವರದಲ್ಲಿ ಮಾತನಾಡುತ್ತಿದ್ದ ಮತ್ತು ಸಂತ್ರಸ್ಥೆ ನೋವಿನಿಂದ ನರಳುತ್ತಿದ್ದ ಧ್ವನಿ ಮಾದರಿ ವಿಶ್ಲೇಷಣೆಯನ್ನು ಸಹ ನಾವು ಬಳಸಿದ್ದೇವೆ. ಸಂತ್ರಸ್ಥೆಯ ಹೇಳಿಕೆಯು ಅದನ್ನು ದೃಢಪಡಿಸಿತು. ಅದೇ ನಮ್ಮ ಪ್ರಕರಣವನ್ನು ಬಲಪಡಿಸಲು ಸಹಾಯ ಮಾಡಿತು ಎಂದು ಅಧಿಕಾರಿ ಹೇಳಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸನ್ ಆಫ್ ಸರ್ದಾರ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಎಲ್ಟುಮುತ್ತಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ಹೌಸ್ ಮೇಟ್ಸ್ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಎಲ್ಟುಮುತ್ತಾ (ಕ) + ಕೊತಲ್ವಾಡಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬೆಳ್ಳಿ ಆಭರಣ, ಪದಾರ್ಥಗಳ ಸೊಬಗು ಮೈಸೂರಿನ ವರ್ಲ್ಡ್ ಆಫ್ ಸಿಲ್ವರ್ ಮಳಿಗೆ



ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿರುವ ವರ್ಲ್ಡ್ ಆಫ್ ಸಿಲ್ವರ್' ಮಳಿಗೆ.

ಮೈಸೂರು,ಆ.2(ಪಿಎಂ)– ಬೆಳ್ಳಿ ಆಭರಣ, ಪದಾರ್ಥಗಳಲ್ಲಿ ಸೊಬಗು ಬಯಸುವವರಿಗೆ ಮೈಸೂರಿನ ದೇವರಾಜ ಅರಸು ರಸ್ತೆಯಲ್ಲಿರುವ 'ವರ್ಲ್ಡ್ ಆಫ್ ಸಿಲ್ವರ್' ಉತ್ತಮ ತಾಣವಾಗಿದೆ. ಬೆಳ್ಳಿ ಆಭರಣ ಮತ್ತು ಬೆಳ್ಳಿ ಪದಾರ್ಥಗಳಿಗೆ ಈ ಮಳಿಗೆ ಹೆಸರುವಾಸಿಯಾಗಿದ್ದು, ವಿಶಿಷ್ಟ ಕರಕುಶಲತೆಯಲ್ಲಿ ಹಾಗೂ ಸ್ಪರ್ಧಾತ್ಮಕ ಬೆಲೆಯಲ್ಲಿ ಪದಾರ್ಥಗಳನ್ನು ಇಲ್ಲಿ ಖರೀದಿಸಬಹುದು.

ದೇಶದಾದ್ಯಂತ ಪರಿಣಿತ ತಯಾರಿಕರಿಂದ ಆಭರಣ ಹಾಗೂ ಪದಾರ್ಥಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ವರ್ಲ್ಡ್ ಆಫ್ ಸಿಲ್ವರ್ ಮಳಿಗೆಯು ಗುಣಮಟ್ಟದ ಉತ್ಪನ್ನಗಳನ್ನು ಸಮರ್ಪಕ ಬೆಲೆಯಲ್ಲಿ ಗ್ರಾಹಕರು ಪಡೆದುಕೊಳ್ಳಬಹುದೆಂದು ಖಚಿತಪಡಿಸುತ್ತದೆ. ಇಟಾಲಿಯನ್ ಮತ್ತು ಪ್ರಾಚೀನ ಬೆಳ್ಳಿ ಆಭರಣಗಳಿಂದ ಹಿಡಿದು ಅನೇಕ ವಿಧದ ಬೆಳ್ಳಿ ಉತ್ಪನ್ನಗಳನ್ನು ಈ ಮಳಿಗೆ ಹೊಂದಿದೆ. ಗ್ರಾಹಕರ ವೈವಿಧ್ಯಮಯ ಅಭಿರುಚಿ ಮತ್ತು ಆದ್ಯತೆಯನ್ನು ಮಳಿಗೆ ಪೂರೈಸಲಿದೆ.

ವರ್ಲ್ಡ್ ಆಫ್ ಸಿಲ್ವರ್ ಮಳಿಗೆಯು ಕಸ್ಟಮೈಸ್ ಉಡುಗೊರೆಗೆ ಜನಪ್ರಿಯವಾಗಿದೆ. ಇದರಲ್ಲಿ ಬೆಳ್ಳಿ ಫೋಟೋ ಫ್ರೇಮ್‌ಗಳು, ಹಬ್ಬ ಮತ್ತು ವಿಶೇಷ ಸಂದರ್ಭಗಳಿಗೆ ಸೂಕ್ತವಾದ ವಿಶೇಷ ಉಡುಗೊರೆಯೂ ಸೇರಿವೆ. ಮಳಿಗೆಯು ಉತ್ಪನ್ನಗಳ ಗುಣಮಟ್ಟದಲ್ಲಿ ವಿಶೇಷ ಗಮನ ನೀಡಲಿದೆ. ವರ್ಲ್ಡ್ ಆಫ್ ಸಿಲ್ವರ್ ಸೇವೆಯನ್ನು ಗ್ರಾಹಕರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಮದುವೆಯಾಗಿರಲಿ, ಉಡುಗೊರೆಯಾಗಿರಲಿ ಅಥವಾ ವೈಯಕ್ತಿಕ ಸಂಗ್ರಹವಾಗಿರಲಿ 'ವಲ್ಡ್ ಆಫ್ ಸಿಲ್ವರ್' ಪದಾರ್ಥದ ಗುಣಮಟ್ಟ ಹಾಗೂ ಶೈಲಿಯ ಮೇಲೆ ಭರವಸೆ ನೀಡುತ್ತದೆ. ಬೆಳ್ಳಿ ಪ್ರಿಯರಿಗೆ ವರ್ಲ್ಡ್ ಆಫ್ ಸಿಲ್ವರ್ ಸ್ವಾಗತಿಸಲಿದೆ

ಪ್ರಸ್ತುತ ಮಳಿಗೆಯ ಆಕರ್ಷಕ ಕೊಡುಗೆಗಳು

- ಪ್ರತಿ ಕೆಜಿ ಬೆಳ್ಳಿ ಖರೀದಿಗೆ 10 ಸಾವಿರ ರೂ. ರಿಯಾಯಿತಿ
- 1,00,0000 ರೂ.ಗಿಂತ ಹೆಚ್ಚಿನ ಖರೀದಿಗಳ ಮೇಲೆ ವಿಶೇಷ ಹೆಚ್ಚುವರಿ ರಿಯಾಯಿತಿಗಳು
- ಬೆಳ್ಳಿ ಚೌಕಟ್ಟುಗಳು ಮತ್ತು ಬೆಳ್ಳಿ ಆಭರಣಗಳ ಮೇಲೆ ಫ್ಲಾಟ್ ಶೇ.20ರಷ್ಟು ರಿಯಾಯಿತಿ

ಒಂದನೇ ವರ್ಷದ ಸವಿನೆನಪು



ರುದ್ರಪ್ಪ
ನಿಧನ 02/08/2024

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿರುವ ತಾಯಿ ಕೆಂಚಮ್ಮ, ಶ್ರೀಮತಿ ಕವಿತಾ ಹಾಗೂ ಮಕ್ಕಳು ಮತ್ತು ಸೋಹದರ ಹಾಗೂ ಸಹೋದರಿಯರು ಬಂಧು-ಮಿತ್ರರು

4ನೇ ವರ್ಷದ ಪುಣ್ಯಸ್ಮರಣೆ



ಎಂ.ಮಹದೇವು (ರಾಜಣ್ಣ)
ನಿಧನ: 3.8.2021

ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಕೋರಿ ಸದಾ ನಿಮ್ಮನ್ನು ಸ್ಮರಿಸುತ್ತಿರುವ

ದುಃಖತಪ್ತರು:- ಧರ್ಮಪತ್ನಿ ಜಯಮ್ಮ ಮತ್ತು ಮಕ್ಕಳು, ಕುಟುಂಬವರ್ಗ, 6ನೇ ಕ್ರಾಸ್, ಅಶೋಕಪುರಂ, ಮೈಸೂರು

ಹಸಿರು ನಮ್ಮ ಉಸಿರು

ಐದನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎನ್. ರಾಜೇಂದ್ರ

(ಲೇಟ್ ನಿಂಗಯ್ಯನವರ ಮಗ)

ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ನೀವು ತೋರಿಸಿಕೊಟ್ಟ ದಾರಿಯಲ್ಲಿ ನಡೆಯುತ್ತಿರುವ ಹಾಗೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು:

ಧರ್ಮಪತ್ನಿ ಜಯಶ್ರೀ, ಮಗ-ಸೊಸೆ, ಮಗಳು-ಅಳಿಯ ಹಾಗೂ ಲೇಟ್ ಯಜಮಾನ್ ಮರಿವೇಗೌಡರು ಮತ್ತು ನಿಂಗಯ್ಯ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು

